ಬುಧವಾರ, ಜೂನ್ 29, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಣ್ಣೆತ್ತಿನ ಅಮಾವಾಸ್ಯೆ
ಕಲಬುರಗಿಯ ಶರಣಬಸವೇಶ್ವರ ಕೆರೆಯ ಬಳಿ ಮಂಗಳವಾರ ಮಣ್ಣೆತ್ತಿನ ಅಮಾವಾಸ್ಯೆ ಅಂಗವಾಗಿ ಬಣ್ಣದ ಎತ್ತಿನ ಮೂರ್ತಿಯನ್ನು ಬಾಲಕನೊಬ್ಬ ಸಂಭ್ರಮದಿಂದ ನೋಡಿದ



ಸಂಕಷ್ಟದಿಂದ ಪಾರು ಮಾಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮೊರೆ

‘ಎಸ್ಕಾಂ’ಗಳ ಸಾಲದ ಹೊರೆ ₹29 ಸಾವಿರ ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಐದು ‘ಎಸ್ಕಾಂ’ಗಳು ಅತ್ಯಂತ ಸಂಕಷ್ಟದಲ್ಲಿ ನಡೆಯುತ್ತಿದ್ದು, 2022ರ ಮಾರ್ಚ್ ಕೊನೆಗೆ ಎಸ್ಕಾಂಗಳ ಒಟ್ಟು ಸಾಲದ ಹೊರೆ ₹29,764 ಕೋಟಿಗಳಿಗೆ ಏರಿದೆ.

ಎಸ್ಕಾಂಗಳಿಗೆ ಕಾಯಕಲ್ಪ ನೀಡಲು ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ವಿದ್ಯುತ್ ವಲಯದಲ್ಲಿ ಇನ್ನಷ್ಟು ಸಂಕಷ್ಟ ಎದುರಿಸಬೇಕಾಗಬಹುದು ಎಂಬ ವಿಷಯವನ್ನು ಇಂಧನ ಇಲಾಖೆ ಹಿರಿಯ ಅಧಿಕಾರಿಗಳು ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದಾರೆ. ನಿವೃತ್ತ ಐಎಎಸ್ ಅಧಿಕಾರಿ ಜಿ. ಗುರುಚರಣ್ ಸಮಿತಿ ಮುಖ್ಯಮಂತ್ರಿಯವರಿಗೆ ಸಲ್ಲಿಸಿದ ವರದಿಯಲ್ಲಿ ಈ ಅಂಕಿ–ಅಂಶಗಳನ್ನು ನೀಡಲಾಗಿದೆ.

ಎಲ್ಲ ಎಸ್ಕಾಂಗಳ ಈವರೆಗಿನ ಒಟ್ಟು ನಷ್ಟದ ಪ್ರಮಾಣ 2020–21 ನೇ ವಾರ್ಷಿಕ ಅಂತ್ಯಕ್ಕೆ ₹9,821 ಕೋಟಿಗೇರಿದೆ. ಇದರಲ್ಲಿ 2020–21 ನೇ ಸಾಲಿನಲ್ಲಿ ಆಗಿರುವ ನಷ್ಟ ₹4,236 ಕೋಟಿಗಳಾಗಿವೆ. ವಿದ್ಯುತ್ ಖರೀದಿಯ ಬಾಕಿ ₹16,400 ಕೋಟಿಗಳಾಗಿದ್ದು, ಇದರಲ್ಲಿ ಕೆಪಿಸಿಎಲ್/ ಆರ್‌ಸಿಪಿಎಲ್‌ಗೆ ₹11,391 ಕೋಟಿ ಬಾಕಿ ಉಳಿಸಿಕೊಳ್ಳಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ವಿದ್ಯುತ್ ಪೂರೈಕೆಯ ಸರಾಸರಿ ವೆಚ್ಚಕ್ಕೂ ಗ್ರಾಹಕರ ಮೇಲೆ ವಿಧಿಸುವ ದರಕ್ಕೂ ಇರುವ ವ್ಯತ್ಯಾಸ ಪ್ರತಿ ಯುನಿಟ್‌ಗೆ 63 ಪೈಸೆಗಳಿವೆ. ಇಷ್ಟೆಲ್ಲ ಹಿನ್ನಡೆಯ ಮಧ್ಯೆಯೂ ರಾಜ್ಯದಲ್ಲಿ ವಿದ್ಯುತ್ ವಲಯದ ಬೆಳವಣಿಗೆಗೆ ಸಾಕಷ್ಟು ಅವಕಾಶಗಳಿವೆ. ಈಗಿನ ಸ್ಥಿತಿಯಿಂದ ಮೇಲೆದ್ದು, ಸುಸ್ಥಿರ ಮತ್ತು ದಕ್ಷತೆ ಹಂತವನ್ನು ತಲುಪಲು ಸಾಧ್ಯವಿದೆ ಎಂದು ಅಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ. ಇದಕ್ಕೆ ಮುಖ್ಯ ಕಾರಣಗಳನ್ನೂ ಅಧಿಕಾರಿಗಳು ಗುರುತಿಸಿದ್ದಾರೆ. ಅವು ಗಳೆಂದರೆ, ಮುಖ್ಯವಾಗಿ ಎಚ್‌ಟಿ ಬಳಕೆದಾರರಿಗೆ ಅಧಿಕ ದರ ನಿಗದಿ ಮಾಡಲಾಗಿದ್ದು, ಇದರಿಂದ ಈ ವರ್ಗ ಇಕ್ಕಟ್ಟಿಗೆ ಸಿಲುಕಿದೆ. ವಿದ್ಯುತ್ ಖರೀದಿ ದರ ಅತ್ಯಧಿಕವಾಗಿದೆ. ಈ ವಲಯದ ಹಣಕಾಸು ವ್ಯವಸ್ಥೆಯೂ ಋಣಾತ್ಮಕವಾಗಿದೆ. ಕಾರ್ಯಾಚರಣೆಯಲ್ಲಿ ಅದಕ್ಷತೆ, ವಿವಿಧ ಸಬ್ಸಿಡಿಯಡಿ ಉಚಿತ ವಿದ್ಯುತ್ ಪೂರೈಕೆ, ಮೀಟರ್ ಅಳವಡಿಸದೇ ಇರುವುದು ಮತ್ತು ಬಿಲ್ ನೀಡದೇ ಇರುವುದು (ಶೇ 45), ಅಸಮಾನತೆಯಿಂದ ಕೂಡಿದ ವಿದ್ಯುತ್ ದರ ರಚನೆ.

30ಲಕ್ಷ ಐಪಿ ಸೆಟ್‌ಗಳಿಗೆ ಮೀಟರ್ ಇಲ್ಲ: ರಾಜ್ಯದಲ್ಲಿ 10 ಎಚ್‌ಪಿಗಿಂತ ಕಡಿಮೆ ಸಾಮರ್ಥ್ಯದ ಸುಮಾರು 30 ಲಕ್ಷ ಕೃಷಿ ಪಂಪ್ ಸೆಟ್‌ಗಳಿಗೆ ಮೀಟರ್ ಅಳವಡಿಸಿಲ್ಲ, ಉಚಿತ ವಿದ್ಯುತ್ ನೀಡಲಾಗುತ್ತಿದೆ. ಇದಕ್ಕೆ ಹಣ ಹೊಂದಿಸುವುದೇ ಸರ್ಕಾರಕ್ಕೆ ಕಷ್ಟವಾಗಿದ್ದು, ಇದರಿಂದ ಹೊರ ಬರಲು ಎಲ್ಲ ಐಪಿ ಸೆಟ್‌ಗಳಿಗೆ ಮೀಟರ್ ಅಳವಡಿಸಬೇಕು ಎಂಬ ಸಲಹೆಯನ್ನು ಸರ್ಕಾರಕ್ಕೆ ನೀಡಲಾಗಿದೆ. ಅನಧಿಕೃತ ಐಪಿ ಸೆಟ್ ಅಳವಡಿಕೆಗೆ ಕಡಿವಾಣ ಹಾಕಬೇಕು ಎಂದು ಅಧಿಕಾರಿಗಳು ಮುಖ್ಯಮಂತ್ರಿಗೆ ವಿವರಿಸಿದ್ದಾರೆ.

ದರ ಹೆಚ್ಚಳಕ್ಕೆ ಸೂಚನೆ ನೀಡಿಲ್ಲ : ಸುನೀಲ್ ಕುಮಾರ್

ಬೆಂಗಳೂರು: ವಿದ್ಯುತ್ ದರ ಹೆಚ್ಚಳಕ್ಕೆ ರಾಜ್ಯ ಸರ್ಕಾರ ಯಾವುದೇ ಸೂಚನೆ ನೀಡಿಲ್ಲ. ಕಲ್ಲಿದ್ದಲು ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಮಾರುಕಟ್ಟೆ ದರ ಆಧಾರಿತ ಹೊಂದಾಣಿಕೆ ವೆಚ್ಚದಲ್ಲಿ ಮಾತ್ರ ವ್ಯತ್ಯಾಸವಾಗಿದೆ ಎಂದು ಇಂಧನ ಸಚಿವ ವಿ.ಸುನೀಲ್‌ಕುಮಾರ್ ಸ್ಪಷ್ಟಪಡಿಸಿದ್ದಾರೆ.

ವಿದ್ಯುತ್ ದರ ಪರಿಷ್ಕರಣೆಗೆ ರಾಜ್ಯ ಸರ್ಕಾರ ಮುಂದಾಗಿದೆ ಎಂಬ ಬಗ್ಗೆ ಕೆಲವೆಡೆ ತಪ್ಪು ಸಂದೇಶ ರವಾನೆಯಾಗಿದೆ. ಆದರೆ, ರಾಜ್ಯ ಸರ್ಕಾರದ ಮುಂದೆ ಆ ರೀತಿಯ ಯಾವುದೇ ಪ್ರಸ್ತಾವವಿಲ್ಲ. ವಿದ್ಯುತ್ ದರವನ್ನು ವರ್ಷದಲ್ಲಿ ಒಮ್ಮೆ ಮಾತ್ರ ಪರಿಷ್ಕರಿಸುವುದು ವಾಡಿಕೆ. ಹೀಗಾಗಿ ದರ ಹೆಚ್ಚಳದ ವದಂತಿ ಬಗ್ಗೆ ಸಾರ್ವಜನಿಕರು ಆತಂಕಗೊಳ್ಳಬೇಕಾದ ಅಗತ್ಯವಿಲ್ಲ ಎಂದು ಅವರು ಹೇಳಿದ್ದಾರೆ.

ರಾಜ್ಯದಲ್ಲಿ 13 ಉಷ್ಣ ವಿದ್ಯುತ್ ಸ್ಥಾವರಗಳಿವೆ. ಇವುಗಳ ಕಾರ್ಯ ನಿರ್ವಹಣೆಗೆ ಅಗತ್ಯವಾದ ಕಲ್ಲಿದ್ದಲು ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಅಗತ್ಯವಿರುತ್ತದೆ. ಇವುಗಳ ಮಾರುಕಟ್ಟೆ ದರದ ಏರಿಳಿತ ಆಧರಿಸಿ ಎಲ್ಲ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಹೊಂದಾಣಿಕೆ ವೆಚ್ಚ ಪರಿಷ್ಕರಣೆ ನಡೆಸುವುದು ನಿರಂತರ ಪ್ರಕ್ರಿಯೆ ಆಗಿರುತ್ತದೆ. ಈ ಸಂಬಂಧ ಎಸ್ಕಾಂಗಳು ಸಲ್ಲಿಸಿದ ಇಂಧನ ಹೊಂದಾಣಿಕೆ ವೆಚ್ಚವನ್ನು ಪರಿಷ್ಕರಿಸಿದೆ ಎಂದು ತಿಳಿಸಿದ್ದಾರೆ.

ಹೊಂದಾಣಿಕೆ ವೆಚ್ಚ ಪರಿಷ್ಕರಣೆ ಕೆಇಆರ್‌ಸಿ ವಿವೇಚನಾಧಿಕಾರವಾಗಿದ್ದು, ಕಲ್ಲಿದ್ದಲು ದರ ಆಧರಿಸಿ ಈ ಹೊಂದಾಣಿಕೆ ವೆಚ್ಚ ಹೆಚ್ಚೂ ಆಗಬಹುದು, ಕಡಿಮೆಯೂ ಆಗಬಹುದು ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ವಿದ್ಯುತ್ ಖರೀದಿಗೆ ₹39 ಸಾವಿರ ಕೋಟಿ

2022–23 ನೇ ಸಾಲಿಗೆ 71,646 ಮಿಲಿಯನ್ ಯುನಿಟ್‌ಗಳ ಖರೀದಿಗೆ ₹39,233 ಕೋಟಿ ಬೇಕಾಗುತ್ತದೆ. ಪ್ರತಿ ಯುನಿಟ್‌ನ ಸರಾಸರಿ ವೆಚ್ಚ ₹5.48. ಇದರಲ್ಲಿ 12 ಮೂಲಗಳಿಂದ 18,073 ಮಿಲಿಯನ್ ಯುನಿಟ್‌ಗಳ ಖರೀದಿಯೂ ಸೇರಿದೆ. ಇದು ಒಟ್ಟು ಖರೀದಿಯ ಶೇ 25 ರಷ್ಟು ಆಗುತ್ತದೆ. ಇದರ ಸರಾಸರಿ ವೆಚ್ಚ ಯುನಿಟ್‌ಗೆ ₹7.38 ಆಗುತ್ತದೆ ಎಂದು ಅಧಿಕಾರಿಗಳು ಮುಖ್ಯಮಂತ್ರಿಗೆ ವಿವರಿಸಿದ್ದಾರೆ.

‘ವಿದ್ಯುತ್ ದರ ಏರಿಕೆ ನಿರ್ಧಾರ ಕೈಬಿಡಿ’

ಬೆಂಗಳೂರು: ‘ಪೆಟ್ರೋಲ್, ಡೀಸೆಲ್ ಸೇರಿದಂತೆ ದಿನಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಜನತೆಗೆ ವಿದ್ಯುತ್ ದರವನ್ನೂ ಹೆಚ್ಚಿಸುವ ಮೂಲಕ ರಾಜ್ಯ ಬಿಜೆಪಿ ಸರ್ಕಾರ ಚೇತರಿಸಿಕೊಳ್ಳಲಾಗದಂಥ ಹೊಡೆತ ನೀಡಲು ಹೊರಟಿದೆ. ಇದು ಆಡಳಿತದ ವೈಫಲ್ಯಕ್ಕೆ ರಾಜ್ಯದ ಜನತೆ ತೆರಬೇಕಾಗಿರುವ ಬೆಲೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಟ್ವೀಟ್ ಮಾಡಿರುವ ಅವರು, ‘ಒಂದೆಡೆ ನಿರುದ್ಯೋಗದಿಂದಾಗಿ ಪ್ರತಿಯೊಂದು ಕುಟುಂಬದ ಆದಾಯ ಗಣನೀಯವಾಗಿ ಕಡಿಮೆಯಾಗಿದೆ. ಇನ್ನೊಂದೆಡೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ಹೀಗಾಗಿ, ವಿದ್ಯುತ್ ದರ ಏರಿಕೆ ನಿರ್ಧಾರ ಕೈಬಿಡಬೇಕು’ ಎಂದು ಆಗ್ರಹಿಸಿದ್ದಾರೆ.

‘ಚುನಾವಣೆಗಾಗಿ ದರ ಏರಿಸಿ, ಇಳಿಸುವ ಆಟ’

ಬೆಂಗಳೂರು: ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವುದರಿಂದ ಬಿಜೆಪಿ ಸರ್ಕಾರವು ವಿದ್ಯುತ್ ದರವನ್ನು ಏರಿಸಿ, ಇಳಿಸುವ ಆಟಕ್ಕೆ ಕೈಹಾಕಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ವಿದ್ಯುತ್ ದರ ಪರಿಷ್ಕರಣೆ ಸಂಬಂಧ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಸೋಮವಾರ ಆದೇಶ ಹೊರಡಿಸಿರುವ ಕುರಿತು ಮಂಗಳವಾರ ಸರಣಿ ಟ್ವೀಟ್ ಮಾಡಿರುವ ಅವರು, ‘ಈಗ ವಿದ್ಯುತ್ ದರ ಏರಿಸಿ, ಇನ್ನೇನು ಚುನಾವಣೆ ಸಮೀಪದಲ್ಲಿದೆ ಎನ್ನುವಾಗ ಇಳಿಸುವ ನಾಟಕ ಈ ಆದೇಶದ ಹಿಂದಿದೆ’ ಎಂದು ಟೀಕಿಸಿದ್ದಾರೆ.

‘ರಾಜ್ಯದಲ್ಲಿ ಬೇಡಿಕೆಗಿಂತ ಹೆಚ್ಚು ವಿದ್ಯುತ್ ಉತ್ಪಾದನೆಯಾಗುತ್ತಿದೆ ಎಂದು ಸರ್ಕಾರ ಹೇಳುತ್ತಿದೆ. ಹಾಗಿದ್ದರೆ ದರ ಏರಿಕೆ ಏಕೆ? ಇದರ ಹಿಂದಿರುವ ಹುನ್ನಾರ ಏನು? ತಿಂಗಳಿಗೆ 100 ಯೂನಿಟ್ ವಿದ್ಯುತ್ ಬಳಸುವ ಗ್ರಾಹಕರೇ ಹೆಚ್ಚು ಬೆಲೆ ತೆರಬೇಕಿದೆ. ಬಡವರು ಮತ್ತು ಮಧ್ಯಮ ವರ್ಗದ ಜನರು ವಿದ್ಯುತ್ ಬಳಸದೆ ಕತ್ತಲಲ್ಲಿ ಕೊಳೆಯಬೇಕೆ? ಗತಿಶಕ್ತಿ ಯೋಜನೆ ಮೂಲಕ ದೇಶಕ್ಕೆ ಹೊಸ ಗತಿ ಕಾಣಿಸುವುದು ಎಂದರೆ ಇದೇನಾ’ ಎಂದು ಪ್ರಶ್ನಿಸಿದ್ದಾರೆ.

ಸುದ್ದಿ 2 ನಿಮಿಷ

5,300 ಪೌರ ಕಾರ್ಮಿಕರ ಹುದ್ದೆ ಭರ್ತಿ: ಎಂಟಿಬಿ ನಾಗರಾಜ್

ಬೆಂಗಳೂರು: ಆರ್ಥಿಕ ಇಲಾಖೆಯು 5,300 ಮಂದಿ ಪೌರ ಕಾರ್ಮಿಕರ ಹುದ್ದೆಗಳ ಭರ್ತಿಗೆ ಅನುಮತಿ ನೀಡಿದ್ದು, ನೇಮಕಾತಿ ಪ್ರಕ್ರಿಯೆ ಆರಂಭಿಸುವಂತೆ ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನೇರ ಪಾವತಿ ವೇತನ ಪಡೆಯುತ್ತಿರುವ ಪೌರ ಕಾರ್ಮಿಕರ ಸೇವೆಯನ್ನು 3 ವರ್ಷಗಳಲ್ಲಿ ಹಂತ ಹಂತವಾಗಿ ಕಾಯಂಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ವಿಧಾನಸೌಧದಲ್ಲಿ ಮಂಗಳವಾರ ತಿಳಿಸಿದರು.

ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರ ಪೌರ ಕಾರ್ಮಿಕರ ಪರ ಸಹಾನುಭೂತಿ ಹೊಂದಿದೆ. ಬೇಡಿಕೆಗಳನ್ನು ಈಡೇರಿಸಲು ಬದ್ಧವಾಗಿದೆ. ಕಾರ್ಮಿಕ ಸಂಘಟನೆಗಳು ಜುಲೈ 1ರಿಂದ ಕರೆ ನೀಡಿರುವ ಅನಿರ್ದಿಷ್ಟಾವಧಿ ಮುಷ್ಕರವನ್ನು ಕೈಬಿಡಬೇಕು ಎಂದೂ ಮನವಿ ಮಾಡಿದರು.

ಪ್ರಸ್ತುತ ಜಾರಿಯಲ್ಲಿರುವ ಆರೋಗ್ಯ ವಿಮೆ ಸೌಲಭ್ಯವನ್ನು ಎಲ್ಲ ಪೌರ ಕಾರ್ಮಿಕರು ಮತ್ತು ಸ್ವಚ್ಛತಾ ನೌಕರರಿಗೂ ಅನ್ವಯವಾಗುವಂತೆ ವಿಸ್ತರಿಸುವ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

2018ರಲ್ಲಿ ರಚಿಸಲಾದ ಪೌರ ಕಾರ್ಮಿಕರ ನೇಮಕಾತಿ ವಿಶೇಷ ನಿಯಮಾವಳಿಗಳ ಮರುಪರಿಶೀಲನೆಗೆ ಅನುಕೂಲವಾಗುವಂತೆ ಈಗಾಗಲೇ ಕರ್ತವ್ಯ ದಲ್ಲಿರುವ ಪೌರ ಕಾರ್ಮಿಕರು ಮತ್ತು ಸ್ವಚ್ಛತಾ ಕಾರ್ಮಿಕರ ಸೇವಾ ವಿವರಗಳನ್ನು ಒಂದು ವಾರದ ಒಳಗೆ ಸಂಗ್ರಹಿಸಿ ಅಗತ್ಯ ಶಿಫಾರಸುಗಳೊಂದಿಗೆ ಕಡತ ಮಂಡಿಸಲು ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



‘ಚುನಾವಣೆಗೆ ಮುನ್ನ ಸಿ.ಡಿ ಬರಲಿವೆ’

ಬಾಗಲಕೋಟೆ: ‘ವಿಧಾನಸಭೆ ಚುನಾವಣೆಗೆ ಮುನ್ನ ಕೆಲವು ಸಚಿವರ ಸಿ.ಡಿಗಳು ಹೊರಬರಲಿವೆ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಮಂಗಳವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘12 ಮಂದಿ ಸಚಿವರು, ಸಂಸದ ಸದಾನಂದಗೌಡ ಸಿ.ಡಿ ಪ್ರಸಾರ ಮಾಡದಂತೆ ತಡೆಯಾಜ್ಞೆ ತಂದಿದ್ದಾರೆ. ಆದರೆ, ಮಾನವಂತರಂತೆ ಮಾತನಾಡುತ್ತಾರೆ’ ಎಂದು ಟೀಕಿಸಿದರು.

‘ಹಿಂದೆ ರಾಜ್ಯದಲ್ಲಿ ಒಬ್ಬ ಶಾಸಕರಿಗೆ ₹ 30 ಕೋಟಿ, ಒಂದು ಮಂಚ ನೀಡಿದ್ರು. ಮಹಾರಾಷ್ಟ್ರದಲ್ಲಿಯೂ ಈಗ ಅದೇ ನಡೆದಿದೆ’ ಎಂದು ಅವರು ಆರೋಪಿಸಿದರು.

‘ಕಾಂಗ್ರೆಸ್, ಬಿಜೆಪಿಯ ಹಲವರು ನಾಯಕರು ಜುಲೈ ಅಂತ್ಯಕ್ಕೆ ಜೆಡಿಎಸ್‌ಗೆ ಸೇರುವರು’ ಎಂದರು.

ಯಾರು ಸೇರುತ್ತಾರೆ ಎಂಬ ಪ್ರಶ್ನೆಗೆ ‘ತಾಳಿಕಟ್ಟದೇ ಹೆಂಡತಿ ಹೆಸರು ಹೇಳಲು ಆಗುವುದಿಲ್ಲ. ಮದುವೆಗೆ ಮಾತುಕತೆ ನಡೆದಿದೆ. ಮಂಟಪ ಸಿದ್ಧವಾಗುತ್ತಿದೆ. ಕಿತ್ತೂರು ಕರ್ನಾಟಕ ಭಾಗದ 15ಕ್ಕೂ ಹೆಚ್ಚು ನಾಯಕರು ಬರಲಿದ್ದಾರೆ’ಎಂದು ಪ್ರತಿಕ್ರಿಯಿಸಿದರು.

ಗವಿಸಿದ್ಧೇಶ್ವರ ಮಠಕ್ಕೆ ₹10 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಪ್ಪಳ ಗವಿಸಿದ್ಧೇಶ್ವರ ಮಠದ ಉಚಿತ ವಸತಿ ಮತ್ತು ಪ್ರಸಾದ ನಿಲಯ ಕಟ್ಟಡ ನಿರ್ಮಾಣಕ್ಕೆ ₹10 ಕೋಟಿ ನೀಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಣಕಾಸು ಇಲಾಖೆಗೆ ಸೂಚಿಸಿದ್ದಾರೆ.

ಕೊಪ್ಪಳ ಸಂಸದ ಸಂಗಣ್ಣ ಕರಡಿ, ಜಿಲ್ಲೆಯ ಶಾಸಕರು ಮತ್ತಿತರ ಗಣ್ಯರು ಸಲ್ಲಿಸಿದ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿಯವರು ಅನುದಾನ ಒದಗಿಸಲು ನಿರ್ದೇಶನ ನೀಡಿದರು.

ಸುಮಾರು 5 ಸಾವಿರ ವಿದ್ಯಾರ್ಥಿಗಳಿಗಾಗಿ ಮಠವು ಉಚಿತ ವಸತಿ ಮತ್ತು ಪ್ರಸಾದ ನಿಲಯವನ್ನು ನಿರ್ಮಿಸಲಾಗುತ್ತಿದೆ. ಹಲವಾರು ವರ್ಷಗಳಿಂದ ಮಠದಲ್ಲಿ ವಿದ್ಯಾರ್ಥಿಗಳಿಗೆ ದಾಸೋಹ ನೀಡಲಾಗುತ್ತಿದೆ. ಈಗ ಮಕ್ಕಳಿಗೆ ವ್ಯವಸ್ಥಿತವಾದ ಪ್ರಸಾದ ನಿಲಯದ ಅಗತ್ಯವಿದೆ ಎಂದು ಕೊಪ್ಪಳ ಜಿಲ್ಲೆಯ ಜನಪ್ರತಿನಿಧಿಗಳು ಮನವಿ ಮಾಡಿದ್ದರು.

ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ಬಿಂಬಿಸಲು ಆಪ್ತರ ಸಿದ್ಧತೆ

ಆಗಸ್ಟ್ 3ರಿಂದ ತಿಂಗಳಿಡೀ ‘ಸಿದ್ದರಾಮೋತ್ಸವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಗೆ 10 ತಿಂಗಳು ಬಾಕಿ ಇರುವಂತೆ, ಇಡೀ ರಾಜ್ಯದಲ್ಲಿ ‘ಸಿದ್ದರಾಮಯ್ಯ’ ಪರ ಅಲೆ ಸೃಷ್ಟಿಸಲು ಅವರ ಆಪ್ತ ಬಳಗ ಸದ್ದಿಲ್ಲದೆ ತಯಾರಿ ನಡೆಸಿದೆ. ತಿಂಗಳಿಡೀ ‘ಸಿದ್ದರಾಮೋತ್ಸವ’ ಹಮ್ಮಿಕೊಳ್ಳುವ ಮೂಲಕ ಮುಂದಿನ ‘ಮುಖ್ಯಮಂತ್ರಿ ಸಿದ್ದರಾಮಯ್ಯ’ ಎಂದು ಬಿಂಬಿಸಲು ಅಭಿಮಾನಿಗಳು ಭರದ ಸಿದ್ಧತೆಯಲ್ಲಿ ತೊಡಗಿದ್ದಾರೆ.

ಸಿದ್ದರಾಮಯ್ಯ ಅವರಿಗೆ ಇದೇ ಆಗಸ್ಟ್‌ನಲ್ಲಿ 75 ವರ್ಷ ತುಂಬಲಿದೆ. ಆ ಸಂಭ್ರಮವನ್ನು ಆಗಸ್ಟ್ 3ರಂದು ದಾವಣಗೆರೆಯಲ್ಲಿ ಬೃಹತ್ ಸಮಾವೇಶದ ಮೂಲಕ ಆಚರಿಸಲು ‘ಸಿದ್ದರಾಮಯ್ಯ–75 ಅಭಿನಂದನಾ ಸಮಿತಿ’ ರೂಪುರೇಷೆ ಸಿದ್ಧಪಡಿಸಿದೆ. ಈ ಸಂಬಂಧ ಕಾಂಗ್ರೆಸ್ ನಾಯಕರಾದ ಆರ್.ವಿ. ದೇಶಪಾಂಡೆ, ಎಚ್.ಸಿ. ಮಹದೇವಪ್ಪ ಸೇರಿದಂತೆ ಹಲವರು ಜತೆಗೂಡಿ ಚರ್ಚೆ ನಡೆಸಿದ್ದಾರೆ.

ಈ ಸಮಾವೇಶಕ್ಕೆ 6 ಲಕ್ಷಕ್ಕೂ ಹೆಚ್ಚು ಮಂದಿ ಸೇರಿಸಲು ಸಿದ್ಧತೆ ನಡೆದಿದೆ. ಬೃಹತ್ ಶಕ್ತಿ ಪ್ರದರ್ಶನದ ಮೂಲಕ ಸ್ಪಷ್ಟ ಸಂದೇಶವೊಂದನ್ನು ರವಾನಿಸುವುದು ಸಿದ್ದರಾಮಯ್ಯ ಅವರಿಗೆ ಆಪ್ತರಾಗಿರುವ ಹಾಲಿ ಶಾಸಕರ, ಮಾಜಿ ಶಾಸಕರ ಲೆಕ್ಕಾಚಾರ. ಎಐಸಿಸಿ ನಾಯಕರಾದ ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್, ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೀಗೆ ರಾಜ್ಯದ ಎಲ್ಲ ನಾಯಕರು ಇದರಲ್ಲಿ ಭಾಗವಹಿಸಲಿದ್ದಾರೆ. ನಂತರದ ಒಂದು ತಿಂಗಳು (ಆಗಸ್ಟ್ 3ರಿಂದ ಸೆ. 3ರವರೆಗೆ) ರಾಜ್ಯದಾದ್ಯಂತ ಜಿಲ್ಲಾ ಮತ್ತು ವಿಧಾನಸಭಾ ಕ್ಷೇತ್ರವಾರು ‘ಸಿದ್ದರಾಮೋತ್ಸವ’ ಹಮ್ಮಿಕೊಳ್ಳಲು ಅವರ ಅಭಿಮಾನಿ ವರ್ಗ ನಿರ್ಧರಿಸಿದೆ.

ಸಿದ್ದರಾಮಯ್ಯ ಕುರಿತ ಸಾಕ್ಷ್ಯ ಚಿತ್ರ ತಯಾರಿಸಿ ಪ್ರದರ್ಶಿಸಲು ಕೂಡಾ ಉದ್ದೇಶಿಸಲಾಗಿದೆ. ಸಮಾವೇಶಗಳು, ವಿಚಾರಸಂಕಿರಣಗಳು, ಛಾಯಾಚಿತ್ರಗಳ ಪ್ರದರ್ಶನಗಳ ಮೂಲಕ ಅವರ ಜನಪರ ಯೋಜನೆಗಳು, ಆಡಳಿತ ವೈಖರಿಯನ್ನು ರಾಜ್ಯಮಟ್ಟದಿಂದ ಹೋಬಳಿವರೆಗೆ ಪರಿಚಯಿಸಲಾಗುವುದು. ಆ ಮೂಲಕ, ಹಿಂದುಳಿದ, ದಲಿತ, ಅಲ್ಪಸಂಖ್ಯಾತ ಸಮುದಾಯಗಳಿಗೆ ನೀಡಿದ ಕೊಡುಗೆಗಳನ್ನು ನೆನಪಿಸುವುದು ಇದರ ಉದ್ದೇಶ ಎಂದು ಮೂಲಗಳು ಹೇಳಿವೆ.

ಪಕ್ಷಾತೀತ ಕಾರ್ಯಕ್ರಮ

‘ಸಿದ್ದರಾಮೋತ್ಸವ’ವನ್ನು ಪಕ್ಷಾತೀತವಾಗಿ ನಡೆಸಲು ಅವರ ಅಭಿಮಾನಿ ಸಮೂಹ ತೀರ್ಮಾನಿಸಿದೆ. ಪಕ್ಷದ ವೇದಿಕೆಯಲ್ಲಿ ಕಾರ್ಯಕ್ರಮ ಆಯೋಜಿಸುವುದಕ್ಕಿಂತ ಎಲ್ಲರನ್ನೂ ಒಳಗೊಳ್ಳುವಂತೆ ಮಾಡಿದರೆ ಪಕ್ಷಕ್ಕೆ ಅನುಕೂಲ. ಅಲ್ಲದೆ, ಸಿದ್ದರಾಮಯ್ಯ ಅವರ ವರ್ಚಸ್ಸಿಗೂ ಮೆರುಗು ನೀಡಬಹುದು ಎನ್ನುವುದು ಅವರ ಅಭಿಮಾನಿಗಳ ಅಭಿಪ್ರಾಯ. ವಿಧಾನಸಭೆ ಚುನಾವಣೆಯನ್ನು ಸಾಮೂಹಿಕ ನಾಯಕತ್ವದಲ್ಲಿ ಎದುರಿಸಲು ಕಾಂಗ್ರೆಸ್‌ನಲ್ಲಿ ಈಗಾಗಲೇ ತೀರ್ಮಾನಿಸಿದೆ. ಆದರೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಅಭ್ಯರ್ಥಿ ಎನ್ನುವುವನ್ನು ಈಗಿನಿಂದಲೇ ಪರೋಕ್ಷವಾಗಿ ಬಿಂಬಿಸುವುದು ಇದರ ಹಿಂದಿನ ಒಳಗುಟ್ಟು ಎಂಬ ಚರ್ಚೆಯೂ ಕಾಂಗ್ರೆಸ್ ವಲಯದಲ್ಲಿ ನಡೆದಿದೆ.

ಕಾಂಗ್ರೆಸ್ ಪರ ಜನಾಭಿಪ್ರಾಯ?

ಕಾಂಗ್ರೆಸ್ ಹೈಕಮಾಂಡ್ ರಾಜ್ಯದಲ್ಲಿ ಸಮೀಕ್ಷೆಯೊಂದನ್ನು ನಡೆಸಿದ್ದು, ಅದರಲ್ಲಿ ಪಕ್ಷದ ಪರ ‘ಜನಾಭಿಪ್ರಾಯ’ ಇರುವುದು ವ್ಯಕ್ತವಾಗಿದೆ ಎಂದು ಆ ಪಕ್ಷದ ಮೂಲಗಳು ಹೇಳಿವೆ.

ಕ್ಷೇತ್ರವಾರು ‘ಸಂಭವನೀಯ’ ಅಭ್ಯರ್ಥಿಯನ್ನು ಗುರುತಿಸಿ ನಡೆಸಿದ ಸಮೀಕ್ಷೆಯಲ್ಲಿ 102ರಿಂದ 122ರವರೆಗೆ ಸೀಟು ಸಿಗುವ ಸಾಧ್ಯತೆಯಿದೆ ಎಂದು ಗೊತ್ತಾಗಿದೆ. ಈ ವರದಿ ಬಗ್ಗೆ ರಾಜ್ಯ ನಾಯಕರು ಹೈಕಮಾಂಡ್ ನಾಯಕರ ಜೊತೆ ಚರ್ಚಿಸಿ, ಪಕ್ಷವನ್ನು ಮತ್ತಷ್ಟು ಬಲಪಡಿಸಲು ಮುಂದಿನ ದಿನಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲು ಮುಂದಾಗಿದ್ದಾರೆ.

ಶಿಸ್ತು ಉಲ್ಲಂಘನೆ: ಸೀತಾರಾಂ, ಲಕ್ಷ್ಮೀನಾರಾಯಣ್‌ಗೆ ನೋಟಿಸ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಬಲಿಗರ ಸಭೆ ನಡೆಸಿ, ಪಕ್ಷದ ನಾಯಕರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿರುವ ಕೆಪಿಸಿಸಿ ಉಪಾಧ್ಯಕ್ಷ ಎಂ.ಆರ್.ಸೀತಾರಾಂ ಮತ್ತು ಆ ಸಭೆಯಲ್ಲಿ ಭಾಗವಹಿಸಿದ್ದ ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಎಂ.ಡಿ. ಲಕ್ಷ್ಮೀನಾರಾಯಣ್ ಅವರಿಗೆ ಕಾಂಗ್ರೆಸ್ ಶಿಸ್ತು ಪಾಲನಾ ಸಮಿತಿ ಕಾರಣ ಕೇಳಿ ನೋಟಿಸ್ ನೀಡುವ ಸಾಧ್ಯತೆ ಇದೆ.

‘ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೂಚನೆಯಂತೆ ಇಬ್ಬರಿಗೂ ಶೋಕಾಸ್ ನೋಟಿಸ್ ನೀಡುವ ಸಾಧ್ಯತೆಯಿದೆ. ಸದ್ಯ ಊಟಿಯಲ್ಲಿರುವ ಸಮಿತಿ ಅಧ್ಯಕ್ಷ ರೆಹಮಾನ್ ಖಾನ್ ಬುಧವಾರ ಬೆಂಗಳೂರಿಗೆ ಬರುವರು. ಸಮಿತಿಯ ಸಭೆ ಬಳಿಕ ನೋಟಿಸ್ ನೀಡುವ ಬಗ್ಗೆ ತೀರ್ಮಾನ ಆಗಲಿದೆ’ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಇತ್ತೀಚೆಗೆ ಬೆಂಬಲಿಗರ ಸಭೆ ನಡೆಸಿದ್ದ ಎಂ.ಆರ್.ಸೀತಾರಾಂ, ಪಕ್ಷದ ನಾಯಕರ ವಿರುದ್ಧ ಗುಡುಗಿದ್ದರು. ಬೆಂಬಲಿಗರ ಜೊತೆ ಇನ್ನೊಂದು ಸಭೆ ನಡೆಸಿ ಮುಂದಿನ ನಡೆ ತೀರ್ಮಾನಿಸುವುದಾಗಿಯೂ ಹೇಳಿದ್ದರು. ಅದೇ ಸಭೆಯಲ್ಲಿ ಭಾಗವಹಿಸಿದ್ದ ಎಂ.ಡಿ. ಲಕ್ಷ್ಮೀನಾರಾಯಣ್ ಅವರೂ ಸೀತಾರಾಂ ಪರ ಮಾತನಾಡಿದ್ದರು. ‘ದಲಿತ ಸಿಎಂ’ ಘೋಷಿಸುವಂತೆ ಇತ್ತೀಚೆಗೆ ಅವರು ಪಕ್ಷದ ನಾಯಕರಿಗೆ ಬಹಿರಂಗ ಪತ್ರ ಬರೆದಿದಿದ್ದರು. ಈ ಎಲ್ಲ ವಿಚಾರಗಳು ಸಮಿತಿಯ ಸಭೆಯಲ್ಲಿ ಚರ್ಚೆಗೆ ಬರುವ ಸಾಧ್ಯತೆ ಇದೆ.

ಜುಲೈ 15ರಿಂದ ಕಾರ್ಮಿಕ ಅದಾಲತ್

ಶಿವಮೊಗ್ಗ: ‘ಕಾರ್ಮಿಕ ವ್ಯಾಜ್ಯಗಳು ಹೆಚ್ಚುತ್ತಿದ್ದು, ಇವುಗಳನ್ನು ಇತ್ಯರ್ಥಪಡಿಸಲು ಜುಲೈ 15ರಿಂದ ಒಂದು ತಿಂಗಳು ಕಾರ್ಮಿಕ ಅದಾಲತ್ ನಡೆಸಲಾಗುತ್ತಿದೆ’ ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಮಂಗಳವಾರ ಇಲ್ಲಿ ಹೇಳಿದರು.

140ನೇ ದಿನಕ್ಕೆ ಕಾಲಿಟ್ಟ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಅಹೋರಾತ್ರಿ ಧರಣಿ

ಪರಿಶಿಷ್ಟ ಜಾತಿ, ಪಂಗಡ ಮೀಸಲು: ಹೋರಾಟಕ್ಕೆ ಸಂಕಲ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವಂತೆ ಆಗ್ರಹಿಸಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ನೇತೃತ್ವದಲ್ಲಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಅಹೋರಾತ್ರಿ ಧರಣಿ ಮಂಗಳವಾರಕ್ಕೆ 139ನೇ ದಿನಕ್ಕೆ ಕಾಲಿಟ್ಟಿದ್ದು, ಸರ್ಕಾರದಿಂದ ಪೂರಕ ಸ್ಪಂದನ ಸಿಗದಿರುವುದು ಸ್ವಾಮೀಜಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಕರ್ನಾಟಕ ಸ್ವಾಭಿಮಾನಿ ಎಸ್.ಸಿ, ಎಸ್.ಟಿ ಸಂಘಟನೆಗಳ ಒಕ್ಕೂಟ ಮತ್ತು ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿ ನೇತೃತ್ವದಲ್ಲಿ ನಡೆಯುತ್ತಿರುವ ಧರಣಿ ಸ್ಥಳಕ್ಕೆ ವಿವಿಧ ಮಠಾಧೀಶರು ಆಗಮಿಸಿ ಬೆಂಬಲ ಸೂಚಿಸಿದರು. ಹೋರಾಟ ತೀವ್ರಗೊಳಿಸುವ ಸಂಕಲ್ಪ ಮಾಡಿದರು.



ಅಹೋರಾತ್ರಿ ಧರಣಿಯಲ್ಲಿ ಮಂಗಳವಾರ (ಎಡದಿಂದ) ಛಲವಾದಿ ಮಹಾಸಂಸ್ಥಾನದ ಬಸವನಾಗಿದೇವ ಸ್ವಾಮೀಜಿ, ಚಿತ್ರದುರ್ಗದ ಬಂಜಾರ ಗುರುಪೀಠದ ಪೀಠಾಧ್ಯಕ್ಷ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ, ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ, ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಚಿತ್ರದುರ್ಗದ ಭೋವಿ ಗುರುಪೀಠದ ಸಿದ್ಧರಾಮೇಶ್ವರ ಮಹಾಸಂಸ್ಥಾನ ಮಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಇಮ್ಮಡಿ ಕೇತೇಶ್ವರ ಸ್ವಾಮೀಜಿ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರಸನ್ನಾನಂದ ಸ್ವಾಮೀಜಿ, ‘ಅಹೋರಾತ್ರಿ ಧರಣಿ 150 ದಿನ ತಲುಪುವುದಕ್ಕೂ ಮೊದಲು ಬೇಡಿಕೆ ಈಡೇರಿಸಬೇಕು. ಇಲ್ಲದಿದ್ದರೆ ಜುಲೈ 11ರಂದು ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಪ್ರತಿಭಟನೆ ನಡೆಯಲಿದೆ. ಧರಣಿ 100ನೇ ದಿನ ಪೂರೈಸಿದಾಗಲೂ ಜಿಲ್ಲಾ, ತಾಲ್ಲೂಕು ಕೇಂದ್ರದಲ್ಲಿ ಪ್ರತಿಭಟನೆ ನಡೆಸಲಾಗಿತ್ತು’ ಎಂದು ತಿಳಿಸಿದರು.

> **ರಾಜ್ಯ ಸರ್ಕಾರವು ಬರೀ ಆಶ್ವಾಸನೆ ನೀಡುತ್ತಿದೆ. ಆಯೋಗದ ಶಿಫಾರಸು ಜಾರಿಗೊಳಿಸುವ ಪ್ರಯತ್ನ ಮಾಡುತ್ತಿಲ್ಲ**
> **ಪ್ರಸನ್ನಾನಂದ ಸ್ವಾಮೀಜಿ**
> ವಾಲ್ಮೀಕಿ ಗುರುಪೀಠ

ರಾಜ್ಯದಲ್ಲಿರುವ ಎಸ್.ಸಿ ಮತ್ತು ಎಸ್.ಟಿ ಮೀಸಲಾತಿ ಪ್ರಮಾಣ ಕ್ರಮವಾಗಿ ಶೇ 15ರಿಂದ ಶೇ 17ಕ್ಕೆ ಹಾಗೂ ಶೇ 3ರಿಂದ ಶೇ 7ಕ್ಕೆ ಏರಿಸುವಂತೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್ ಆಯೋಗವು ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. 2020ರ ಜುಲೈ 7ರಂದು ವರದಿ ಸಲ್ಲಿಸಿದ್ದರೂ ಸರ್ಕಾರ ಕಾಲಹರಣ ಮಾಡುತ್ತಿದೆ. ಶಿಫಾರಸು ಜಾರಿಗೊಳಿಸುವ ಇಚ್ಛೆಯಿಲ್ಲ ಎಂದು ಆಕ್ರೋಶ ಹೊರಹಾಕಿದರು.

‘ಧರಣಿಯು 108ನೇ ದಿನಕ್ಕೆ ಕಾಲಿಟ್ಟಿದ್ದ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಥಳಕ್ಕೆ ಬಂದು ಭರವಸೆ ನೀಡಿದ್ದರು. ಇನ್ನೂ ಅಂತಿಮ ನಿರ್ಧಾರ ಪ್ರಕಟಿಸಿಲ್ಲ’ ಎಂದು ದೂರಿದರು. ಸಾಹಿತಿಗಳು, ಚಿಂತಕರು, ಪ್ರಜ್ಞಾವಂತರು ಹಾಗೂ ದಲಿತ ಸಂಘರ್ಷ ಸಮಿತಿ, ಕನ್ನಡ ಸಂಘಟನೆ ಮುಖಂಡರು ಈ ಹೋರಾಟ ಬೆಂಬಲಿಸಿದ್ದಾರೆ. ಪ್ರತಿ 10 ವರ್ಷಕ್ಕೊಮ್ಮೆ ಮೀಸಲಾತಿ ಪರಿಷ್ಕರಣೆ ನಡೆಯಬೇಕು. ಆದರೆ, ಹಳೇ ಮೀಸಲಾತಿ ಅನುಸರಿಸಲಾಗುತ್ತಿದೆ ಎಂದರು.

ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಜ್ಞಾನಪ್ರಕಾಶ ಸ್ವಾಮೀಜಿ, ಸರ್ದಾರ ಸೇವಾಲಾಲ್ ಸ್ವಾಮೀಜಿ, ಬಸವನಾಗಿದೇವ ಸ್ವಾಮೀಜಿ ಸೇರಿ ವಿವಿಧ ಮುಖಂಡರು ಹಾಜರಿದ್ದರು.

ಸಂಕ್ಷಿಪ್ತ ಸುದ್ದಿ

ಸಿಎಲ್‌ಪಿ ಸಭೆ ಜುಲೈ 3ರಂದು

ಬೆಂಗಳೂರು: ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ಜುಲೈ 3ರಂದು ನಗರದ ಶಾಂಗ್ರಿಲಾ ಹೋಟೆಲ್‌ನಲ್ಲಿ ನಡೆಯಲಿದೆ.

‘ಜುಲೈ 18ರಂದು ರಾಷ್ಟ್ರಪತಿ ಆಯ್ಕೆಗೆ ಚುನಾವಣೆ ನಡೆಯಲಿದೆ. ಕಾಂಗ್ರೆಸ್ ಮತ್ತು ಇತರ ಬೆಂಬಲಿತ ಪಕ್ಷಗಳ ಅಭ್ಯರ್ಥಿಯಾಗಿ ಯಶವಂತ ಸಿನ್ಹಾ ಸ್ಪರ್ಧಿಸಿದ್ದಾರೆ. ಅವರನ್ನು ಬೆಂಬಲಿಸುವ ಕುರಿತು ಸಮಾಲೋಚನೆ ನಡೆಸಲು ಈ ಸಭೆ ನಡೆಯಲಿದೆ’ ಎಂದು ಶಾಸಕಾಂಗ ಪಕ್ಷದ ಕಾರ್ಯದರ್ಶಿ ಈ. ತುಕಾರಾಂ ತಿಳಿಸಿದ್ದಾರೆ.

ರಾಷ್ಟ್ರಪತಿ ಆಯ್ಕೆಗೆ ನಡೆಯಲಿರುವ ಚುನಾವಣೆಯ ಜೊತೆಗೆ, ಪಕ್ಷ ಸಂಘಟನೆ, ರಾಜ್ಯ ಸರ್ಕಾರದ ವಿರುದ್ಧ ಹಮ್ಮಿಕೊಳ್ಳಬೇಕಾದ ಹೋರಾಟಗಳ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ವಿದ್ಯಾರ್ಥಿ ಬಸ್‌ಪಾಸ್ ಅವಧಿ ವಿಸ್ತರಣೆ

ಬೆಂಗಳೂರು: ಪದವಿ, ವೃತ್ತಿಪರ ಕೋರ್ಸ್, ಕಾನೂನು ಹಾಗೂ ಸ್ನಾತಕೋತ್ತರ ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳ ರಿಯಾಯಿತಿ ಬಸ್ ಪಾಸ್ ಅವಧಿಯನ್ನು ಕೆಎಸ್‌ಆರ್‌ಟಿಸಿ ವಿಸ್ತರಿಸಿದೆ.

‘ಪರೀಕ್ಷೆಗಳು ನಡೆಯುತ್ತಿದ್ದರೆ ಒಂದು ಅಥವಾ ಎರಡು ತಿಂಗಳ ಅವಧಿಗೆ (ಜುಲೈ–ಆಗಸ್ಟ್) ನಿಗದಿತ ಮೊತ್ತ ಪಾವತಿಸಿ ರಸೀದಿ ಪಡೆಯಬೇಕು. ಹಳೆಯ ಪಾಸ್ ಮತ್ತು ರಸೀದಿ ತೋರಿಸಿ ಪ್ರಯಾಣಿಸಬಹುದು’ ಎಂದು ಸಂಸ್ಥೆಯ ಮುಖ್ಯ ಸಂಚಾರ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರ ಕಚೇರಿ ಬೆಂಗಳೂರಿನಲ್ಲೇ ಇರಲಿ: ಯಕ್ಷಗಾನ ಕ್ಷೇತ್ರದ ಪ್ರಮುಖರ ಆಗ್ರಹ

ಸಚಿವರ ಸ್ವಕ್ಷೇತ್ರ ಕಾರ್ಕಳಕ್ಕೆ ಯಕ್ಷಗಾನ ಅಕಾಡೆಮಿ?

● ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕರ್ನಾಟಕ ಯಕ್ಷಗಾನ ಅಕಾಡೆಮಿಯ ಕೇಂದ್ರ ಕಚೇರಿ ಸ್ಥಳಾಂತರ ಪ್ರಸ್ತಾವವು ಮತ್ತೆ ಮುನ್ನೆಲೆಗೆ ಬಂದಿದೆ. ಈ ಬಾರಿ ಮಂಗಳೂರಿನ ಬದಲು ಕನ್ನಡ ಮತ್ತು ಸಂಸ್ಕೃತಿ ಸಚಿವರ ಸ್ವಕ್ಷೇತ್ರ ಉಡುಪಿ ಜಿಲ್ಲೆಯ ಕಾರ್ಕಳಕ್ಕೆ ಸ್ಥಳಾಂತರಿಸುವ ಪ್ರಯತ್ನಗಳು ಸದ್ದಿಲ್ಲದೆ ನಡೆಯುತ್ತಿವೆ.

‘ಕಲೆಯ ಬೆಳವಣಿಗೆಗೆ ಅಕಾಡೆಮಿಯ ಕೇಂದ್ರ ಕಚೇರಿ ಬೆಂಗಳೂರಿನಲ್ಲಿಯೇ ಇರಬೇಕು’ ಎನ್ನುವುದು ಅಕಾಡೆಮಿ ಕಾರ್ಯಕಾರಿ ಸಮಿತಿ ಹಾಗೂ ಕಲಾವಿದರ ಆಗ್ರಹ. ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಅವರು ತಮ್ಮ ಕ್ಷೇತ್ರಕ್ಕೆ ಅಕಾಡೆಮಿ ಕಚೇರಿ ಸ್ಥಳಾಂತರಿಸಲು ಮುಂದಾಗಿದ್ದಾರೆ ಎಂಬ ಆರೋಪಗಳು ಕೇಳಿ ಬಂದಿವೆ.

ಈ ಹಿಂದೆ ಉಮಾಶ್ರೀ ಅವರು ಇಲಾಖೆ ಸಚಿವರಾಗಿದ್ದಾಗ ಅಕಾಡೆಮಿಯ ಕೇಂದ್ರ ಕಚೇರಿಯನ್ನು ಮಂಗಳೂರಿಗೆ ಸ್ಥಳಾಂತರಿಸುವಂತೆ ಆದೇಶ ಹೊರಡಿಸಿದ್ದರು. ದಕ್ಷಿಣ ಕನ್ನಡ, ಕರಾವಳಿ ಪ್ರದೇಶದಲ್ಲಿ ಯಕ್ಷಗಾನದ ಕಲಾವಿದರು ಹೆಚ್ಚಿದ್ದಾರೆ ಎಂಬ ಕಾರಣಕ್ಕೆ ಈ ಆದೇಶ ಹೊರಡಿಸಲಾಗಿತ್ತು. ಆದರೆ, ಸರ್ಕಾರದ ಈ ಕ್ರಮಕ್ಕೆ ಕಲಾವಿದರ ವಲಯದಲ್ಲಿ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಅಕಾಡೆಮಿಯ ಅಂದಿನ ಅಧ್ಯಕ್ಷ ಎಂ.ಎ.ಹೆಗಡೆ ಹಾಗೂ ಸದಸ್ಯರು ಕೂಡ ಆಕ್ಷೇಪಿಸಿದ್ದರು. ಆದ್ದರಿಂದ ನಂತರ ಅಧಿಕಾರಕ್ಕೆ ಬಂದ ಸಮ್ಮಿಶ್ರ ಸರ್ಕಾರ, ಸ್ಥಳಾಂತರದ ಆದೇಶವನ್ನು ಹಿಂಪಡೆದಿತ್ತು.

ರಾಜಧಾನಿ ಸೂಕ್ತ: ಸದ್ಯ ಅಕಾಡೆಮಿಯ ಕೇಂದ್ರ ಕಚೇರಿ ಕನ್ನಡ ಭವನದಲ್ಲಿದೆ. ಯಕ್ಷಗಾನದಲ್ಲಿ ಮೂಡಲಪಾಯ, ಬಡಗುತಿಟ್ಟು, ತೆಂಕುತಿಟ್ಟು, ಬಡಾಬಡಗುತಿಟ್ಟು, ತಾಳ ಮದ್ದಳೆ ಸೇರಿ ಹಲವು ಪ್ರಕಾರಗಳಿವೆ. ಎಲ್ಲವೂ ಅಕಾಡೆಮಿ ವ್ಯಾಪ್ತಿಗೆ ಬರುತ್ತವೆ. ಮೂಡಲಪಾಯ ಯಕ್ಷಗಾನ ಪ್ರಕಾರವು ತುಮಕೂರು, ರಾಮನಗರ, ಮೈಸೂರು, ಕೋಲಾರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ ಸೇರಿ ಕೆಲವು ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿದೆ. ಹೀಗಾಗಿ, ಆಡಳಿತಾತ್ಮಕ ಹಾಗೂ ಕಲೆಯ ಬೆಳವಣಿಗೆಯ ದೃಷ್ಟಿಯಿಂದ ಕಚೇರಿ ಬೆಂಗಳೂರಿನಲ್ಲಿಯೇ ಇರಬೇಕು ಎನ್ನುವುದು ಯಕ್ಷಗಾನದ ಪ್ರಮುಖರ ಅಭಿಮತ.


‘ಯಕ್ಷಗಾನ ಕಲೆ ಕರಾವಳಿಗಷ್ಟೇ ಸೀಮಿತವಾಗದೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆಯುತ್ತಿದೆ. ಕಚೇರಿಯನ್ನು ಕಾರ್ಕಳಕ್ಕೆ ಸ್ಥಳಾಂತರಿಸಿದರೆ ಮೂಡಲಪಾಯ ಸೇರಿ ಯಕ್ಷಗಾನದ ಇನ್ನಿತರ ಕಲಾ ಪ್ರಕಾರಗಳಿಗೆ ಅಷ್ಟಾಗಿ ಪ್ರೋತ್ಸಾಹ ಸಿಗುವುದಿಲ್ಲ. ಕೇಂದ್ರ ಕಚೇರಿ ಬೆಂಗಳೂರಿನಲ್ಲೇ ಇರುವುದು ಸೂಕ್ತ’ ಎಂದು ಅಕಾಡೆಮಿಯ ಅಧ್ಯಕ್ಷ ಮತ್ತು ಸದಸ್ಯರು ಅಭಿಮತ ವ್ಯಕ್ತಪಡಿಸಿದ್ದಾರೆ.



> **ಅಕಾಡೆಮಿ ಕಚೇರಿಯನ್ನು ಕಾರ್ಕಳಕ್ಕೆ ಸ್ಥಳಾಂತರಿಸಬೇಕೆಂಬ ಸಲಹೆಯಿದೆ. ಯಕ್ಷಗಾನ ಕರಾವಳಿ ಕೇಂದ್ರಿತ ಕಲೆ. ಕಚೇರಿ ಸ್ಥಳಾಂತರದಿಂದ ಮೂಡಲಪಾಯಕ್ಕೆ ಸಮಸ್ಯೆಯಾಗದು.**
> **ವಿ. ಸುನೀಲ್ ಕುಮಾರ್,**
> ಕನ್ನಡ ಮತ್ತು ಸಂಸ್ಕೃತಿ ಸಚಿವ



> **ಕಲಾವಿದರ ಹಿತದೃಷ್ಟಿಯಿಂದ ಅಕಾಡೆಮಿಯ ಕೇಂದ್ರ ಕಚೇರಿ ಬೆಂಗಳೂರಿನಲ್ಲಿಯೇ ಇರಬೇಕು. ಸ್ಥಳಾಂತರ ಮಾಡಿದರೆ ಕಲೆ ಹಾಗೂ ಕಲಾವಿದರಿಗೆ ಸಮಸ್ಯೆ ಆಗುತ್ತದೆ.**
> **ಕೋಳಗಿ ಕೇಶವ ಹೆಗಡೆ,**
> ಯಕ್ಷಗಾನ ಭಾಗವತ



> **ಅಕಾಡೆಮಿ ಕಚೇರಿ ಸ್ಥಳಾಂತರ ಗಮನಕ್ಕೆ ಬಂದಿಲ್ಲ. ಯಕ್ಷಗಾನ ಇಡೀ ಕರ್ನಾಟಕಕ್ಕೆ ಸಂಬಂಧಿಸಿದ ಕಲೆ. ಕಚೇರಿ ಬೆಂಗಳೂರಿನಲ್ಲಿದ್ದರೆ ಅನೇಕ ಕೆಲಸ ಸಾಧ್ಯವಾಗುತ್ತದೆ.**
> **ಜಿ.ಎಲ್.ಹೆಗಡೆ ಮಣಕಿ,**
> ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ

‘ಕಾರ್ಯನಿರ್ವಹಣೆ ಸಮಸ್ಯೆ’

‘ಯಕ್ಷಗಾನದ ಕೇಂದ್ರ ಕಚೇರಿ ಬೆಂಗಳೂರಿನಲ್ಲಿ ಇದ್ದಲ್ಲಿ ಕಾರ್ಯನಿರ್ವಹಣೆ ಸುಲಭವಾಗಲಿದೆ. ಸ್ಥಳಾಂತರದಿಂದ ಕಲಾವಿದರಿಗೆ ಅಂತಹ ಲಾಭವಾಗದು. ಮೂಡಲಪಾಯದ ಕಲಾವಿದರು ಬೆಂಗಳೂರಿನ ಸುತ್ತಮುತ್ತ ಇದ್ದಾರೆ. ವೃತ್ತಿಪರ ಮೇಳಗಳು ಇಲ್ಲಿಗೆ ಬಂದು ಪ್ರದರ್ಶನ ನೀಡುತ್ತಿವೆ. ಯಕ್ಷಗಾನ ಕಲೆಯನ್ನು ಒಂದು ಪ್ರದೇಶಕ್ಕೆ ಸೀಮಿತಗೊಳಿಸುವುದು ಸರಿಯಲ್ಲ. ಈ ಹಿಂದೆ ಕೂಡ ಇಂತಹ ಪ್ರಯತ್ನಗಳು ನಡೆದಿದ್ದವು. ಕಲಾವಿದರ ವಿರೋಧದಿಂದ ಆಗ ಸ್ಥಳಾಂತರ ಪ್ರಕ್ರಿಯೆ ಸ್ಥಗಿತವಾಗಿತ್ತು’ ಎಂದು ಅಕಾಡೆಮಿ ಸದಸ್ಯ ಶ್ರೀನಿವಾಸ ಸಾಸ್ತಾನ ತಿಳಿಸಿದರು.

‘ನಕಲಿ ಬೀಜ, ಗೊಬ್ಬರ ಮಾರಾಟ ಜಾಲವನ್ನೇ ಕತ್ತರಿಸಿ’

ಬೆಂಗಳೂರು: ‘ರೈತರಿಗೆ ಯಾವುದೇ ಕಾರಣಕ್ಕೂ ನಕಲಿ ಬಿತ್ತನೆ ಬೀಜ, ನಕಲಿ ಗೊಬ್ಬರ ಪೂರೈಕೆ ಆಗಬಾರದು. ನಕಲಿ ಜಾಲದ ಬುಡವನ್ನೇ ಕತ್ತರಿಸಬೇಕು’ ಎಂದು ಕೃಷಿ ವಿಚಕ್ಷಣಾ ದಳದ (ಜಾಗೃತ ಕೋಶ) ಅಧಿಕಾರಿಗಳಿಗೆ ಕೃಷಿ ಸಚಿವ ಬಿ.ಸಿ. ಪಾಟೀಲ ಸೂಚಿಸಿದರು.

ವಿಚಕ್ಷಣಾ ದಳದ ಅಧಿಕಾರಿಗಳ ಜೊತೆ ಮಂಗಳವಾರ ಸಭೆ ನಡೆಸಿದ ಅವರು, ‘ರಾಜ್ಯದಲ್ಲಿ ಬಿತ್ತನೆ ಕಾರ್ಯ ಚುರುಕು ಪಡೆಯುತ್ತಿದೆ. ರೈತರಿಗೆ ಮೋಸ ಮಾಡಲೆಂದೇ ನಕಲಿ ಬೀಜ, ಗೊಬ್ಬರ ಮಾರಾಟಗಾರರು ಕಾಯುತ್ತಿರುತ್ತಾರೆ. ಇಂಥವರ ಮೇಲೆ ಹದ್ದಿನ ಕಣ್ಣಿಡಬೇಕು’ ಎಂದರು.

‘ಎಷ್ಟೇ ಹೆಸರು ಮಾಡಿದ, ಯಾವುದೇ ಕಂಪನಿಯಾಗಿದ್ದರೂ ರೈತರಿಗೆ ಮಾರುವ ಉತ್ಪನ್ನ, ಬೀಜ, ಗೊಬ್ಬರ ಅಧಿಕೃತ ಆಗಿರಬೇಕು. ಮಾರಾಟ ಪರವಾನಗಿ ಹೊಂದಿರಲೇಬೇಕು. ಯಾವುದೋ ಒಂದಕ್ಕೆ ಪರವಾನಗಿ ಪಡೆದು, ಮತ್ತೊಂದನ್ನು ಮಾರಾಟ ಮಾಡಿದರಾಯಿತು ಎನ್ನುವುದನ್ನು ತಪ್ಪಿಸಬೇಕು. ಇಂಥ ಕಂಪನಿಗಳು ಕಂಡುಬಂದರೆ ಯಾವುದೇ ಮುಲಾಜಿಲ್ಲದೆ ನೋಟಿಸ್ ನೀಡಿ, ಕ್ರಿಮಿನಲ್ ಪ್ರಕರಣ ದಾಖಲಿಸಬೇಕು.’ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಯಂತ್ರ ಸಾಮರ್ಥ್ಯ ದೃಢೀಕೃತ ವ್ಯಕ್ತಿ ಹುದ್ದೆಗೆ ಆಹ್ವಾನ

ಬೆಂಗಳೂರು: ಕಾರ್ಖಾನೆಗಳಲ್ಲಿನ ಯಂತ್ರಗಳನ್ನು ತಪಾಸಣೆ ನಡೆಸಿ ಪ್ರಮಾಣೀಕರಿಸಲು ‘ದೃಢೀಕೃತ ವ್ಯಕ್ತಿ’ ಎಂದು ಗುರುತಿಸಿಕೊಳ್ಳಲು ಅರ್ಹ ಆಸಕ್ತರಿಂದ ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಅರ್ಜಿ ಆಹ್ವಾನಿಸಿದೆ.

ಅಪಾಯಕಾರಿ ಯಂತ್ರಗಳು, ಲಿಫ್ಟ್‌ಗಳು, ಹಾಯಿಸ್ಟ್ಸ್, ಲಿಫ್ಟಿಂಗ್ ಮಷಿನ್‌ಗಳು, ಲಿಫ್ಟಿಂಗ್ ಟ್ಯಾಕಲ್ಸ್, ಪ್ರೆಷರ್ ಪ್ಲಾಂಟ್ ಹಾಗೂ ಯಂತ್ರೋಪಕರಣಗಳ ಪರೀಕ್ಷೆ, ಶೋಧನೆ, ತಪಾಸಣೆ ನಡೆಸಿ ಪ್ರಮಾಣೀಕರಿಸಲು ಬಯಸುವ ವ್ಯಕ್ತಿ ಮತ್ತು ಸಂಸ್ಥೆಗಳು ಅರ್ಜಿ ಸಲ್ಲಿಸ ಬಹುದು.

ಹೆಚ್ಚಿನ ವಿವರಗಳಿಗೆ http://surakshate.karnataka.gov.in/FBIS/ ವೀಕ್ಷಿಸಬಹುದು. ಕಾರ್ಖಾನೆ ಮತ್ತು ಬಾಯ್ಲರ್‌ಗಳ ಹೆಚ್ಚುವರಿ ನಿರ್ದೇಶಕರ ಇ–ಮೇಲ್ ವಿಳಾಸ adfbish@gmail.com, ದೂರವಾಣಿ ಸಂಖ್ಯೆ 08029551206, 944835 3099 ಸಂಪರ್ಕಿಸಬಹುದು.

ಬುಧವಾರ, ಜೂನ್ 29, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 179 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ರಯ್ಯುಗು ಕ್ಷುದ್ರಗ್ರಹವು ಸುಮಾರು 4.5 ಶತಕೋಟಿ ವರ್ಷಗಳ ಹಿಂದೆ ಸೌರವ್ಯೂಹ ಹುಟ್ಟಿದಾಗ ರೂಪುಗೊಂಡ ಕ್ಷುದ್ರಗ್ರಹ. ಇದು ವಿಜ್ಞಾನಿಗಳು ಅಧ್ಯಯನ ಮಾಡಿರುವ ಅತ್ಯಂತ ಪ್ರಾಚೀನ ವಸ್ತುವಾಗಿದೆ.



ಸಂಖ್ಯೆ-ಸುದ್ದಿ
ಗಿಗ್ ಆರ್ಥಿಕತೆಯಲ್ಲಿ ಚಿಲ್ಲರೆ ವ್ಯಾಪಾರದ್ದೇ ಸಿಂಹಪಾಲು
ವಿಂಬಲ್ಡನ್ ಟೂರ್ನಿ: ಸೆಲೆಸ್ ದಾಖಲೆ ಸರಿಗಟ್ಟಿದ ಸ್ವೆಟೆಕ್ 10
ಮುಸ್ಲಿಂ ಮತ 'ಕೈ' ತಪ್ಪುವ ಆತಂಕ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
53,177 ▲	15,850 ▲	₹52,780 (ಬೆಂಗಳೂರು) ▼	₹ 62,100 (ಬೆಂಗಳೂರು)	78.85 ▼

ಸಚಿವರ ಸಮಿತಿಯ ಶಿಫಾರಸುಗಳನ್ನು ಒಪ್ಪಿಕೊಂಡ ಜಿಎಸ್‌ಟಿ ಮಂಡಳಿ

ಮಾಂಸ, ಮೊಸರಿಗೂ ಜಿಎಸ್‌ಟಿ

ಚಂಡೀಗಡ (ಪಿಟಿಐ): ಪ್ಯಾಕ್ ಮಾಡಲಾಗಿರುವ, ಲೇಬಲ್ ಇರುವ ಆಹಾರ ವಸ್ತುಗಳಾದ ಮಾಂಸ, ಮೀನು, ಮೊಸರು, ಪನ್ನೀರ್ ಮತ್ತು ಜೇನುತುಪ್ಪಕ್ಕೆ ಇನ್ನು ಮುಂದೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅನ್ವಯವಾಗಲಿದೆ.

ಯಾವೆಲ್ಲ ಉತ್ಪನ್ನಗಳಿಗೆ ತೆರಿಗೆ ವಿನಾಯಿತಿ ಇಲ್ಲವಾಗಿಸಬಹುದು ಎಂಬುದನ್ನು ಪರಿಶೀಲಿಸಲು ರಚಿಸಲಾಗಿದ್ದ ಸಚಿವರ ಸಮಿತಿಯ ಶಿಫಾರಸುಗಳನ್ನು ಜಿಎಸ್‌ಟಿ ಮಂಡಳಿ ಒಪ್ಪಿಕೊಂಡಿರುವ ಕಾರಣ, ಈ ಬದಲಾವಣೆಗಳು ಜಾರಿಗೆ ಬರಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯ, ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಹಣಕಾಸು ಸಚಿವರು ಸದಸ್ಯರಾಗಿರುವ ಮಂಡಳಿಯು ಈ ಶಿಫಾರಸುಗಳನ್ನು ಒಪ್ಪಿಕೊಂಡಿದೆ. ಪ್ಯಾಕ್ ಮಾಡಿರುವ, ಲೇಬಲ್ ಇರುವ, ಬ್ರ್ಯಾಂಡೆಡ್ ಅಲ್ಲದ ಆಹಾರ ವಸ್ತುಗಳಿಗೆ ಇದುವರೆಗೆ ಜಿಎಸ್‌ಟಿ ವಿನಾಯಿತಿ ಇತ್ತು.

ಶಿಫಾರಸುಗಳನ್ನು ಮಂಡಳಿ ಒಪ್ಪಿಕೊಂಡಿರುವ ಪರಿಣಾಮವಾಗಿ ಪ್ಯಾಕ್ ಆಗಿರುವ, ಲೇಬಲ್ ಇರುವ ಮಾಂಸ (ಫ್ರೀಜ್ ಮಾಡಿದ ಮಾಂಸ ಹೊರತುಪಡಿಸಿ), ಮೀನು, ಮೊಸರು, ಪನ್ನೀರ್, ಜೇನುತುಪ್ಪ, ಫಾಕ್ಸ್‌ನಟ್ (ಮಖಾನಾ), ಗೋಧಿ ಮತ್ತು ಇತರ ಏಕದಳ ಧಾನ್ಯಗಳು, ಗೋಧಿ ಹಿಟ್ಟು, ಬೆಲ್ಲ, ಮಂಡಕ್ಕಿ ಇನ್ನು ಮುಂದೆ ಶೇಕಡ 5ರಷ್ಟು ತೆರಿಗೆ ವ್ಯಾಪ್ತಿಗೆ ಬರಲಿವೆ. ಸಾವಯವ ಗೊಬ್ಬರಕ್ಕೂ ಇಷ್ಟೇ ಪ್ರಮಾಣದ ತೆರಿಗೆ ಅನ್ವಯವಾಗಲಿದೆ.

ಬ್ಯಾಂಕ್‌ಗಳು ಚೆಕ್ ಸೌಲಭ್ಯ (ಚೆಕ್ ಬುಕ್ ಅಥವಾ ಚೆಕ್ ಲೀಫ್) ನೀಡುವುದಕ್ಕೆ ವಿಧಿಸುವ ಶುಲ್ಕದ ಮೇಲೆ ಶೇ 18ರಷ್ಟು ತೆರಿಗೆ ವಿಧಿಸಲಾಗುತ್ತದೆ. ಅಟ್ಲಾಸ್ ಸೇರಿದಂತೆ ನಕಾಶೆಗಳು ಮತ್ತು ಚಾರ್ಟ್‌ಗಳಿಗೆ ಶೇಕಡ 12ರಷ್ಟು ತೆರಿಗೆ ಕೊಡಬೇಕಾಗುತ್ತದೆ. ಪ್ಯಾಕ್ ಮಾಡಿರದ, ಲೇಬಲ್ ಇಲ್ಲದ ಹಾಗೂ ಯಾವುದೇ ಬ್ರ್ಯಾಂಡ್ ಇರದ ಉತ್ಪನ್ನಗಳಿಗೆ ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಈಗಿನಂತೆಯೇ ತೆರಿಗೆ ವಿನಾಯಿತಿ ಮುಂದುವರಿಯಲಿದೆ.

ದಿನಕ್ಕೆ ₹ 1,000ಕ್ಕಿಂತ ಕಡಿಮೆ ಶುಲ್ಕ ವಿಧಿಸುವ ಹೋಟೆಲ್ ಕೊಠಡಿಗಳ ಮೇಲೆ ಶೇ 12ರಷ್ಟು ತೆರಿಗೆ ವಿಧಿಸಲಾಗುತ್ತದೆ. ಈವರೆಗೆ ಇಂತಹ ಕೊಠಡಿಗಳಿಗೆ ತೆರಿಗೆಯಿಂದ ವಿನಾಯಿತಿ ಇತ್ತು.

ಕೆಲವು ಉತ್ಪನ್ನಗಳ ತಯಾರಿಕೆಯಲ್ಲಿ ಬಳಕೆಯಾಗುವ ಕಚ್ಚಾ ವಸ್ತುಗಳಿಗೆ ತೆರಿಗೆ ಜಾಸ್ತಿ ಇದ್ದು, ಅವುಗಳನ್ನು ಬಳಸಿ ಸಿದ್ಧಪಡಿಸುವ ಉತ್ಪನ್ನಗಳಿಗೆ ಜಿಎಸ್‌ಟಿ ಅಡಿಯಲ್ಲಿ ಕಡಿಮೆ ತೆರಿಗೆ ಇದೆ. ಅಡುಗೆ ಎಣ್ಣೆ, ಎಲ್‌ಇಡಿ ದೀಪ, ಮುದ್ರಣ ಶಾಯಿ, ಸೌರವಿದ್ಯುತ್ ಚಾಲಿತ ವಾಟರ್ ಹೀಟರ್‌ಗಳು ಇಂತಹ ತೆರಿಗೆ ಪ್ರಮಾಣದ ಅಡಿಯಲ್ಲಿ ಇವೆ. ಇವುಗಳಿಗೆ ವಿಧಿಸುತ್ತಿರುವ ತೆರಿಗೆ ಪ್ರಮಾಣವನ್ನು ಸರಿಪಡಿಸಬೇಕು ಎಂದು ಮಂಡಳಿಯು ಶಿಫಾರಸು ಮಾಡಿದೆ.

ಕ್ಯಾಸಿನೊ, ಆನ್‌ಲೈನ್ ಆಟಗಳು ಮತ್ತು ಕುದುರೆ ರೇಸ್‌ಗೆ ಶೇ 28ರಷ್ಟು ತೆರಿಗೆ ವಿಧಿಸಬೇಕು ಎಂದು ಪ್ರಸ್ತಾವನೆ ಕುರಿತು ಮಂಡಳಿಯು ಬುಧವಾರ ಪರಿಶೀಲನೆ ನಡೆಸುವ ಸಾಧ್ಯತೆ ಇದೆ.

₹ 2 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯದ ಚಿನ್ನ ಮತ್ತು ಚಿನ್ನದ ಆಭರಣಗಳನ್ನು, ಅಮೂಲ್ಯ ಹರಳುಗಳನ್ನು ರಾಜ್ಯದೊಳಗೆ ಸಾಗಾಟ ಮಾಡುವಾಗ, ಇ-ವೇ ಬಿಲ್ ಕಡ್ಡಾಯಗೊಳಿಸಬೇಕು ಎಂದು ಸಚಿವರ ಸಮಿತಿಯೊಂದು ಶಿಫಾರಸು ಮಾಡಿತ್ತು. ಎಷ್ಟು ಮೊತ್ತಕ್ಕಿಂತ ಹೆಚ್ಚಿನ ಆಭರಣ, ಅಮೂಲ್ಯ ಹರಳುಗಳ ಸಾಗಾಟಕ್ಕೆ ಇ-ವೇ ಬಿಲ್ ಕಡ್ಡಾಯ ಎಂಬುದನ್ನು ರಾಜ್ಯಗಳೇ ತೀರ್ಮಾನಿಸಬಹುದು ಎಂದು ಜಿಎಸ್‌ಟಿ ಮಂಡಳಿಯು ಹೇಳಿದೆ.

ಜಿಎಸ್‌ಟಿ ಕರ ಭಾರ



5% ಪ್ಯಾಕ್ ಆಗಿರುವ, ಲೇಬಲ್ ಇರುವ ಮಾಂಸ (ಫ್ರೀಜ್ ಮಾಡಿದ ಮಾಂಸ ಹೊರತುಪಡಿಸಿ), ಮೀನು, ಮೊಸರು, ಪನ್ನೀರ್, ಜೇನುತುಪ್ಪ, ಫಾಕ್ಸ್‌ನಟ್ (ಮಖಾನಾ), ಗೋಧಿ ಮತ್ತು ಇತರ ಏಕದಳ ಧಾನ್ಯಗಳು, ಗೋಧಿ ಹಿಟ್ಟು, ಬೆಲ್ಲ, ಮಂಡಕ್ಕಿ

18% ಬ್ಯಾಂಕ್‌ಗಳು ಚೆಕ್ ಸೌಲಭ್ಯ (ಚೆಕ್ ಬುಕ್ ಅಥವಾ ಚೆಕ್ ಲೀಫ್) ನೀಡುವುದಕ್ಕೆ ವಿಧಿಸುವ ಶುಲ್ಕದ ಮೇಲೆ ತೆರಿಗೆ.

12% ಅಟ್ಲಾಸ್ ಸೇರಿದಂತೆ ನಕಾಶೆಗಳು ಮತ್ತು ಚಾರ್ಟ್‌ಗಳಿಗೆ ತೆರಿಗೆ.
ದಿನಕ್ಕೆ ₹ 1,000ಕ್ಕಿಂತ ಕಡಿಮೆ ಶುಲ್ಕ ವಿಧಿಸುವ ಹೋಟೆಲ್ ಕೊಠಡಿಗಳ ಮೇಲೆ ಶೇ 12ರಷ್ಟು ತೆರಿಗೆ ವಿಧಿಸಲಾಗುತ್ತದೆ.

ಮುಖ್ಯಾಂಶಗಳು

- ಪ್ಯಾಕ್ ಮಾಡದ ಆಹಾರಕ್ಕೆ ಜಿಎಸ್‌ಟಿ ವಿನಾಯಿತಿ ಮುಂದುವರಿಕೆ
- ಚಿನ್ನ ಸಾಗಣೆಗೆ ಇ-ವೇ ಬಿಲ್: ರಾಜ್ಯಗಳಿಂದಲೇ ಮೊತ್ತ ತೀರ್ಮಾನ

ಆಕಾಶ್ ಅಂಬಾನಿ 'ಜಿಯೊ'ಗೆ ಅಧ್ಯಕ್ಷ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಂಗಸಂಸ್ಥೆ ರಿಲಯನ್ಸ್ ಜಿಯೊ ಇನ್ಫೊಕಾಮ್ ಕಂಪನಿಯ ಆಡಳಿತ ಮಂಡಳಿಗೆ ಮುಕೇಶ್ ಅಂಬಾನಿ ಅವರು ರಾಜೀನಾಮೆ ಸಲ್ಲಿಸಿದ್ದು, ತಮ್ಮ ಹಿರಿಯ ಪುತ್ರ ಆಕಾಶ್ ಅಂಬಾನಿ ಅವರನ್ನು ಆಡಳಿತ ಮಂಡಳಿಗೆ ಸೇರ್ಪಡೆ ಮಾಡಿದ್ದಾರೆ.



ಕಾರ್ಯನಿರ್ವಾಹಕೇತರ ನಿರ್ದೇಶಕ ಆಕಾಶ್ ಅಂಬಾನಿ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡುವುದಕ್ಕೆ ಜೂನ್ 27ರಂದು ನಡೆದ ಸಭೆಯಲ್ಲಿ ಆಡಳಿತ ಮಂಡಳಿ ಒಪ್ಪಿಗೆ ನೀಡಿದೆ ಎಂದು ರಿಲಯನ್ಸ್ ಜಿಯೊ ಇನ್ಫೊಕಾಮ್ ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಮುಕೇಶ್ ಅಂಬಾನಿ ರಾಜೀನಾಮೆಯ ನಂತರ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕೂಡ ಕಂಪನಿ ಹೇಳಿದೆ.

ಕಂಪನಿಯ ರಿಟೇಲ್ ವಹಿವಾಟುಗಳನ್ನು ಮಕೇಶ್ ಅಂಬಾನಿ ಅವರು ಪುತ್ರಿ ಇಶಾ ಅವರಿಗೆ ಹಸ್ತಾಂತರಿಸಬಹುದು ಎಂಬ ನಿರೀಕ್ಷೆ ಇದೆ. ಮುಕೇಶ್ ಅಂಬಾನಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಆಗಿ ಮುಂದುವರಿದಿದ್ದಾರೆ, ಜಿಯೊ ಇನ್ಫೊಕಾಮ್‌ನ ಮಾಲೀಕತ್ವದ ಜಿಯೊ ಪ್ಲಾಟ್‌ಫಾರ್ಮ್ಸ್‌ನ ಅಧ್ಯಕ್ಷರಾಗಿಯೂ ಮುಂದುವರಿಯಲಿದ್ದಾರೆ.

ಶಾ, ನಡ್ಡಾ ಜತೆ ಫಡಣವೀಸ್ ಚರ್ಚೆ: ರಾಜ್ಯಪಾಲರ ಭೇಟಿ

ಬಹುಮತ ಸಾಬೀತಿಗೆ ಸೂಚಿಸಲು ಮನವಿ

ಮುಂಬೈ (ಪಿಟಿಐ): ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸಲು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ಸೂಚಿಸುವಂತೆ ಮಹಾರಾಷ್ಟ್ರ ವಿರೋಧ ಪಕ್ಷದ ನಾಯಕ, ಬಿಜೆಪಿಯ ದೇವೇಂದ್ರ ಫಡಣವೀಸ್ ಅವರು ರಾಜ್ಯಪಾಲ ಭಗತ್‌ಸಿಂಗ್ ಕೋಶಿಯಾರಿ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದ್ದಾರೆ.

ದೆಹಲಿಯಿಂದ ಹಿಂದಿರುಗಿದ ನಂತರ ರಾಜಭವನಕ್ಕೆ ತೆರಳಿದ ಅವರು, ಈ ಸಂಬಂಧ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದರು. ಮಹಾರಾಷ್ಟ್ರದ ಬಿಜೆಪಿಯ ಅಧ್ಯಕ್ಷ ಚಂದ್ರಕಾಂತ ಪಾಟೀಲ, ಪಕ್ಷದ ಮುಖಂಡರಾದ ಸುಧೀರ್ ಮುಂಗಂಟಿವಾರ, ಪ್ರವೀಣ ದರೇಕರ್, ಗಿರೀಶ ಮಹಾಜನ್ ಹಾಗೂ ಆಶೀಶ್ ಶೇಲಾರ್ ಇದ್ದರು.

ಇನ್ನೊಂದೆಡೆ, ಮುಖ್ಯಮಂತ್ರಿ ಹಾಗೂ ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಬಂಡಾಯ ಶಾಸಕರಿಗೆ ಭಾವನಾತ್ಮಕ ಮನವಿ ಮಾಡಿ, ಇನ್ನೂ ಕಾಲ ಮಿಂಚಿಲ್ಲ ಬಂದು ತಮ್ಮಲ್ಲಿ ಮಾತನಾಡಿ ಎಂದು ಮನವಿ ಮಾಡಿದ್ದಾರೆ. ಆದರೆ, ಶಿವಸೇನಾದ ಮುಖ್ಯ ವಕ್ತಾರ ಸಂಜಯ ರಾವುತ್ ಅವರು ಬೆದರಿಕೆಯ ಧ್ವನಿಯಲ್ಲಿಯೇ ಮಾತನಾಡಿದ್ದಾರೆ. ಪಕ್ಷದ ನಾಯಕತ್ವಕ್ಕೆ ವಂಚನೆ ಮಾಡಿದವರು ಮುಕ್ತವಾಗಿ ಓಡಾಡಲು ಸಾಧ್ಯವಾಗದು ಎಂದು ಅವರು ಹೇಳಿದ್ದಾರೆ.

'ನೀವು ಹಿಂದಿರುಗಿ ಬಂದು ನನ್ನನ್ನು ಮುಖಾಮುಖಿಯಾದರೆ ನಾವು ದಾರಿಯೊಂದನ್ನು ಕಂಡುಕೊಳ್ಳಬಹುದು. ಪಕ್ಷದ ಅಧ್ಯಕ್ಷ ಮತ್ತು ಕುಟುಂಬದ ಮುಖ್ಯಸ್ಥನಾಗಿ ನಿಮ್ಮ ಬಗ್ಗೆ ಈಗಲೂ ನನಗೆ ಕಾಳಜಿ ಇದೆ' ಎಂದು ಉದ್ಧವ್ ಹೇಳಿದ್ದಾರೆ.

ಚರ್ಚೆ: ರಾಜ್ಯಪಾಲರ ಭೇಟಿಗೂ ಮುನ್ನ, ಫಡಣವೀಸ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ದೆಹಲಿಯಲ್ಲಿ ಭೇಟಿಯಾಗಿ, ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ ಅಘಾಡಿ ಸರ್ಕಾರವು ವಿಶ್ವಾಸಮತ ಗೆಲ್ಲುವ ಸಾಧ್ಯತೆ ಕ್ಷೀಣವಾಗಿರುವ ಕಾರಣ, ಮುಂದಿನ ಕಾರ್ಯತಂತ್ರದ ಬಗ್ಗೆ ಚರ್ಚಿಸಿದ್ದಾರೆ.

ಅಜಿತ್ ಪವಾರ್ ನೇತೃತ್ವದಲ್ಲಿ ಎನ್‌ಸಿಪಿಯ ಒಂದು ಬಣವು ಬಿಜೆಪಿಗೆ ಬೆಂಬಲ ನೀಡಿ ಸರ್ಕಾರ ರಚಿಸುವ ಪ್ರಯೋಗವು 2019ರಲ್ಲಿ ವಿಫಲವಾಗಿತ್ತು. ಹಾಗಾಗಿ, ಬಿಜೆಪಿ ಅತ್ಯಂತ ಎಚ್ಚರಿಕೆಯ ಹೆಜ್ಜೆ ಇರಿಸಲು ತೀರ್ಮಾನಿಸಿದೆ. ಯಾವುದೇ ನಡೆಯು ತಿರುಗುಬಾಣವಾಗಬಾರದು, ಪ್ರಯತ್ನಕ್ಕೆ ಹಿನ್ನಡೆ ಆಗಬಾರದು ಎಂದು ಶಾ ಅವರು ಸೂಚಿಸಿದ್ದಾರೆ ಎನ್ನಲಾಗಿದೆ.

ಬಿಜೆಪಿ ಬೆಂಬಲದಲ್ಲಿ ಸರ್ಕಾರ ರಚನೆಯಾದರೆ ಫಡಣವೀಸ್ ಅವರೇ ಮುಖ್ಯಮಂತ್ರಿಯಾಗಬೇಕು. ಶಿವಸೇನಾದ ಬಂಡಾಯ ಮುಖಂಡರಿಗೆ ಉಪಮುಖ್ಯಮಂತ್ರಿ ಹುದ್ದೆ ಸೇರಿ ಮಹತ್ವದ ಖಾತೆಗಳನ್ನು ನೀಡಬಹುದು ಎಂಬುದು ಬಿಜೆಪಿಯ ಸ್ಪಷ್ಟ ನಿಲುವು ಎನ್ನಲಾಗಿದೆ.

ಬಲಾಬಲ ಪರೀಕ್ಷೆಯತ್ತ

ಸದನದಲ್ಲಿ ಬಲಾಬಲ ಪರೀಕ್ಷೆಯೇ ಮಹಾರಾಷ್ಟ್ರ ರಾಜಕಾರಣದ ಮುಂದಿನ ಮಹತ್ವದ ವಿದ್ಯಮಾನ. ಅನರ್ಹತೆ ಪ್ರಕ್ರಿಯೆಯನ್ನು ಜುಲೈ 12ರವರೆಗೆ ಮುಂದೂಡಿ ಸುಪ್ರೀಂ ಕೋರ್ಟ್ ಆದೇಶ ನೀಡಿರುವುದು ಬಂಡಾಯ ಶಾಸಕರಿಗೆ ಅನುಕೂಲವಾಗಿದೆ. ಹಾಗಾಗಿ, ತ್ವರಿತ ನಿರ್ಧಾರ ಕೈಗೊಳ್ಳಬೇಕು ಎಂಬ ನಿರ್ಧಾರಕ್ಕೆ ಬಂಡಾಯ ಶಾಸಕರು ಬಂದಿದ್ದಾರೆ ಎನ್ನಲಾಗಿದೆ.

ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರ ಪಾತ್ರವೂ ಈಗಿನ ಸಂದರ್ಭದಲ್ಲಿ ಮಹತ್ವದ್ದಾಗಿದೆ. ಎಂವಿಎ ಸರ್ಕಾರವು ಬಹುಮತ ಕಳೆದುಕೊಂಡಿದೆ ಎಂದು ಶಿವಸೇನಾದ ಬಂಡಾಯ ಶಾಸಕರು ರಾಜ್ಯಪಾಲರಿಗೆ ದೂರು ನೀಡಬಹುದು. ಈ ದೂರಿನ ಆಧಾರದಲ್ಲಿ ವಿಶ್ವಾಸಮತ ಸಾಬೀತುಪಡಿಸಲು ಉದ್ಧವ್ ಅವರಿಗೆ ಸೂಚಿಸಬಹುದು. ಸರ್ಕಾರ ವಿಶ್ವಾಸಮತ ಕಳೆದುಕೊಂಡ ಬಳಿಕವೇ ಸರ್ಕಾರ ರಚನೆಗೆ ಬಿಜೆಪಿ ಮುಂದಾಗಬಹುದು ಎನ್ನಲಾಗಿದೆ.

> **ಈಗಲೂ ಕಾಲ ಮಿಂಚಿಲ್ಲ. ಬಂದು ನನ್ನ ಜೊತೆ ಮಾತನಾಡಿ, ಶಿವಸೈನಿಕರು ಮತ್ತು ಸಾರ್ವಜನಿಕರಲ್ಲಿ ಮೂಡಿರುವ ಗೊಂದಲ ಪರಿಹರಿಸಿ**
> **ಉದ್ಧವ್ ಠಾಕ್ರೆ,** ಶಿವಸೇನಾ ಮುಖ್ಯಸ್ಥ

ಕತ್ತು ಸೀಳಿ ಟೈಲರ್ ಹತ್ಯೆ ಉದಯಪುರ ಉದ್ವಿಗ್ನ

ಜೈಪುರ: ಸಾಮಾಜಿಕ ಮಾಧ್ಯಮಗಳಲ್ಲಿ ವಿವಾದಾತ್ಮಕ ಪೋಸ್ಟ್‌ವೊಂದನ್ನು ಹಾಕಿಕೊಂಡಿದ್ದರು ಎಂಬ ಕಾರಣಕ್ಕೆ ರಾಜಸ್ಥಾನದ ಉದಯಪುರದಲ್ಲಿ ಟೈಲರ್ ಕನ್ಹಯ್ಯ ಲಾಲ್ ಎಂಬುವವರನ್ನು ಇಬ್ಬರು ದುಷ್ಕರ್ಮಿಗಳು ಮಂಗಳವಾರ ಕತ್ತು ಸೀಳಿ ಹತ್ಯೆ ಮಾಡಿದ್ದಾರೆ.

ಈ ಘಟನೆಯಿಂದ ರಾಜಸ್ಥಾನದ ಜತೆಗೆ ದೇಶದ ವಿವಿಧೆಡೆ ಪ್ರತಿಭಟನೆಗಳು ಆರಂಭವಾಗಿವೆ.

ಘಟನೆ ಸಂಬಂಧ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಇವರಲ್ಲಿ ಒಬ್ಬನನ್ನು ರಿಯಾಜ್ ಎಂದು ಗುರುತಿಸಲಾಗಿದೆ.

8



ಚಿನಕುರಳಿ
ಪ್ರಕಾಶ್ ಶೆಟ್ಟಿ



ಜು.1ರಿಂದ ಏಕಬಳಕೆ ಪ್ಲಾಸ್ಟಿಕ್ ನಿಷೇಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧ ಆದೇಶ ಜುಲೈ 1ರಿಂದ ಜಾರಿಗೆ ಬರಲಿದೆ. ಇದು ಪರಿಸರಕ್ಕೆ ಹಾನಿ ಮಾಡುತ್ತಿರುವ ಪ್ಲಾಸ್ಟಿಕ್ ಹೊರೆ ತಗ್ಗಿಸುವ ದಿಸೆಯಲ್ಲಿ ಕೇಂದ್ರ ಸರ್ಕಾರ ತೆಗೆದುಕೊಂಡ ಮೊದಲ ಹೆಜ್ಜೆಯಾಗಿದೆ. ಆದೇಶ ಪಾಲಿಸಲಾಗುತ್ತಿದೆಯೇ ಎಂದು ಪರಿಶೀಲಿಸುವ ವಿಶೇಷ ತಂಡಗಳು ರಚನೆಯಾಗಲಿವೆ. ಕೇಂದ್ರ ಮತ್ತು ರಾಜ್ಯದಲ್ಲಿ ನಿಯಂತ್ರಣ ಕೊಠಡಿ ಆರಂಭವಾಗಲಿದ್ದು, ಜನರು ಪೋರ್ಟಲ್ ಮೂಲಕ ದೂರು ನೀಡಬಹುದಾಗಿದೆ.

ಪರಿಸರ ಸ್ನೇಹಿ ಆಯ್ಕೆಗಳಿಗೆ ಬದಲಾಗಲು ಉದ್ಯಮಗಳಿಗೆ ಸಮಯ ನೀಡಲಾಗಿದೆ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಹೇಳಿದರು. ಪರ್ಯಾಯ ಆಯ್ಕೆಗಳನ್ನು ನೀಡಲಾಗಿದ್ದು, ಉದ್ಯಮ ವಲಯದಿಂದ ಸೂಕ್ತ ಸಹಕಾರ ಹಾಗೂ ಬೆಂಬಲ ಸಿಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

2021ರ ಆಗಸ್ಟ್ 21ರಂದು ನಿಷೇಧದ ಅಧಿಸೂಚನೆ ಹೊರಡಿಸಲಾಗಿತ್ತು. ಬೇರೆ ಆಯ್ಕೆಗಳಿಗೆ ಹೊರಳಲು ಕೈಗಾರಿಕೆಗಳಿಗೆ ಸರಿಸುಮಾರು 12 ತಿಂಗಳ ಸಮಯ ಸಿಕ್ಕಿತ್ತು. ದೇಶದಲ್ಲಿ 683 ನೋಂದಾಯಿತ ಘಟಕಗಳಲ್ಲಿ ವರ್ಷಕ್ಕೆ 2.4 ಲಕ್ಷ ಟನ್ ಏಕಬಳಕೆಯ ಪ್ಲಾಸ್ಟಿಕ್ ತಯಾರಿಸಲಾಗುತ್ತದೆ. ನೋಂದಣಿಯಾಗದ ಘಟಕಗಳೂ ಇದನ್ನು ಉತ್ಪಾದಿಸುತ್ತವೆ. ಶೇ 10ರಿಂದ ಶೇ 35ರಷ್ಟು ಪ್ಲಾಸ್ಟಿಕ್ ತ್ಯಾಜ್ಯ ಏಕಬಳಕೆ ಪ್ಲಾಸ್ಟಿಕ್‌ನಿಂದಲೇ ಉತ್ಪತ್ತಿಯಾಗುತ್ತಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಅಂಕಿಅಂಶಗಳು ಹೇಳುತ್ತವೆ. 2020–21ರಲ್ಲಿ ದೇಶದಲ್ಲಿ 41.27 ಲಕ್ಷ ಟನ್ ಪ್ಲಾಸ್ಟಿಕ್ ತ್ಯಾಜ್ಯ ಸೃಷ್ಟಿಯಾಗಿತ್ತು.

ಏನೇನು ನಿಷೇಧ

ಪ್ಲಾಸ್ಟಿಕ್ ಕಡ್ಡಿಯ ಇಯರ್‌ಬಡ್ಸ್, ಪ್ಲಾಸ್ಟಿಕ್ ಕಡ್ಡಿಯ ಬಲೂನ್, ಪ್ಲಾಸ್ಟಿಕ್ ಧ್ವಜ, ಕ್ಯಾಂಡಿ ಕಡ್ಡಿ, ಐಸ್‌ಕ್ರೀಂ ಕಡ್ಡಿ, ಥರ್ಮೋಕೋಲ್, ಪ್ಲಾಸ್ಟಿಕ್ ತಟ್ಟೆ, ಲೋಟ, ಫೋರ್ಕ್, ಕತ್ತರಿ, ಚಮಚ, ಸ್ಟ್ರಾ, ಟ್ರೇಗಳು, ಪ್ಯಾಕಿಂಗ್ ಹಾಗೂ ಸಿಹಿತಿಂಡಿಗಳಿಗೆ ಸುತ್ತುವ ಹಾಳೆಗಳು, ಆಹ್ವಾನಪತ್ರಗಳು, ಸಿಗರೇಟ್ ಪ್ಯಾಕೆಟ್, 100 ಮೈಕ್ರಾನ್‌ಗಿಂತ ಕಡಿಮೆಯಿರುವ ಪ್ಲಾಸ್ಟಿಕ್, ಪಿವಿಸಿ ಬ್ಯಾನರ್.

ಗುತ್ತಿಗೆದಾರರಿಂದ ಲಂಚ: ಹೆದ್ದಾರಿ ಅಧಿಕಾರಿ ವಿರುದ್ಧ ಸಿಬಿಐ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಚಿತ್ರದುರ್ಗ ಯೋಜನಾ ಅನುಷ್ಠಾನ ಘಟಕದ ಯೋಜನಾ ನಿರ್ದೇಶಕ ಶ್ರೀನಿವಾಸುಲು ನಾಯ್ಡು ಕಾರಿನಲ್ಲಿ ಸಾಗಿಸುತ್ತಿದ್ದ ₹ 3.5 ಲಕ್ಷ ನಗದು ವಶಪಡಿಸಿಕೊಂಡಿರುವ ಸಿಬಿಐ ಅಧಿಕಾರಿಗಳು, ತನಿಖೆ ಆರಂಭಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಭೂಸ್ವಾಧೀನಕ್ಕೆ ಸಂಬಂಧಿಸಿ ದೇವನಹಳ್ಳಿಯ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜೂನ್ 22ರಂದು ನಾಯ್ಡು ಭಾಗವಹಿಸಿದ್ದರು. ಗುತ್ತಿಗೆದಾರರಿಂದ ಲಂಚದ ಹಣ ಸಂಗ್ರಹಿಸಿ ಆಂಧ್ರಪ್ರದೇಶಕ್ಕೆ ಸಾಗಿಸುತ್ತಿದ್ದ ಮಾಹಿತಿ ಆಧರಿಸಿ ಸಿಬಿಐ ಕಾರ್ಯಾಚರಣೆ ನಡೆಸಿತ್ತು. ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲೇ ಆರೋಪಿಯು ಪ್ರಯಾಣಕ್ಕೆ ಬಳಸುತ್ತಿದ್ದ ವಾಹನದ ಶೋಧ ನಡೆಸಲಾಗಿತ್ತು. ಆಸನದ ಕೆಳಭಾಗದಲ್ಲಿ ಇರಿಸಿದ್ದ ಬ್ಯಾಗ್‌ನಲ್ಲಿ ಪತ್ತೆಯಾದ ಹಣಕ್ಕೆ ದಾಖಲೆ ಒದಗಿಸಲು ಅಧಿಕಾರಿ ವಿಫಲರಾಗಿದ್ದು, ಅವರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಲಾಗಿದೆ.

'ಆರೋಪಿ ಅಧಿಕಾರಿಯು ಲಂಚದ ಹಣವನ್ನು ತಮ್ಮ ಸ್ವಂತ ಊರಾದ ಆಂಧ್ರಪ್ರದೇಶದ ಕಾಳಹಸ್ತಿಗೆ ಸಾಗಿಸುತ್ತಿರುವ ಮಾಹಿತಿ ಲಭಿಸಿತ್ತು. ಈ ಅಧಿಕಾರಿ ರಾಜ್ಯದ ಗಡಿಯವರೆಗೂ ಕರ್ನಾಟಕ ನೋಂದಣಿ ಸಂಖ್ಯೆಯ ವಾಹನದಲ್ಲಿ ಪ್ರಯಾಣಿಸಿ, ಗಡಿಯಿಂದ ಆಂಧ್ರಪ್ರದೇಶ ನೋಂದಣಿ ಸಂಖ್ಯೆಯ ವಾಹನದಲ್ಲಿ ಹಣ ಸಾಗಿಸುವ ಮಾಹಿತಿ ದೊರಕಿತ್ತು. ಅಧಿಕಾರಿ, ಗುತ್ತಿಗೆದಾರರಿಂದ ಹಣ ಪಡೆದ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಲಾಗಿದೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ರಸ್ತೆ ಗುಂಡಿ: ಹೈಕೋರ್ಟ್ ತರಾಟೆ

ಸೇನೆಗೆ ಕಾಮಗಾರಿ ವಹಿಸುವ ಎಚ್ಚರಿಕೆ

ಬೆಂಗಳೂರು: 'ನಮ್ಮ ತಾಳ್ಮೆಯನ್ನು ಪರೀಕ್ಷಿಸಬೇಡಿ. ನೀವು ಇದೇ ಅವಸ್ಥೆ ಮುಂದುವರಿಸಿದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ, ಪಾಲಿಕೆಯ ಮುಖ್ಯ ಆಯುಕ್ತರು, ಮುಖ್ಯ ಎಂಜಿನಿಯರ್ ಸೇರಿದಂತೆ ಎಲ್ಲ ಅಧಿಕಾರಿಗಳನ್ನು ಅಮಾನತು ಮಾಡಲು ಸರ್ಕಾರಕ್ಕೆ ನಿರ್ದೇಶಿಸುತ್ತೇವೆ. ಇದು ನಿಮಗೆ ನೀಡಲಾಗುತ್ತಿರುವ ಕೊನೆಯ ಅವಕಾಶ' ಎಂದು ರಸ್ತೆಗುಂಡಿ ಮುಚ್ಚುವ ವಿಚಾರಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹೈಕೋರ್ಟ್ ಕಠಿಣ ಎಚ್ಚರಿಕೆ ನೀಡಿದೆ.

'ನಗರ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚಲು ಸರ್ಕಾರ ಹಾಗೂ ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ವಿಜಯನ್ ಮೆನನ್ ಹಾಗೂ ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲೆ ಎಸ್. ಆರ್. ಅನುರಾಧಾ, 'ಬಿಬಿಎಂಪಿ ಲೆಕ್ಕದ ಪ್ರಕಾರ ಇನ್ನೂ 2,533 ಗುಂಡಿಗಳನ್ನು ಮುಚ್ಚಬೇಕಿದೆ.

3Bನೇ ಪುಟ ನೋಡಿ



ಗೌರವಧನ ಏರಿಕೆಗೆ ವಿಶೇಷ ಶಿಕ್ಷಕರ ಸಂಘ ಆಗ್ರಹ

ಬೆಂಗಳೂರು: ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಕಾರ್ಯನಿರ್ವಹಿಸುವ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲಾ ಶಿಕ್ಷಕರಿಗೆ ನೀಡುತ್ತಿರುವ ಗೌರವಧನ ಮತ್ತು ವಿಶೇಷ ಶಾಲಾ ಶಿಕ್ಷಕರಿಗೆ ನೀಡುತ್ತಿರುವ ಗೌರವಧನ ತಾರತಮ್ಯ ಖಂಡಿಸಿ ಇದೇ 29ರಂದು ಸ್ವಾತಂತ್ರ್ಯಉದ್ಯಾನದಲ್ಲಿ ಪ್ರತಿಭಟನೆ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ವಿಶೇಷ ಶಿಕ್ಷಕರು ಹಾಗೂ ಶಿಕ್ಷಕೇತರ ಸಂಘ ತಿಳಿಸಿದೆ.

2011ರಲ್ಲಿ ಜಾರಿಗೆ ಬಂದ ಶಿಶು ಕೇಂದ್ರೀಕೃತ ಸಹಾಯಧನ ಯೋಜನೆ ಅಡಿಯಲ್ಲಿ ವಿಶೇಷ ಶಿಕ್ಷಕರಿಗೆ ₹6,500, ಶಿಕ್ಷಕೇತರ ಸಿಬ್ಬಂದಿಗೆ ₹4,500 ನೀಡಲಾಗುತ್ತಿತ್ತು. ಆದರೆ 2014–15ನೇ ಸಾಲಿನ ಬಜೆಟ್‌ನಲ್ಲಿ ಶಿಕ್ಷಕರಿಗೆ ₹13,500 ಮತ್ತು ಸಿಬ್ಬಂದಿಗೆ ₹9000 ಸಾವಿರದವರೆಗೂ ಗೌರವಧನ ಹೆಚ್ಚಿಸಲಾಯಿತು. ಕಳೆದ ಏಳು ವರ್ಷಗಳಿಂದ ಗೌರವಧನ ಹೆಚ್ಚಿಸಿಲ್ಲ.ದಿನಬಳಕೆ ವಸ್ತುಗಳ ಬೆಲೆ ಗಗನಕ್ಕೇರಿದ್ದರಿಂದ ಜೀವನ ನಡೆಸುವುದು ಕಷ್ಟವಾಗಿದೆ ಎಂದು ಸಂಘದ ಅಧ್ಯಕ್ಷೆ ಕಾಂತಿ ಹರೀಶ್ ಆಕ್ರೋಶ ವ್ಯಕ್ತಪಡಿಸಿದರು.

ಬುದ್ಧಿಮಾಂದ್ಯ ಮಕ್ಕಳು, ಅಂಗವಿಕಲರನ್ನು ಮುಖ್ಯವಾಹಿನಿಗೆ ತರಲು ಶ್ರಮಿಸುತ್ತಿರುವ ವಿಶೇಷ ಶಿಕ್ಷಕರಿಗೆ ಕೇಂದ್ರ ಸರ್ಕಾರ ನಿಗದಿ ಪಡಿಸಿರುವ ಕನಿಷ್ಠ ವೇತನ ಸಿಗುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳಿಗೆ, ಇಲಾಖೆ ಸಚಿವರಿಗೆ ಹಾಗೂ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಆದ್ದರಿಂದ ಬುಧವಾರ ಫ್ರೀಡಂ ಪಾರ್ಕ್‌ನಲ್ಲಿ ವಿಶೇಷ ಶಿಕ್ಷಕರು, ಸಿಬ್ಬಂದಿ ಮತ್ತು ವಿಶೇಷ ಮಕ್ಕಳ ಪಾಲಕರು ಸೇರಿ 2000ಕ್ಕೂ ಹೆಚ್ಚು ಜನ ಮುಷ್ಕರದಲ್ಲಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸೋಂಕು ಹೆಚ್ಚಳ ಹಿನ್ನೆಲೆಯಲ್ಲಿ ಪರಿಷ್ಕೃತ ಸುತ್ತೋಲೆ ಹೊರಡಿಸಿದ ಆರೋಗ್ಯ ಇಲಾಖೆ

ಕೋವಿಡ್: ಶಾಲೆ, ಕಚೇರಿ ಮುಚ್ಚಬೇಕಿಲ್ಲ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಶಾಲೆ ಮತ್ತು ಕಚೇರಿಗಳಲ್ಲಿ ಕೋವಿಡ್ ಪ್ರಕರಣಗಳು ದೃಢಪಟ್ಟರೂ ಮುಚ್ಚಬೇಕಾಗಿಲ್ಲ. ಆದರೆ, ಸೋಂಕಿನ ಲಕ್ಷಣ ಹೊಂದಿರುವವರನ್ನು ಬದಲಿಗೆ ನಿರ್ಬಂಧಿಸಿ, ಸ್ವಯಂ ನಿಗಾ ವ್ಯವಸ್ಥೆಗೆ ಒಳಪಡಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿರುವುದರಿಂದ ಬಿಬಿಎಂಪಿ ಹಾಗೂ ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಇಲಾಖೆಯ ಆಯುಕ್ತ ಡಿ. ರಂದೀಪ್ ಪರಿಷ್ಕೃತ ಸುತ್ತೋಲೆ ಹೊರಡಿಸಿದ್ದಾರೆ.

'ವಿದ್ಯಾರ್ಥಿಗಳು ಹಾಗೂ ಉದ್ಯೋಗಿಗಳು ಕೋವಿಡ್ ಲಕ್ಷಣ ಕಾಣಿಸಿಕೊಂಡಾಗ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಗೆ ಒಳಪಡಬೇಕು. ಸೋಂಕಿತರಾಗಿಲ್ಲ ಎಂಬ ವರದಿ ಬಂದಲ್ಲಿ ಆರ್‌ಟಿ-ಪಿಸಿಆರ್ ಪರೀಕ್ಷೆ ಮಾಡಿಸಿಕೊಳ್ಳಬೇಕು. ಕ್ಲಸ್ಟರ್‌ಗಳಲ್ಲಿ ರೋಗ ಲಕ್ಷಣಗಳು ಇರುವವರಿಗೆ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆ ಮಾಡಿಸಬೇಕು. ಕ್ಲಸ್ಟರ್ ಪ್ರಕರಣಗಳು ವರದಿಯಾದ ಶಿಕ್ಷಣ ಸಂಸ್ಥೆಗಳಲ್ಲಿ ಕೊಠಡಿಗಳನ್ನು ಸೋಂಕು ನಿವಾರಕ ದ್ರಾವಣದಿಂದ ಸ್ವಚ್ಛಗೊಳಿಸಬೇಕು' ಎಂದು ಹೇಳಿದ್ದಾರೆ.

'ಅಪಾರ್ಟ್‌ಮೆಂಟ್ ವಸತಿ ಸಮುಚ್ಚಯದಲ್ಲಿ 3–5 ಕೋವಿಡ್ ಪ್ರಕರಣಗಳು ವರದಿಯಾದಲ್ಲಿ ಸಣ್ಣ ಕ್ಲಸ್ಟರ್ ಎಂದು ಪರಿಗಣಿಸಿ, ನಿಗದಿತ ಬ್ಲಾಕ್‌ನಲ್ಲಿ ಲಕ್ಷಣ ಹೊಂದಿರುವವರನ್ನು ಪರೀಕ್ಷೆಗೆ ಒಳಪಡಿಸಬೇಕು. 5ಕ್ಕಿಂತ ಹೆಚ್ಚು ಪ್ರಕರಣಗಳು ವರದಿಯಾದಲ್ಲಿ ದೊಡ್ಡ ಕ್ಲಸ್ಟರ್ ಎಂದು ಪರಿಗಣಿಸಬೇಕು. 15 ಅಥವಾ ಅದಕ್ಕಿಂತ ಹೆಚ್ಚಿನ ಪ್ರಕರಣಗಳು ವರದಿಯಾದಲ್ಲಿ ಅಪಾರ್ಟ್‌ಮೆಂಟ್ ವಸತಿ ಸಮುಚ್ಚಯದಲ್ಲಿ ಲಕ್ಷಣ ಹೊಂದಿರುವ ಎಲ್ಲರನ್ನೂ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಗೆ ಒಳಪಡಿಸಬೇಕು. ಸೋಂಕಿತರಾದಲ್ಲಿ ಆರೋಗ್ಯ ಸ್ಥಿತಿಗೆ ಅನುಗುಣವಾಗಿ ಆಸ್ಪತ್ರೆ, ಆರೈಕೆ ಕೇಂದ್ರ ಅಥವಾ ಮನೆ ಚಿಕಿತ್ಸೆ ನಿರ್ಧರಿಸಬೇಕು' ಎಂದು ತಿಳಿಸಿದ್ದಾರೆ.

'60 ವರ್ಷ ಮೇಲ್ಪಟ್ಟವರು ಹಾಗೂ ಗಂಭೀರ ಅನಾರೋಗ್ಯ ಸಮಸ್ಯೆ ಇರುವವರಿಗೆ ಕೋವಿಡ್ ಲಕ್ಷಣಗಳು ಗೋಚರಿಸಿದರೆ ಆರ್‌ಟಿ-ಪಿಸಿಆರ್ ಪರೀಕ್ಷೆ ಮಾಡಿಸಬೇಕು' ಎಂದಿದ್ದಾರೆ.

ನಗರದಲ್ಲಿ 968 ಪ್ರಕರಣ ದೃಢ

ಬೆಂಗಳೂರು: ಬೆಂಗಳೂರಿನಲ್ಲಿ 887 ಸೇರಿ ರಾಜ್ಯದಲ್ಲಿ 968 ಮಂದಿ ಕೋವಿಡ್ ಪೀಡಿತರಾಗಿರುವುದು ಮಂಗಳವಾರ ದೃಢಪಟ್ಟಿದೆ. ಇದರಲ್ಲಿ ಹಳೆಯ ಪ್ರಕರಣಗಳೂ ಸೇರಿವೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ತಾಂತ್ರಿಕ ಕಾರಣದಿಂದ ವಾರದಿಂದ ಸೋಂಕು ದೃಢ ಪ್ರಕರಣಗಳ ದಾಖಲಾತಿಯಲ್ಲಿ ವ್ಯತ್ಯಾಸವಾಗಿತ್ತು. ಆ ಪ್ರಕರಣಗಳನ್ನು ಸೇರಿಸಿದ್ದರಿಂದ ಮಂಗಳವಾರ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗಿದೆ.

ಒಂದು ದಿನದ ಅವಧಿಯಲ್ಲಿ 17,784 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 5.44ರಷ್ಟಿದೆ. ಕೋವಿಡ್ ಪೀಡಿತರಲ್ಲಿ ದಕ್ಷಿಣ ಕನ್ನಡದಲ್ಲಿ 78 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ರಾಜ್ಯದಲ್ಲಿ 4,918 ಸಕ್ರಿಯ ಪ್ರಕರಣಗಳಿವೆ. ಬೆಂಗಳೂರಿನಲ್ಲಿಯೇ 4,682 ಸೋಂಕಿತರು ಇದ್ದಾರೆ. ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.66 ಲಕ್ಷಕ್ಕೆ ಏರಿಕೆಯಾಗಿದೆ. 39.21 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ಕೋವಿಡ್‌ಗೆ ಈವರೆಗೆ ಮೃತಪಟ್ಟವರ ಒಟ್ಟು ಸಂಖ್ಯೆ 40,073ಕ್ಕೆ ಏರಿಕೆಯಾಗಿದೆ.

'ಎಂಆರ್‌ಎನ್‌ಎ ಕೋವಿಡ್ ಲಸಿಕೆ' ಬಳಕೆಗೆ ಡಿಸಿಜಿಐ ಅನುಮೋದನೆ

ನವದೆಹಲಿ (ಪಿಟಿಐ): ದೇಶೀಯವಾಗಿಯೇ ಅಭಿವೃದ್ಧಿಪಡಿಸಲಾಗಿರುವ 'ಎಂಆರ್‌ಎನ್‌ಎ' ಆಧಾರಿತ ಕೋವಿಡ್ ಲಸಿಕೆಯನ್ನು 18 ವರ್ಷ ಹಾಗೂ ಮೇಲ್ಪಟ್ಟ ವಯೋಮಾನದವರಿಗಾಗಿ ಸೀಮಿತವಾಗಿ ತುರ್ತು ಸಂದರ್ಭದಲ್ಲಿ ನೀಡಲು ಭಾರತೀಯ ಔಷಧ ಮಹಾ ನಿಯಂತ್ರಕರು (ಡಿಸಿಜಿಐ) ಮಂಗಳವಾರ ಅನುಮೋದನೆ ನೀಡಿದ್ದಾರೆ.

ಜೆನ್ನೋವಾ ಬಯೋಫಾರ್ಮಾಸ್ಯೂಟಿಕಲ್ ಕಂಪನಿ ಈ ಲಸಿಕೆಯನ್ನು ತಯಾರಿಸಿದ್ದು, 2–8 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಈ ಲಸಿಕೆಯನ್ನು ಶೇಖರಿಸಿ ಇಡಬಹುದು ಎಂದು ಮೂಲಗಳು ಹೇಳಿವೆ.

7 ರಿಂದ 11 ವರ್ಷದೊಳಗಿನ ಮಕ್ಕಳಿಗೆ, ಸೀರಂನ ಕೋವಿಡ್ ಲಸಿಕೆ 'ಕೊವೊವ್ಯಾಕ್ಸ್' ಅನ್ನು ಕೆಲವು ನಿಬಂಧನೆಗಳಿಗೆ ಒಳಪಟ್ಟು ತುರ್ತು ಸಂದರ್ಭದಲ್ಲಿ ನೀಡಲು ಸಹ ಡಿಸಿಜಿಐ ಅನುಮೋದನೆ ನೀಡಿದೆ.

ಸುದ್ದಿ 2 ನಿಮಿಷ

ಸಂಪಿನಲ್ಲಿ ಬಿದ್ದು ಬಾಲಕ ಸಾವು

ಬೆಂಗಳೂರು: ವಿದ್ಯಾರಣ್ಯಪುರ ಠಾಣೆ ವ್ಯಾಪ್ತಿಯ ನಿರ್ಮಾಣ ಹಂತದ ಮನೆಯೊಂದರ ನೀರಿನ ಸಂಪಿನಲ್ಲಿ ಬಿದ್ದು ಸಾಯಿ ಶರಣ್ (15) ಎಂಬಾತ ಮೃತಪಟ್ಟಿದ್ದು, ಮನೆ ಮಾಲೀಕನ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ವಡೇರಹಳ್ಳಿಯ ಸಾಯಿ ಶರಣ್ (15), ಪೋಷಕರ ಜೊತೆ ವಾಸವಿದ್ದ, ಈತನ ತಂದೆ ಟೈಲರ್ ಆಗಿದ್ದಾರೆ. ತಾಯಿ ಗೃಹಿಣಿ. ಸಾಯಿ ಶರಣ್ ಸಾವಿನ ಬಗ್ಗೆ ಪೋಷಕರಿಂದ ದೂರು ಪಡೆದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಾಲಕ ಸಾಯಿ ಶರಣ್ ಮನೆ ಮುಂದಿನ ರಸ್ತೆಯಲ್ಲಿ ಸ್ನೇಹಿತರ ಜೊತೆ ಸೋಮವಾರ ಸಂಜೆ ಆಟವಾಡುತ್ತಿದ್ದ. ಸಮೀಪದಲ್ಲಿ ಮನೆಯೊಂದನ್ನು ನಿರ್ಮಿಸಲಾಗುತ್ತಿದ್ದು, ಶೇ 90ರಷ್ಟು ಕೆಲಸ ಮುಗಿದಿದೆ. ಅದೇ ಸ್ಥಳದಲ್ಲಿ ನೀರಿನ ಸಂಪು ಇದ್ದು, ಮುಚ್ಚಳವನ್ನು ತೆಗೆದಿಡಲಾಗಿತ್ತು.'

'ಆಟವಾಡುತ್ತ ಬಾಲಕ ನೀರಿನ ಸಂಪಿನ ಬಳಿ ಹೋಗಿ ಆಯತಪ್ಪಿ ಬಿದ್ದಿದ್ದ. ರಾತ್ರಿಯಾದರೂ ಬಾಲಕ ಮನೆಗೆ ಬಾರದಿದ್ದರಿಂದ ಗಾಬರಿಗೊಂಡ ಪೋಷಕರು ಹಲವೆಡೆ ಹುಡುಕಾಡಿದರೂ ಸುಳಿವು ಸಿಕ್ಕಿರಲಿಲ್ಲ. ಸ್ಥಳೀಯರೊಬ್ಬರು ನೀರಿನ ಸಂಪಿನಲ್ಲಿ ನೋಡಿದಾಗ ಮೃತದೇಹ ಕಂಡಿತ್ತು' ಎಂದು ಮೂಲಗಳು ತಿಳಿಸಿವೆ.

'ನಿರ್ಲಕ್ಷ್ಯ ವಹಿಸಿ ಬಾಲಕನ ಸಾವಿಗೆ ಕಾರಣವಾದ ಆರೋಪದಡಿ ಮನೆ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಿ ಪೊಲೀಸ್ ಮೂಲಗಳು ಹೇಳಿವೆ.

ತುರ್ತು ಆಕ್ಸಿಜನ್ ಜನರೇಟರ್ಸ್ ಸ್ಥಾಪನೆ



ಬೆಂಗಳೂರು: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರು ಹಾಗೂ ಸಿಬ್ಬಂದಿಯ ಅನುಕೂಲಕ್ಕೆ ವೈದ್ಯಕೀಯ ತುರ್ತು ಸಂದರ್ಭದಲ್ಲಿ ಜೀವ ಉಳಿಸುವ ಸಲುವಾಗಿ ವಿಮಾನ ನಿಲ್ದಾಣದಲ್ಲಿ 10 ತುರ್ತು ಆಮ್ಲಜನಕ ಜನರೇಟರ್ ಸ್ಥಾಪಿಸಲಾಗಿದೆ.

ಪ್ರಯಾಣಿಕರ ನಿರ್ಗಮನ ಹಾಗೂ ಆಗಮನದ ಪ್ರದೇಶದಲ್ಲಿ ಹೃದಯಾಘಾತ, ಉಸಿರಾಟದ ತೊಂದರೆ, ಮೂರ್ಛೆ ಅಥವಾ ಇತರೆ ಉಸಿರಾಟದ ಸಮಸ್ಯೆ ಉಳ್ಳವರಿಗೆ ತುರ್ತಾಗಿ ಆಮ್ಲಜನಕ ಒದಗಿಸುವ ಉದ್ದೇಶದಿಂದ ಈ ಸೇವೆ ಪ್ರಾರಂಭಿಸಲಾಗಿದೆ. 40 ನಿಮಿಷದವರೆಗೆ ಶೇ 99.7 ಶುದ್ಧ ವೈದ್ಯಕೀಯ ದರ್ಜೆಯ ಆಮ್ಲಜನಕವನ್ನು ಒದಗಿಸುತ್ತದೆ. ಅಸ್ವಸ್ಥ ರೋಗಿಯನ್ನು ಆಸ್ಪತ್ರೆಗೆ ಸಾಗಿಸುವ ತನಕವೂ ಈ ನೆರವು ನೀಡುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಪ್ರಯಾಣಿಕರ ಆರೋಗ್ಯ ಮತ್ತು ಸುರಕ್ಷತೆ ರಕ್ಷಿಸುವುದು ನಮ್ಮ ಪ್ರಮುಖ ಆದ್ಯತೆ' ಎಂದು ಬಿಐಎಎಲ್ ವಕ್ತಾರರು ತಿಳಿಸಿದ್ದಾರೆ.



ಗೊರಗುಂಟೆಪಾಳ್ಯದಲ್ಲಿ ಸಂಚಾರ ದಟ್ಟಣೆ ಸಮಸ್ಯೆಯನ್ನು ಅಧಿಕಾರಿಗಳ ತಂಡ ಪರಿಶೀಲಿಸಿತು. ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್‌ಸಿಂಗ್, ಜಲ ಮಂಡಳಿ ಅಧ್ಯಕ್ಷ ಎನ್. ಜಯರಾಮ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಇದ್ದರು

ಸಂಚಾರ ದಟ್ಟಣೆ ಸಮಸ್ಯೆ: ಮಾರ್ಗೋಪಾಯ ಪರಿಶೀಲನೆ

ಬೆಂಗಳೂರು: ಸಂಚಾರ ದಟ್ಟಣೆ ಹೆಚ್ಚಿರುವ ಪ್ರಮುಖ ಜಂಕ್ಷನ್‌ಗಳಲ್ಲಿ ಸುಗಮ ಸಂಚಾರಕ್ಕೆ ಇರುವ ಮಾರ್ಗೋಪಾಯಗಳ ಬಗ್ಗೆ ಪರಿಶೀಲನೆ ನಡೆಸಲು ಬಿಬಿಎಂಪಿ, ಬಿಡಿಎ, ಜಲ ಮಂಡಳಿ, ಪೊಲೀಸ್, ಬೆಸ್ಕಾಂ ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳ ತಂಡ ಮಂಗಳವಾರ ರಾತ್ರಿ ನಗರ ಸಂಚಾರ ನಡೆಸಿತು.

ಗೊರಗುಂಟೆಪಾಳ್ಯ, ಹೆಬ್ಬಾಳ, ಕೆ.ಆರ್.ಪುರ ಮತ್ತು ಸಿಲ್ಕ್ ಬೋರ್ಡ್ ಜಂಕ್ಷನ್‌ಗಳಿಗೆ ತಂಡ ಭೇಟಿ ನೀಡಿತ್ತು. ಮೊದಲಿಗೆ ಗೊರಗುಂಟೆ ಪಾಳ್ಯದಲ್ಲಿ ರಸ್ತೆ ಹಾಳಾಗಿರುವುದು, ಸಾರ್ವಜನಿಕ ಶೌಚಾಲಯ ಇಲ್ಲದಿರುವುದು, ಪಾದಚಾರಿಗಳು ರಸ್ತೆ ದಾಟಲು ಇರುವ ತೊಂದರೆಗಳನ್ನು ಸರಿಪಡಿಸುವ ಬಗ್ಗೆ ಸ್ಥಳ ಪರಿಶೀಲನೆ ನಡೆಸಿತು.

'ರಸ್ತೆ ದುರಸ್ತಿ, ಶೌಚಾಲಯ, ಪಾದಚಾರಿ ಮೇಲ್ಸೇತುವೆಗಳನ್ನು ತುರ್ತಾಗಿ ನಿರ್ಮಿಸಬೇಕಿದೆ. ಅದಕ್ಕೆ ಬೇಕಿರುವ ಕಾರ್ಯಯೋಜನೆಯನ್ನು ಬುಧವಾರದಿಂದಲೇ ಆರಂಭಿಸಲಾಗುವುದು. ಸಂಚಾರ ದಟ್ಟಣೆ ಸಮಸ್ಯೆ ಸರಿಪಡಿಸಲು ದೀರ್ಘಕಾಲದ ಯೋಜನೆಯನ್ನು ಬಿಡಿಎ ಸಿದ್ಧಪಡಿಸಿದೆ. ಅನುಷ್ಠಾನದ ಸಾಧಕ–ಬಾಧಕಗಳ ಬಗ್ಗೆಯೂ ಪರಿಶೀಲಿಸಲಾಗುವುದು' ಎಂದು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹೇಳಿದರು.

'ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್‌ಗಳ ಸಂಚಾರವನ್ನು ನಗರದೊಳಗೆ ನಿರ್ಬಂಧಿಸಿ ಪೀಣ್ಯ ಬಸ್ ನಿಲ್ದಾಣ ಬಳಿಯೇ ಬಸ್ ನಿಲುಗಡೆ ಮಾಡಿಸುವ ಸಂಬಂಧ ಕೆಎಸ್‌ಆರ್‌ಟಿಸಿಗೂ ಮನವಿ ಮಾಡಲಾಗಿದೆ. ಈ ಬಗ್ಗೆ ಇನ್ನೂ ಅಂತಿಮ ನಿರ್ಧಾರ ಕೈಗೊಂಡಿಲ್ಲ' ಎಂದು ತಿಳಿಸಿದರು.

'ರಸ್ತೆ ದುರಸ್ತಿ ಕಾರ್ಯವನ್ನು ಕೂಡಲೇ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು. ಪೀಣ್ಯ(ಶಿವಕುಮಾರಸ್ವಾಮಿ) ಮೇಲ್ಸೇತುವೆ ಮೇಲೆ ಭಾರಿ ವಾಹನಗಳ ಸಂಚಾರಕ್ಕೂ ಅವಕಾಶ ದೊರೆತರೆ ಸಂಚಾರ ದಟ್ಟಣೆ ಸಮಸ್ಯೆ ಸುಧಾರಿಸಲಿದೆ. ಈ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಜತೆ ಚರ್ಚಿಸಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ನಗರ ಪೊಲೀಸ್ ಕಮಿಷನರ್ ಪ್ರತಾಪರೆಡ್ಡಿ, ಬಿಡಿಎ ಆಯುಕ್ತ ರಾಜೇಶ್‌ಗೌಡ, ಜಲ ಮಂಡಳಿ ಅಧ್ಯಕ್ಷ ಜಯರಾಮ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ತಂಡದಲ್ಲಿದ್ದರು.

'ಟಿಕೆಟ್ ಕೇಳಿಲ್ಲ'

ಮಂಡ್ಯ: 'ಮುಂದಿನ ಲೋಕಸಭಾ ಚುನಾವಣೆಯಲ್ಲಿ ನಾನು ಮಂಡ್ಯ ಕ್ಷೇತ್ರ ಬಿಟ್ಟು ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ಸ್ಪರ್ಧಿಸುತ್ತೇನೆ ಎಂಬುದು ಶುದ್ಧ ಸುಳ್ಳು' ಎಂದು ಸಂಸದೆ ಸುಮಲತಾ ಹೇಳಿದರು.

ಕೆವಿಪಿವೈ ಪರೀಕ್ಷೆ: ವೆಚ್ಚಜ್ಞಾನ, ಶಿಶಿರ್‌ಗೆ ಮೊದಲೆರಡು ರ‍್ಯಾಂಕ್

ಪ್ರಜಾವಾಣಿ ವಾರ್ತೆ



ವೆಚ್ಚಜ್ಞಾನ ಮಹೇಶ್



ಶಿಶಿರ್ ಆರ್.ಕೆ.



ಬೋಯ ಹರೇನ್ ಸಾತ್ವಿಕ್

ಬೆಂಗಳೂರು: ಕಿಶೋರ ವಿಜ್ಞಾನಿಕಪ್ರೋತ್ಸಾಹ ಯೋಜನೆ (ಕೆವಿಪಿವೈ) ಪರೀಕ್ಷೆಯ ಅಖಿಲ ಭಾರತ ಮುಕ್ತ ವರ್ಗದಲ್ಲಿ ವೆಚ್ಚಜ್ಞಾನ ಮಹೇಶ್, ಶಿಶಿರ್ ಆರ್.ಕೆ. ಮತ್ತು ಬೋಯಹರೇನ್ ಸಾತ್ವಿಕ್ ಕ್ರಮವಾಗಿ 1, 2 ಮತ್ತು 8ನೇ ರ‍್ಯಾಂಕ್ ಗಳಿಸಿದ್ದಾರೆ. ಮೂವರೂ ನಾರಾಯಣ ಎಜುಕೇಶನಲ್ ಇನ್‌ಸ್ಟಿಟ್ಯೂಟ್‌ನ 12ನೇ ತರಗತಿ ವಿದ್ಯಾರ್ಥಿಗಳು.

ನಾರಾಯಣ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಕಿಶೋರ್ ವೈಜ್ಞಾನಿಕ ಪ್ರಚಾರ ಯೋಜನೆಯ ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಅಗ್ರ 20ರಲ್ಲಿ 9 ರ‍್ಯಾಂಕ್‌ಗಳನ್ನು ಮತ್ತು ರಾಷ್ಟ್ರೀಯ ಮುಕ್ತ ವಿಭಾಗದಲ್ಲಿ ಅಗ್ರ 100ರ ಪೈಕಿ ನಾಲ್ಕನೇ ಒಂದರಷ್ಟು ರ‍್ಯಾಂಕ್‌ಗಳನ್ನು ಗಳಿಸಿ, ಪ್ರಾಬಲ್ಯ ಸಾಧಿಸಿದ್ದಾರೆ. ನಾರಾಯಣ ಶಾಲೆಗಳು ಪಿಡಬ್ಲ್ಯುಡಿ ವರ್ಗದಲ್ಲಿಯೂ ಪ್ರಥಮ ಸ್ಥಾನ ಪಡೆದಿವೆ. ಸಂಸ್ಥೆಯ ಸಮರ್ಥ ತರಬೇತಿ ಮತ್ತು ಮಾರ್ಗದರ್ಶನಕ್ಕೆ ಇದೇ ಸಾಕ್ಷಿ ಎಂದು ನಾರಾಯಣ ಸಮೂಹದ ನಿರ್ದೇಶಕರಾದ ಡಾ. ಪಿ. ಸಿಂಧೂರ ಪ್ರತಿಕ್ರಿಯಿಸಿದರು.

ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್‌ಸಿ, ಬೆಂಗಳೂರು) ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆ ಮಾರ್ಗದರ್ಶನದಲ್ಲಿ ಕೆವಿಪಿವೈ ಪರೀಕ್ಷೆಗಳನ್ನು ನಡೆಸುತ್ತದೆ. ಫಲಿತಾಂಶಗಳು ಮತ್ತು ಶ್ರೇಯಾಂಕದ ಆಧಾರದ ಮೇಲೆ, ಐಐಎಸ್‌ಸಿಗೆ ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶ ಮತ್ತು ಫೆಲೋಶಿಪ್ ನೀಡಲಾಗುತ್ತದೆ. ಅವರು ಇಂಟಿಗ್ರೇಟೆಡ್ ಎಂಎಸ್‌ಗೆ ದಾಖಲಾಗಲು ಮತ್ತು ಶುದ್ಧ ವಿಜ್ಞಾನದಲ್ಲಿ ಪಿಎಚ್.ಡಿ. ಪೂರ್ಣಗೊಳ್ಳುವವರೆಗೆ ವಿದ್ಯಾರ್ಥಿ ವೇತನಕ್ಕೆ ಅರ್ಹತೆ ಪಡೆಯುವ ಅವಕಾಶ ಪಡೆಯುತ್ತಾರೆ.

ಲೋಕಾಯುಕ್ತ ಪೊಲೀಸರಿಂದ ಶೋಧ

ಬೆಂಗಳೂರು: ಭ್ರಷ್ಟಾಚಾರ ಮತ್ತು ದುರಾಡಳಿತದ ದೂರುಗಳನ್ನು ಆಧರಿಸಿ ನಗರದ ಉಪ ನೋಂದಣಿ ಕಚೇರಿಗಳಲ್ಲಿ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು, ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಸೋಮವಾರ ಮತ್ತು ಮಂಗಳವಾರ ಒಟ್ಟು 20 ಕಚೇರಿಗಳಲ್ಲಿ ಶೋಧ ನಡೆಸಲಾಗಿದೆ.

ನೂತನ ಲೋಕಾಯುಕ್ತ ಬಿ.ಎಸ್. ಪಾಟೀಲ ಅವರ ನಿರ್ದೇಶನದಂತೆ ಸಂಸ್ಥೆಯ ಪೊಲೀಸ್ ವಿಭಾಗದ ಅಧಿಕಾರಿಗಳು ಕಾರ್ಯಾಚರಣೆ ಆರಂಭಿಸಿದ್ದಾರೆ. ಸೋಮವಾರ ಹತ್ತು ಉಪ ನೋಂದಣಿ ಕಚೇರಿಗಳಲ್ಲಿ ದಿಢೀರ್ ಶೋಧ ನಡೆಸಲಾಗಿತ್ತು. ಮಂಗಳವಾರವೂ ಹತ್ತು ಕಚೇರಿಗಳಲ್ಲಿ ಶೋಧ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ನೋಂದಣಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ, ಅಕ್ರಮ, ಸಾರ್ವಜನಿಕರನ್ನು ಸತಾಯಿಸುವುದು ಮತ್ತಿತರ ದೂರುಗಳು ಲೋಕಾಯುಕ್ತ ಕಚೇರಿಗೆ ಬಂದಿದ್ದವು. ಈ ಕುರಿತು ಪರಿಶೀಲನೆ ನಡೆಸಿ ವರದಿ ನೀಡುವಂತೆ ಲೋಕಾಯುಕ್ತರು ಪೊಲೀಸ್ ವಿಭಾಗಕ್ಕೆ ನಿರ್ದೇಶನ ನೀಡಿದ್ದಾರೆ. ಹಲವು ಕಚೇರಿಗಳಲ್ಲಿ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಎಲ್ಲವನ್ನೂ ಪರಿಶೀಲಿಸಿದ ಬಳಿಕ ವರದಿ ಸಲ್ಲಿಸಲಾಗುವುದು' ಎಂದು ಮೂಲಗಳು ಹೇಳಿವೆ.

ಕದ್ದ ಚಿನ್ನ ಬಾಗಿಲ ಬಳಿ ಇಟ್ಟುಹೋದ ಕಳ್ಳರು

ಅಪರಾಧ ಸುದ್ದಿ

ಬೆಂಗಳೂರು: ಮನೆಯೊಂದಕ್ಕೆ ನುಗ್ಗಿ ಚಿನ್ನಾಭರಣ ಕದ್ದೊಯ್ದಿದ್ದ ಕಳ್ಳರು, ಅದೇ ಚಿನ್ನಾಭರಣವನ್ನು ವಾಪಸು ಮನೆ ಬಾಗಿಲು ಬಳಿ ಇಟ್ಟು ಹೋಗಿರುವ ಘಟನೆ ಬಾಗಲೂರು ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

'ಠಾಣೆ ವ್ಯಾಪ್ತಿಯಲ್ಲಿ ನೆಲೆಸಿರುವ ಉದ್ಯಮಿ ಭರತ್ ಮನೆಯಲ್ಲಿ ಜೂನ್ 14ರಂದು ಕಳ್ಳತನ ಆಗಿತ್ತು. ಮರುದಿನವೇ ಕಳ್ಳರು ಮನೆ ಬಾಗಿಲು ಬಳಿ ಚಿನ್ನಾಭರಣ ಇಟ್ಟುಹೋಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಭರತ್ ಅವರು ಕುಟುಂಬ ಸಮೇತ ದೇವಸ್ಥಾನವೊಂದಕ್ಕೆ ಹೋಗಿದ್ದರು. ಮನೆಗೆ ಬೀಗ ಹಾಕಲಾಗಿತ್ತು. ಇದನ್ನು ಗಮನಿಸಿದ್ದ ಕಳ್ಳರು ಬಾಗಿಲು ಮೀಟಿ ಮನೆಯೊಳಗೆ ನುಗ್ಗಿ 110 ಗ್ರಾಂ ಚಿನ್ನಾಭರಣ ಕದ್ದೊಯ್ದಿದ್ದರು. ಭರತ್ ಅವರು ದೇವಸ್ಥಾನದಿಂದ ವಾಪಸು ಮನೆಗೆ ಬಂದಿದ್ದಾಗ ಕಳ್ಳತನ ಗಮನಕ್ಕೆ ಬಂದಿತ್ತು. ಠಾಣೆಗೆ ಮಾಹಿತಿ ನೀಡಿದ್ದರು.'

'ಬೆರಳಚ್ಚು ಹಾಗೂ ಶ್ವಾನ ದಳದ ಸಿಬ್ಬಂದಿ ಸಮೇತ ಮನೆಯಲ್ಲಿ ಪರಿಶೀಲನೆ ನಡೆಸಲಾಗಿತ್ತು. ಆರೋಪಿಗಳ ಸುಳಿವು ಪತ್ತೆಗಾಗಿ ಶೋಧ ಆರಂಭಿಸಲಾಗಿತ್ತು. ಜೂನ್ 15ರಂದು ಬೆಳಿಗ್ಗೆ ಮನೆ ಬಾಗಿಲು ಬಳಿ ಬಟ್ಟೆಯಲ್ಲಿ ಚಿನ್ನಾಭರಣ ಸುತ್ತಿಡಲಾಗಿತ್ತು. ಅದನ್ನು ನೋಡಿದ್ದ ಮನೆಯವರು, ಠಾಣೆಗೆ ಮಾಹಿತಿ ನೀಡಿದ್ದರು. ಕಳ್ಳತನ ಮಾಡಿದವರು ಯಾರು ಹಾಗೂ ಚಿನ್ನಾಭರಣ ತಂದಿಟ್ಟು ಹೋದವರು ಯಾರು ಎಂಬುದನ್ನು ಪತ್ತೆ ಮಾಡುತ್ತಿದ್ದೇವೆ' ಎಂದೂ ಹೇಳಿವೆ.

ನಗರದಲ್ಲಿ ಇಂದು

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ವತಿಯಿಂದ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಬಹೂಪಯೋಗಿ ಕಟ್ಟಡ ನಿರ್ಮಾಣದ ಶಂಕುಸ್ಥಾಪನೆ, ಜಯನಗರ ಅಗ್ನಿಶಾಮಕ ಠಾಣೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ: ಉಪಸ್ಥಿತಿ: ಆರಗ ಜ್ಞಾನೇಂದ್ರ, ಅಧ್ಯಕ್ಷತೆ: ಉದಯ್. ಬಿ. ಗರುಡಾಚಾರ್, ಆಯೋಜನೆ: ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಸ್ಥಳ: ಆರ್.ಎ.ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ ನಿರ್ಮಾಣ ಮಾಡಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜಾನಪದ ಕಲಾವಿದರ ಸಾಕ್ಷ್ಯಚಿತ್ರಗಳ ಬಿಡುಗಡೆ ಸಮಾರಂಭ: ಸಾಕ್ಷ್ಯಚಿತ್ರ ಬಿಡುಗಡೆ: ಡಾ.ಅರವಿಂದ ಮಾಲಗತ್ತಿ, ಅಧ್ಯಕ್ಷತೆ: ಬಿ.ಮಂಜಮ್ಮ ಜೋಗತಿ, ಉಪಸ್ಥಿತಿ: ಡಾ.ಎನ್. ಮಂಜುಳಾ, ಅತಿಥಿಗಳು: ಪ್ರಕಾಶ್.ಜಿ.ಟಿ.ನಿಟ್ಟಾಲಿ, ಆಯೋಜನೆ: ಕರ್ನಾಟಕ ಜಾನಪದ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11



ಡಾ.ಅರವಿಂದ ಮಾಲಗತ್ತಿ

ಗುರುವಂದನಾ ಕಾರ್ಯಕ್ರಮ: ಸಾನ್ನಿಧ್ಯ: ವಿಧುಶೇಖರ ಭಾರತೀ ಸ್ವಾಮೀಜಿ, ಆಯೋಜನೆ: ವಿಪ್ರ ಸೇವಾ ಟ್ರಸ್ಟ್, ಸ್ಥಳ: ಹೊಯ್ಸಳ ಆಟದ ಮೈದಾನ, ಯಲಹಂಕ, ಉಪನಗರ ಬಸ್ ನಿಲ್ದಾಣದ ಹಿಂಭಾಗ, ಸಂಜೆ 4

ಕನ್ನಡ ಚಿಂತನ ಸಮಾವೇಶ: ಉದ್ಘಾಟನೆ: ಡಾ.ಮನು ಬಳಿಗಾರ್, ಅತಿಥಿಗಳು: ಡಾ.ಆರ್. ವಾದಿರಾಜು, ಡಾ.ಶ್ರೀಲತಾ.ಎ., ಅಧ್ಯಕ್ಷತೆ: ವ.ಚ. ಚನ್ನೇಗೌಡ, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5



ದೀಪಾ ನಾರಾಯಣನ್ ಸಶೀಂದ್ರನ್

ನಂದನಾರ್ ಚರಿತ್ರಂ-(ಕೂಚಿಪುಡಿ ನೃತ್ಯನಾಟಕ): ನಿರ್ದೇಶನ ಮತ್ತು ನೃತ್ಯ ಸಂಯೋಜನೆ: ದೀಪಾ ನಾರಾಯಣನ್ ಸಶೀಂದ್ರನ್, ಸಂಗೀತ ಸಂಯೋಜನೆ ಮತ್ತು ವಾದ್ಯ ಸಂಯೋಜನೆ- ಶ್ವೇತಾ ಪ್ರಸಾದ್, ಸ್ಥಳ: ಸೇವಾ ಸದನ ಸಭಾಂಗಣ ಮಲ್ಲೇಶ್ವರ, ಸಂಜೆ 6

ನಕಲಿ ವಲಸೆ ಪ್ರಮಾಣಪತ್ರ: ತನಿಖೆಗೆ ಸಮಿತಿ

ಬೆಂಗಳೂರು: ಪೋಷಕರೊಬ್ಬರು ತಮ್ಮ ಮಗುವಿಗೆ ಪ್ರತಿಷ್ಠಿತ ಶಾಲೆಯಲ್ಲಿ ಆರ್‌ಟಿಇ ಕೋಟಾದಲ್ಲಿ ಸೀಟು ಗಿಟ್ಟಿಸಿಕೊಳ್ಳಲು ಸಲ್ಲಿಸಿದ್ದ ನಕಲಿ ವಲಸೆ ಪ್ರಮಾಣಪತ್ರವನ್ನು ಮಂಜೂರು ಮಾಡಿದ ಬೆಂಗಳೂರು ದಕ್ಷಿಣ-1ರ ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ವಿರುದ್ಧ ಸಲ್ಲಿಕೆಯಾದ ದೂರಿಗೆ ಸಂಬಂಧಿಸಿದಂತೆ ತನಿಖೆಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಮುಂದಾಗಿದೆ.

ಆರ್‌ಟಿಇ ವಿದ್ಯಾರ್ಥಿಗಳು ಮತ್ತು ಪೋಷಕರ ಸಂಘಟನೆ ಈ ದೂರು ನೀಡಿತ್ತು. ಈ ಬಗ್ಗೆ ವಿಚಾರಣೆಗೆ ನಾಲ್ವರು ಸದಸ್ಯರ ಸಮಿತಿಯನ್ನು ಇಲಾಖೆರಚಿಸಿದೆ.

ತಮ್ಮ ಮಕ್ಕಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ ಆರ್‌ಟಿಇ ಕೋಟದಲ್ಲಿ ಸೀಟು ಗಿಟ್ಟಿಸಿಕೊಳ್ಳಲು ಕೆಲವು ಪೋಷಕರು ಸಲ್ಲಿಸಿದ್ದ ನಕಲಿ ವಲಸೆ ಪ್ರಮಾಣ ಪತ್ರವನ್ನು ಬೆಂಗಳೂರು ದಕ್ಷಿಣ-1ರ ಕ್ಷೇತ್ರದ ಶಿಕ್ಷಣಾಧಿಕಾರಿ ಪ್ರಕಾಶ್ ಅವರು ಅನುಮೋದಿಸಿದ್ದರು ಎಂದು ಸಂಘಟನೆ ದೂರು ನೀಡಿತ್ತು.

'ಬಿಇಒ ಒಬ್ಬರಲ್ಲೇ ಅಲ್ಲ, ನಕಲಿ ವಲಸೆ ಪ್ರಮಾಣಪತ್ರಗಳನ್ನು ನೀಡಿದ ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನೂ ವಿಚಾರಣೆಗೆ ಒಳಪಡಿಸುವಂತೆ ನಾವು ಒತ್ತಾಯಿಸಿದ್ದೇವೆ' ಎಂದು ಸಂಘಟನೆ ಕಾರ್ಯಕಾರಿ ಸಮಿತಿ ಸದಸ್ಯ ಬಿ.ಎನ್. ಯೋಗಾನಂದ ಅವರು ತಿಳಿಸಿದರು.

‘ತಿದ್ದೋಲೆ ಪ್ರಕಟಣೆ ಸಂವಿಧಾನವನ್ನೇ ಅಣಕಿಸುವಂತಿದೆ’

ಪ್ರಜಾವಾಣಿ ವಾರ್ತೆ



ನಿರಂಜನಾರಾಧ್ಯ ವಿ.ಪಿ.

ಬೆಂಗಳೂರು: ಪಠ್ಯಪುಸ್ತಕ ಪರಿಷ್ಕರಣೆ ಹೆಸರಿನಲ್ಲಿ ಮಕ್ಕಳಿಗೆ ವಿಷ ಪ್ರಾಶನ ಮಾಡಿಸುವ ಕೆಲಸದಲ್ಲಿ ಸರ್ಕಾರವನ್ನು ಬಾಹ್ಯವಾಗಿ ನಿಯಂತ್ರಿಸುತ್ತಿರುವ ಸಂವಿಧಾನವನ್ನೂ ಮೀರಿದ ಶಕ್ತಿಗಳು ಈಗ ರಾಜ್ಯ ಸರ್ಕಾರದ ಮೂಲಕ ತಿದ್ದೋಲೆ ಕೊಡಿಸಿರುವ ಕ್ರಮವು ಸಂವಿಧಾನವನ್ನೇ ಅಣಕಿಸುವಂತಿದೆ ಎಂದು ಶಿಕ್ಷಣ ತಜ್ಞ ಹಾಗೂ ಕರ್ನಾಟಕ ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆಯ ಮಹಾ ಪೋಷಕ ನಿರಂಜನಾರಾಧ್ಯ ವಿ.ಪಿ. ಟೀಕಿಸಿದ್ದಾರೆ.

ಪರಿಷ್ಕೃತ ಪಠ್ಯಪುಸ್ತಕಗಳಲ್ಲಿನ ತಪ್ಪುಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ಸೋಮವಾರ ಪ್ರಕಟಿಸಿರುವ ತಿದ್ದುಪಡಿಗಳ ಕುರಿತು ಪತ್ರಿಕಾ ಹೇಳಿಕೆ ಮೂಲಕ ಪ್ರತಿಕ್ರಿಯಿಸಿರುವ ಅವರು, ‘ತಿದ್ದೋಲೆ ಹೊರಡಿಸಲು ಅನುಮತಿಸಿರುವ ಆದೇಶವು ವಿಷವುಣಿಸಿ ವ್ಯಕ್ತಿ ಸಾಯುವ ಮುನ್ನ ನೀರು ಕೊಡಲು ಕರುಣಿಸಿದಂತಿದೆ. ವಿಷವುಣಿಸಿದ ಘೋರ ಅಪರಾಧವನ್ನು ಮುಚ್ಚಿಹಾಕಿ, ಅಪರಾಧವೇ ನಡೆದಿಲ್ಲ ಎಂಬಂತೆ ಬಿಂಬಿಸಲು ಹೊರಟಿರುವುದು ಇಡೀ ಪ್ರಕ್ರಿಯೆಯ ಹಿಂದಿರುವ ಕುತಂತ್ರ ಹಾಗೂ ಹುನ್ನಾರಗಳನ್ನು ಬೆತ್ತಲೆಗೊಳಿಸಿ-ದೆ’ ಎಂದಿದ್ದಾರೆ.

ದಮನಿತ ಮತ್ತು ಅವಕಾಶ ವಂಚಿತ ಸಮುದಾಯಗಳ ಮಕ್ಕಳಿಗೆ ಸಾವಿರಾರು ವರ್ಷಗಳಿಂದ ಅಕ್ಷರ ವಂಚಿಸಲಾಗಿತ್ತು. ಈಗ ಮತ್ತೆ ಅದೇ ಪ್ರಯತ್ನವನ್ನು ಪಠ್ಯಪುಸ್ತಕ ಪರಿಷ್ಕರಣೆ ಹೆಸರಿನಲ್ಲಿ ಮಾಡಲಾಗುತ್ತಿದೆ. ಸರ್ಕಾರ ಹೊರಡಿಸಿರುವ ತಿದ್ದೋಲೆಯು ಅಕ್ಷರ ವಂಚನೆ ಸಂಸ್ಕೃತಿಯನ್ನು ಮುಂದುವರಿಸುವ ಪ್ರಯತ್ನದ ಭಾಗವಾಗಿದೆ. ಶಿಕ್ಷಕರು ಮಕ್ಕಳಿಗೆ ಕಲಿಸುವ ಬದಲಿಗೆ ಪಠ್ಯಪುಸ್ತಕಗಳಲ್ಲಿ-ರುವ ದೋಷಗಳನ್ನು ತಿದ್ದುವುದರಲ್ಲೇ ಶೈಕ್ಷಣಿಕ ವರ್ಷ ಕಳೆಯಬೇಕಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ತಪ್ಪು ನಡೆದಿರುವುದನ್ನು ಸರ್ಕಾರ ಒಪ್ಪಿಕೊಂಡಿದೆ. ತಿದ್ದೋಲೆ ಹೆಸರಿನಲ್ಲಿ ಅದಕ್ಕೆ ತಿಪ್ಪೆ ಸಾರಿಸುವ ಕೆಲಸ ಮಾಡಬಾರದು. ಪರಿಷ್ಕೃತ ಪಠ್ಯ-ಪುಸ್ತಕಗಳ ಪರಿಶೀಲನೆಯ ಜವಾ-ಬ್ದಾರಿಯನ್ನು ತಜ್ಞರ ಸಮಿತಿ ಅಥವಾ ಸದನ ಸಮಿತಿಗೆ ಒಪ್ಪಿಸಬೇಕು. ವರದಿ ಬರುವವರೆಗೂ ಹಳೆಯ ಪಠ್ಯಪುಸ್ತಕಗಳನ್ನೇ ಮುಂದುವರಿಸಬೇಕು. ಈ ಅವಾಂತರಕ್ಕೆ ಕಾರಣವಾದ ಶಿಕ್ಷಣ ಸಚಿವರನ್ನು ಮುಖ್ಯಮಂತ್ರಿಯ-ವರು ತಮ್ಮ ಸಾಂವಿಧಾನಿಕ ಅಧಿಕಾರ ಬಳಸಿಕೊಂಡು ಸಂಪುಟದಿಂದ ಕೈಬಿಡಬೇಕು’ ಎಂದು ಆಗ್ರಹಿಸಿದ್ದಾರೆ.

‘ಪಠ್ಯ: ತಪ್ಪು ಒಪ್ಪಿಕೊಂಡ ಮೇಲೆ ವಿತರಣೆ ಸಲ್ಲ’

ಬೆಂಗಳೂರು: ‘ತಿದ್ದೋಲೆ ಆದೇಶ ಹೊರಡಿಸುವ ಮೂಲಕ ಪಠ್ಯ ಪುಸ್ತಕ ಪರಿಷ್ಕರಣೆಯಲ್ಲಿ ಆಗಿರುವ ಅನೇಕ ಲೋಪ, ತಪ್ಪುಗಳನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. ಹೀಗಾಗಿ, ಯಾವುದೇ ಕಾರಣಕ್ಕೂ ಪರಿಷ್ಕೃತ ಪಠ್ಯಗಳನ್ನು ಮಕ್ಕಳಿಗೆ ವಿತರಿಸಬಾರದು’ ಎಂದು ರಾಜ್ಯ ಖಾಸಗಿ ಶಾಲಾ–ಕಾಲೇಜು ಪೋಷಕರ ಸಂಘಟನೆಗಳ ಸಮನ್ವಯ ವೇದಿಕೆ ಒತ್ತಾಯಿಸಿದೆ.

‘ಪರಿಷ್ಕೃತ ಪಠ್ಯ ಪುಸ್ತಕವನ್ನು ಮಕ್ಕಳಿಗೆ ವಿತರಿಸು-ವುದನ್ನು ತಕ್ಷಣ ನಿಲ್ಲಿಸಬೇಕು. ಈಗಾಗಲೇ ವಿತರಿಸಿರುವ ಪಠ್ಯಗಳನ್ನು ವಾಪಸು ಪಡೆದು ಶಾಲಾ ಮಕ್ಕಳ ಭವಿಷ್ಯವನ್ನು ಕಾಪಾಡಬೇಕು’ ಎಂದೂ ವೇದಿಕೆಯ ಕಾರ್ಯಕಾರಿ ಸಮಿತಿಯ ಬಿ.ಎನ್. ಯೋಗಾನಂದ, ಕೇಸರಿ ಹರವು, ಚಿದಾನಂದ, ಭಾಸ್ಕರ್ ರೆಡ್ಡಿ ಮತ್ತಿತರರು ಮುಖ್ಯಮಂತ್ರಿ ಬಳಿ ಆಗ್ರಹಿಸಿದ್ದಾರೆ.

‘ಪಠ್ಯ ಪರಿಷ್ಕರಣೆ ಪ್ರಕ್ರಿಯೆಯೇ ನಿಯಮಬಾಹಿರ ಆಗಿರುವುದರಿಂದ ತಿದ್ದೋಲೆ ಮೂಲಕ ಸರ್ಕಾರ ಮತ್ತೊಮ್ಮೆ ಸಮರ್ಥಿಸಿಕೊಂಡಿರುವುದು ಜನವಿರೋಧಿ ನಡೆ. ಪರಿಷ್ಕರಣೆಯ ಮೂಲ ಆಲೋಚನೆಗಳೇ ಸಂವಿಧಾನಬಾಹಿರ, ಪ್ರಜಾಪ್ರಭುತ್ವ ವಿರೋಧಿ ಮತ್ತು ದುರುದ್ದೇಶದಿಂದ ಕೂಡಿದೆ. ಸರ್ಕಾರ ಹೊರಡಿಸಿರುವ ತಿದ್ದೋಲೆಯಿಂದಾಗಿ ಶಾಲಾ ಹಂತದಲ್ಲಿ ಶಿಕ್ಷಕರು ಮಕ್ಕಳಿಗೆ ಪಾಠ ಕಲಿಸುವ ಬದಲು, ಪುಸ್ತಕದಲ್ಲಿರುವ ದೋಷಗಳನ್ನು ತಿದ್ದುವ ಕಾರ್ಯದಲ್ಲಿಯೇ ಶೈಕ್ಷಣಿಕ ವರ್ಷ ಮುಗಿಯಲಿದೆ. ಇದು ಮಕ್ಕಳ ಕಲಿಕೆ ಮೇಲೆ ಪರಿಣಾಮ ಬೀರಲಿದೆ’ ಎಂದೂ ವೇದಿಕೆ ಅಭಿಪ್ರಾಯಪಟ್ಟಿದೆ.

ಅಪ್ಪನ ಬೆಟ್ಟಿಂಗ್ ಚಟಕ್ಕೆ ಮಗ ಬಲಿ

ಕೋಲಾರ: ಐಪಿಎಲ್ ಬೆಟ್ಟಿಂಗ್ ಸಂಬಂಧ ಸಾಲಗಾರರು ಅಂಗಡಿ ಬಳಿ ಬಂದು ಜಗಳವಾಡಿದ ವಿಚಾರವನ್ನು ತಾಯಿಗೆ ತಿಳಿಸಿದ ಮಗನನ್ನು ಅಪ್ಪನೇ ಕೊಲೆ ಮಾಡಿ ಶವವನ್ನು ತಾಲ್ಲೂಕಿನ ಶೆಟ್ಟಿಮಾದ ಮಂಗಲ ಕೆರೆಗೆ ಎಸೆದಿದ್ದಾನೆ. ಚಿಕ್ಕಬಳ್ಳಾಪುರ ಮಾದರಕಲ್ಲು ಗ್ರಾಮದ ನಿಖಿಲ್ ಕುಮಾರ್ (11) ಕೊಲೆಯಾದ ಬಾಲಕ.

ಡಾ.ವೆಂಕಟೇಸುಲು ಲಯನ್ಸ್ ಕ್ಲಬ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ



ನೆಲಮಂಗಲ: ಚರ್ಮರೋಗ ತಜ್ಞ ವೈದ್ಯ ಡಾ. ಜಿ.ಎ.ವೆಂಕಟೇಸುಲು ಅವರು ಲಯನ್ಸ್ ಕ್ಲಬ್‌ನ ನೂತನ ತಾಲ್ಲೂಕು ಅಧ್ಯಕ್ಷರಾಗಿ ಆಯ್ಕೆ-ಯಾಗಿದ್ದಾರೆ ಎಂದು ವೈದ್ಯಸಂಘದ ಅಧ್ಯಕ್ಷರೂ ಆಗಿರುವ ಲಯನ್ಸ್ ಸಂಸ್ಥೆ ನಿಕಟಪೂರ್ವ ಅಧ್ಯಕ್ಷ ಡಾ.ಎಂ.ಜಯಪ್ರಸಾದ್ ತಿಳಿಸಿದ್ದಾರೆ.

ಮೇಕೆದಾಟು ಪಾದಯಾತ್ರೆ ವಿಚಾರಣೆಗೆ ಮಧ್ಯಂತರ ತಡೆ

ಬೆಂಗಳೂರು: ಮೇಕೆದಾಟು ಯೋಜನೆಗೆ ಆಗ್ರಹಿಸಿ ನಡೆಸಲಾದ ಪಾದಯಾತ್ರೆಯಲ್ಲಿ ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಲಾಗಿದೆ ಎಂದು ಆರೋಪಿಸಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿ ಕಾಂಗ್ರೆಸ್ ಪಕ್ಷದ 13 ಮುಖಂಡರ ವಿರುದ್ಧ ರಾಮನಗರ ಗ್ರಾಮೀಣ ಠಾಣಾ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪ ಪಟ್ಟಿಯ ಮುಂದಿನ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

‘ನಮ್ಮ ವಿರುದ್ಧದ ದೋಷಾರೋಪ ಪಟ್ಟಿ ರದ್ದುಪಡಿಸಬೇಕು’ ಎಂದು ಕೋರಿ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಸೇರಿ ಕಾಂಗ್ರೆಸ್ ಪಕ್ಷದ 13 ಮುಖಂಡರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.ಅರ್ಜಿದಾರರ ವಿರುದ್ಧದ ದೋಷಾರೋಪ ಪಟ್ಟಿಯ ಮುಂದಿನ ಕಾನೂನು ಪ್ರಕ್ರಿಯೆಗೆ ತಡೆ ನೀಡಿದ ನ್ಯಾಯಪೀಠ, ರಾಮನಗರ ಗ್ರಾಮಾಂತರ ಠಾಣಾ ಪೊಲೀಸರು ಮತ್ತು ದೂರುದಾರರಾದ ರಾಮನಗರ ತಹಶೀಲ್ದಾರ್ ವಿಜಯ್ ಕುಮಾರ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ಅರ್ಜಿದಾರರ ಪರ ಹಿರಿಯ ವಕೀಲ ಎ.ಎಸ್.ಪೊನ್ನಣ್ಣ ವಾದ ಮಂಡಿಸಿದರು.

ಪ್ರಕರಣವೇನು?: ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ 2022ರ ಜನವರಿ 9ರಿಂದ 10 ದಿನಗಳವರೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಪಾದಯಾತ್ರೆ ಹಮ್ಮಿಕೊಂಡಿತ್ತು. ‘ಪಾದಯಾತ್ರೆಯಲ್ಲಿ ಕೋವಿಡ್ ನಿಯಮ ಉಲ್ಲಂಘಿಸಲಾಗಿದೆ’ ಎಂದು ಆರೋಪಿಸಿ ರಾಮನಗರ ತಹಶೀಲ್ದಾರ್ ಜನವರಿ 13ರಂದು ರಾಮನಗರ ಗ್ರಾಮೀಣ ಠಾಣಾ ಪೊಲೀಸರಿಗೆ ದೂರು ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಪೊಲೀಸರು, ಫೆಬ್ರುವರಿ 9ರಂದು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಕಲಾಸಿಪಾಳ್ಯದಲ್ಲಿ ಗಾಂಜಾ: ಆರೋಪಿ ಬಂಧನ

ಬೆಂಗಳೂರು: ನಗರದ ಕಲಾಸಿಪಾಳ್ಯ-ದಲ್ಲಿ ಗಾಂಜಾ ಮಾರುತ್ತಿದ್ದ ಆರೋಪಿ ಸೆಲ್ವರಾಜ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ಸೆಲ್ವರಾಜ್, ಹಲವು ತಿಂಗಳಿನಿಂದ ಗಾಂಜಾ ಮಾರುತ್ತಿದ್ದ. ಈತನನ್ನು ಬಂಧಿಸಿ, 20 ಕೆ.ಜಿ 575 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಪೊಟ್ಟಣಗಳಲ್ಲಿ ಗಾಂಜಾ ತುಂಬಿಕೊಂಡು ಸೋಮವಾರ (ಜೂನ್ 27) ಬೆಳಿಗ್ಗೆ ಕಲಾಸಿಪಾಳ್ಯ ಬಳಿ ಆರೋಪಿ ಬಂದಿದ್ದ. ಪರಿಚಯಸ್ಥ ಗ್ರಾಹಕರಿಗೆ ಗಾಂಜಾ ಮಾರುತ್ತಿದ್ದ. ಕೆಲ ಕಾರ್ಮಿಕರು, ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಗಾಂಜಾ ಖರೀದಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. ಹೊರರಾಜ್ಯದಿಂದ ಗಾಂಜಾ ಖರೀದಿಸಿ ತಂದು ಮಾರುತ್ತಿದ್ದ ಬಗ್ಗೆ ಆರೋಪಿ ಹೇಳಿದ್ದಾನೆ’ ಎಂದೂ ತಿಳಿಸಿದರು.

ತೆರಿಗೆ ಬಾಕಿ: ಬ್ಯಾಂಕ್ ಖಾತೆ ಜಪ್ತಿಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಮಂತ್ರಿ ಮಹಲ್ ಬ್ಯಾಂಕ್ ಖಾತೆ ಜಪ್ತಿಗೆ ಕ್ರಮ ವಹಿಸಲಾಗುವುದು ಎಂದು ಬಿಬಿಎಂಪಿ ಪಶ್ಚಿಮ ವಲಯ ಜಂಟಿ ಆಯುಕ್ತ ಶ್ರೀನಿವಾಸ್ ತಿಳಿಸಿದರು.

‘ಈ ತಿಂಗಳ ಅಂತ್ಯದೊಳಗೆ ಬಾಕಿ ತೆರಿಗೆ ಪಾವತಿಸಲು ಗಡುವು ನೀಡಿದ್ದೇವೆ. ಪಾವತಿಸಲು ಅವರೂ ಒಪ್ಪಿಕೊಂಡಿದ್ದಾರೆ. ಮುಂದೇನು ಮಾಡಬೇಕು ಎಂಬುದರ ಬಗ್ಗೆ ವಲಯ ಆಯುಕ್ತರು ತೀರ್ಮಾನ ಕೈಗೊಳ್ಳಲಿದ್ದಾರೆ. ಬ್ಯಾಂಕ್ ಖಾತೆ ಜಪ್ತಿ ಬಗ್ಗೆಯೂ ಯೋಚನೆ ಮಾಡಿದ್ದೇವೆ’ ಎಂದರು.

ಕಬ್ಬನ್ ಉದ್ಯಾನದಲ್ಲಿ ‘ಸಾಕುನಾಯಿಗಳಿಗೆ ನಿರ್ಬಂಧ’ ಫಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ವಾಯುವಿಹಾರಕ್ಕೆ ಸಾಕು ನಾಯಿಗಳನ್ನು ಕರೆದೊಯ್ಯದಂತೆ ನಿರ್ಬಂಧ ಹೇರಲಾಗಿದೆ ಎಂಬ ಫಲಕಗಳನ್ನು ತೋಟಗಾರಿಕೆ ಇಲಾಖೆ ಅಳವಡಿಸಿದೆ.

ಜುಲೈ 1ರಿಂದ ಸಾಕುನಾಯಿಗಳನ್ನು ಕರೆತರಬಾರದು ಎಂದು ತಿಳಿಸಲಾಗಿದೆ. ನಾಯಿಗಳು ಪದೇ ಪದೇ ತೊಂದರೆ ನೀಡುತ್ತಿರುವ ಬಗ್ಗೆ ವಾಯು-ವಿಹಾರಿಗಳಿಂದ ದೂರುಗಳು ಸಲ್ಲಿಕೆಯಾಗಿರುವುದ-ರಿಂದ ನಿಷೇಧ ಹೇರುವ ಬಗ್ಗೆ ತೋಟಗಾರಿಕೆ ಇಲಾಖೆ ಪ್ರಸ್ತಾವನೆ ಸಿದ್ಧಪಡಿಸಿದೆ.

ಉದ್ಯಾನಗಳು ಮತ್ತು ಸಾರ್ವಜನಿಕ ಸ್ಥಳಗಳ ನಿಯಮಾವಳಿಗಳ ಅನ್ವಯ ನಿಷೇಧ ಹೇರುವ ಕುರಿತು ತೋಟಗಾರಿಕೆ ಸಚಿವರನ್ನು ಒಳಗೊಂಡ ಸಮಿತಿಯು ಮುಂದಿನ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ. ಆದಕ್ಕೂ ಮೊದಲೇ ಫಲಕಗಳನ್ನು ಅಳವ-ಡಿಸಲಾಗಿದ್ದರೂ ಜುಲೈ 1ರಿಂದ ಜಾರಿಗೆ ಬರುವುದಿಲ್ಲ. ಸಮಿತಿಯು ಶೀಘ್ರವೇ ಅಂತಿಮ ನಿರ್ಧಾರ ಕೈಗೊಳ್ಳಲಿದೆ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದರು.

ಯಲಹಂಕ: ಕಾಮಗಾರಿ ಪರಿಶೀಲನೆ

ಬೆಂಗಳೂರು: ಯಲಹಂಕ ವಲಯ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪರಿಶೀಲನೆ ನಡೆಸಿದರು.

ಜಕ್ಕೂರು ಕ್ರಾಸ್‌ನಿಂದ ಕೆಂಪೇಗೌಡ ವೃತ್ತದ ತನಕ ಚರಂಡಿ ಮತ್ತು ಪಾದಚಾರಿ ಮಾರ್ಗದ ಅಭಿವೃದ್ಧಿ ಕಾಮಗಾರಿಯನ್ನು ಮೂರು ತಿಂಗಳಲ್ಲಿ ಪೂರ್ಣಗೊಳಿಸಬೇಕು ಎಂದು ಮುಖ್ಯ ಎಂಜಿನಿಯರ್‌ಗೆ ಸೂಚನೆ ನೀಡಿದರು.

ಭೂಸ್ವಾಧೀನ ಪ್ರಕ್ರಿಯೆ ವಿಳಂಬದಿಂದ ಜಕ್ಕೂರು ರೈಲ್ವೆ ಮೇಲ್ಸೇತುವೆ ಕಾಮಗಾರಿಗೆ ತೊಡಕಾಗಿದೆ. ಅಗತ್ಯ ಇರುವ 48 ಆಸ್ತಿಗಳ ಪೈಕಿ 38 ಆಸ್ತಿ ಸ್ವಾಧೀನವಾಗಿ-ದ್ದು, ಬಾಕಿ ಆಸ್ತಿಗಳ ಸ್ವಾಧೀನ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

H.A.S.B Education Society ®
SIR M.VISVESVARAYA First Grade / PU. College
HAL Airport Road, B'lore-17
Immediately required
PRINCIPAL
M.Com, NET (5 years experience)
LECTURER (Full-time)
COMMERCE
M.Com, NET (5 years experience)
ENGLISH
with M.A., B.Ed
LECTURERS (Part time)
KANNADA
MA. in Kannada, NET
ENGLISH
MA. in English, NET
Email resume to:
hasbeducation@gmail.com

HOLY ANGEL'S High School #2,5th Main, 4th Cross, R.P.C Layout, Vijayanagar, Bengaluru-560104. Phone-23404465, 23202042 E-mail: holyangels.highschoolrpclayout@gmail.com Requires Experienced Trained Teachers to handle Nursery, Primary (Hindi & Science), High School (English & Social-Science) for Academic year 2022-2023 STATE & ICSE Qualification: NTT, B.A/B.Sc.,B.Ed., M.A/M.Sc.,M.Ed.Only English medium candidates need apply.

WANTED ENGLISH MEDIUM TRAINED Lady Teachers for Primary/ High School to teach English/ Social Science/ Computer Science, Lady Graduates Interested in teaching can also apply. Attractive Salary with PF and ESI Facilities. Contact in person (10.00 am-3.00 pm on all working days) -Secretary, Deccan Educational Society®, No. 95, 3rd Cross, Srirampuram, Bengaluru- 560021 (Near Sampige Theater, Malleswaram).

NANDINI PUBLIC School Nandini Layout, Required English Medium Nursery, Primary Teachers Good Salary: 9448012263

ALL SUBJECTS English medium primary high school and PT/ ACCOUNTANT Children's Education Centre Yeshwantapur. whatsApp resume. 8088201545

WANTED TEACHERS to teach Mathematics and English for High School in Vijayanagar. Contact: 9686525351/ 9448016795

H M V INTERNATIONALSCHOOL
Affiliated to CBSE, New Delhi.
School Campus: CA Site No.1, Rajajinagar HBCS Layout, Nagarabhavi, Annapoorneshwari nagar, Bangalore - 560072
Admin Off: 080 -2351 2223, Campus Ph: 080 2977 2223
Mob: 9513552223 Web: hmvinternationalschool.com
Invites applications from passionate, highly motivated and dynamic educators to following positions.

Sl. No.	POSITION	QUALIFICATION / EXPERIENCE
1	VICE PRINCIPAL (Ladies Only)	Post graduate with B.Ed / M.Ed from a recognized University / Institute. Minimum 3 - 5 years of teaching experience & knowledge of handling administrative affairs in CBSE school.
2	TEACHERS (Science, English, Maths, Hindi, Art & Craft)	For primary, secondary and higher secondary classes. Post graduates / graduates with M.Ed / B.Ed / D.Ed / TCH / TGT/ PRT etc., experience in teaching
3	LIBRARIAN	B.Lib
4	ACCOUNTANT	M.Com / B.Com Computer knowledge of Tally, Excel, ERP. Experience in school preferred.

Salary Commensurate with qualification and experience.
Eligible and Interested candidates send CV to mail ID :
info@hmvinternationalschool.com / hmvecst@gmail.com

C B BHANDARI JAIN HIGH SCHOOL AND PU COLLEGE.No. 9 .Kilari Road Bengaluru -53. Tel. no. 41323029/ 22287485/ 9880528424. email: cbbjhs@gmail.com.Wanted full time/ part time lecturer with M.sc in statistics & MCA for computer science to teach in PU college.Walk in Interview on all working days from 11.30 am to 2.30 pm.

WANTED N.T.T., D.Ed., B.A., (English); B.Sc. (PCM/ CBZ), B.Ed. Lady Teachers for Primary School (Gandhinagar); Physical Education Teacher (Female/ Male) Salary Rs. 16,000/- - Rs. 18,000/-. PUC/ Graduate helper mistress. Contact immediately- 8884440214/ 22261590.

SRI AHAM AATHMA VIDYALAYA-[ICSE], Gruhalakshmi layout, Nagasandra post, Peenya Dasarahalli, Bangalore-73 Invites applications for the following posts with good English vocabulary for the academic year 2022-2023 (1) Computer science- BCA/ MCA/Geography (2) TEACHERS to teach all the subjects for Nursery/Primary/Middle/ High-school (3) Office Staff/Clerk/Date-Entry with Tally (4) Lab-assistant/ Librarian. Offers Attractive Salary. 'Transportation provided' Contact: 9880200172, 9663778869 Email: sriaavapplic@gmail.com

SHREE Sharada Education Centre, M C Layout, Vijayanagar, Bengaluru, Requires Teachers for English Primary & Maths for High School Part-time / full-time .Contact : HM - 9980109803/ 080-23113366

REQUIRED TRAINED & Exp Lady Teachers for Computer, Music English & Hindi for High School and also Nursery. Hebbal Contact: 9008981637

REQUIRED SOCIAL, ENGLISH TEACHER for High School,Head Mistress. Royal Public School.Jnanabharathi. Call: 8867569333/ 9035033560

B. S. CARMEL PUBLIC SCHOOL
Nursery, Primary and High School
Hennagara, Anekal Taluk, Bangalore-560105
Walk In Interview on 30th June 2022 at 10.00a.m
Physical and Health Educational Teacher :
CP.Ed / BP.Ed
Maths Teacher:
B.Sc / M.Sc-PCM, B.Ed
Appear in th Interview with Your-Updated Resumue and Original Certificate.
Contact No. 9480114472 / 8050589937

WANTED TEACHERS for Sanskrit, English, Social-Studies, NTT, Science & Maths, for Primary & High School. Contact MES-Convent, Nagarabhavi 9740382364

WANTED LADY Trained Nursery Teachers,and Chemistry(Msc,BEd), SS(BA,BEd or MA,BEd) &,Computer Teacher. Walkin Between 10.30-1pm.with the Secretary, Srikrishna International School. ITI-Layout.BSK.3rd Stage.B'lore-85 Ph:080-26690799

WANTED TEACHERS M.M.E.T ENGLISH PRIMARY & HIGH SCHOOL RSPalya Bangalore33 08025450522, 9743448661 mmetschool@gmail.com. HM-HIGH SCHOOL & PRIMARY PGT/TGT TGT-Science DRAWING TEACHER BFA/MFA PE-TEACHER CPEd/BPEd MANAGER Degree with experience LIBRARIAN BL.Sc ACCOUNTANT B.Com Tally K.N.S.S VIDYAMANDIR ENGLISH SCHOOL Ramamurthinagar Bangalore36 08025450522, 7022477196 knssvidyamandirephs@gmail.com PRINCIPAL PGT/TGT PRE-PRIMARY PUC, NTTPE TEACHER CPEd/BPEd ACCOUNTANT B.Com Tally Attractive salary with benefits offered Interview on 02/07/2022Saturday 10AM onwards at M.M.E.T SCHOOL

REQUIRED TRAINED Graduate to teach Computer for High School. Maxwell Public School, KalyanNagar. Contact: 9945827600.

BGS
BLOOMFIELD HIGH
[CBSE CURRICULUM]
BASAVANAGUDI
BANGALORE
REQUIRIES TRAINED EXPERIENCED & QUALIFIED TEACHERS
FOR
KINDERGARTEN/ PRIMARY/ HIGH SCHOOL
MATHS, SCIENCE
SOCIAL STUDIES,
COMPUTER
ENGLISH, KANNADA, HINDI,
LIBRARIAN, P.E TEACHER
& SUPPORT STAFF
[Good command over English Language]
Apply immediately
Bloomfieldadm@gmail.com
9448528484, 080-26763777

SVN ENGLISH High School, Thanisandra Main Road (Opp Elements Mall) Nagawara Bangalore-77, Requires Experienced & Trained TEACHERS Nursery (NTT) Social Science, Computer, Drawing & PT for High School level. Call: 9686200200/ 9392303764/ 9448462093

REQUIRED NURSERY TRAINED TEACHERS for EVERSHINE ENGLISH SCHOOL, Kalidasa Layout, Srinagar, Bangalore-50. Contact: 9845907518

WANTED TEACHERS to handle Maths & Science (Primary), Social Science & English (High School). Contact No. 9379191544, Cambridge English School, Mathikere, Yeshwanthpur, Bangalore

WANTED IMMEDIATELY PART TIME LECTURERS/ INSTRUCTORS to teach COMPUTER SCIENCE/ COMMERCE Courses. Apply to: respolytechnic@yahoo.com

HIGH SCHOOLTEACHERS FOR ENGLISH, MATHS, SOCIAL STUDIES, ART & CRAFT. FRANK PUBLIC SCHOOL. JP.NAGAR 9731910479 frankoffice127@gmail.com

Accounts & Finance

ACCOUNTS Executive with over 5yrs. in handling accounts with good communication skills and excellent knowledge of Tally. ISME,Sarjapur Road jobs@isme.in, 080 -28019804

LOGISTICS COMPANY Requires Experienced HR Executives at Koramangala Office. Apply Admin@dfclogistics.com

Graphic Designers

REPUTED INS Accrediated Advertising Agency requires Graphic Designer with minimum 2 - 3 Yrs Experience and Knowledge of Photoshop, Coreldraw & Illustrator must. Call: 9845041912.

Engg/ Production Technical

WANTED WELL Experienced CIVIL ENGINEERS for the Projects in Mysore and Kushalnagar. Mail your Resume: visionbuildtek@yahoo.com

BHUMIKA BUILDERS requires experienced LAYOUT SUPERVISORS for new projects in and around Bengaluru. Call 9538223507

Walk-in

Raosaheb Wangde Master Charitable Trust's
DNYANSHREE Institute of Engineering & Technology
A/P - Sonavadi-Gajawadi, Sajjangad Road, Tal. & Dist. Satara, Maharashtra - 415 013
Web Site: www.dnyanshree.edu.in , Phone : 8600009009
(Approved by AICTE, New Delhi DTE, M.S. & Affiliated to Dr. Babasaheb Ambedkar Technological University, Lonere)
INVITES APPLICATION FOR Institute Code : 6797
the Walk in Interview, arranged for following Posts :
1. Professors/Associate Professors/Assistant Professors (DEGREE) :
Civil Engineering, Computer Science & Engineering, Electrical Engineering, Electronics & Telecommunication Engineering, Mechanical Engineering, Physics, Chemistry, Mathematics, Communication Skills & Librarian.

1. The appointment will be on full time ad-hoc basis against vacant posts for the A.Y. 2022-23.
2. Qualification, pay scale, experience as prescribed by AICTE, New Delhi & DBATU, Lonere.
3. Eligible candidates can apply with appropriate proofs through email : interview@dnyanshree.edu.in
4. Eligible candidates should appear for the interview with original documents & two sets of photo copies along with adhar card & 2 photographs.
5. Separate applications are needed to be submitted for separate posts in case of applied for multiple posts.

WALK-IN-INTERVIEW
Time : 10 am to 2 pm. 16th July, 2022 (Saturday)
Venue : Dnyanshree Institute of Engineering & Technology, Sajjangad Road, Satara.
Secretary
RWMCT, Mumbai

AVK GROUP OF INSTITUTIONS
(Recognised by govt of Karnataka ,KNC ,INC ,AICTE Affiliated to Bangalore University and RGUHS)
8/9, 27th Cross, Opp. Monontype, Banasankari 2nd Stage, Bangalore -70.
Tel: 91-80-26719531, 26717520
E-mail :avk.nsvk@gmail.com
REQUIRES
DIRECTOR FOR MANAGEMENT COLLEGE
COMPUTER SCIENCE & COMMERCE LECTURER
NURSING TUTOR
ACCOUNTS ASSISTANT
COMPUTER OPERATOR
LIBRARY ASSISTANT
OFFICE ASSISTANT
OFFICE BOY
WARDEN, COOK, DRIVER & ATTENDER
Eligibility -As per AICTE & University Norms
WALK-IN-INTERVIEW
on 29/06/2022 WEDNESDAY
Between 10.00AM to 3.00PM
-Chairman

Hotel

New Zealand
Wants Chefs - SOUTH INDIAN CUISINE
Minimum - 2 years experience in 3 Star + Hotels.
Attractive package.
Send bio-data immediately to:
satishtallam@gmail.com

Call Centre

REQUIRED, TEAMLEADER, Telecaller, Field Executive For Bank loan collection (salary 20,000). Direct Recruitment. 9620206756, 9620200756.

Marketing & Sales

WANTED SALES Fresher/Experience 2wheeler mandatory, 4wheeler DL advantage,Office in Sahakar nagar near Hebbal, Salary and incentive as per market Email:hr@kstewd.org 81399 62000

General

WANTED STAFF Office.Female Assistant (with knowledge-of Computer) Warden (Gents&Ladies) Security Guards,BSC Nursing-Tutors Contact:MGP institutions Bangalore.Phone 9886236341 mgp_nc2001@yahoo.com

SECRETARY CUM ACCOUNTS EXECUTIVE apply WISDOM MONTFORT INTERNATIONAL SCHOOL, Yelahanka, Bangalore-64 wisdommontfort@gmail.com

OPTOMETRISTS. Eyesense Opticians. 6 Vacancies. Race course Jayanagar koramangala and HSR Layout. admin@eyesense.in

Multiple Vacancy

WANTED SALES Executive, Spare Parts Assistant and Shop Supervisor for a Two Wheeler Showroom in Koramangala & JP Nagar. Call: 9945083900, 9731028676.

OPPORTUNITYFOR RETIRED Officials, Bankers,NRI, Teachers, Professionals, Homemakers, CAs.Earn salary+ Incentives. CALL: 8095301555

A REPUTED GROUP AT RICHMOND TOWN BENGALURU
REQUIRES CANDIDATES FOR THE FOLLOWING POSITIONS
SENIOR ACCOUNTANT / ACCOUNTANT
TELECALLER (TAMIL, TELUGU, MALAYALAM & HINDI)
DATA OPERATOR
TRANSPORT MANAGER
Post Graduates / Graduates / Diploma Holders with 3-5 years experience in similar position can apply
Email: hrprofiles9@gmail.com
Cell: +91-88673 27172

C.B.BHANDARI JAIN COLLEGE, #84,KR Road,Shankarpuram, Bangalore-560004. Applications are Invited from eligible candidates for the post of Admission Co-Ordinator/Administrator or having at least 5 Years experience in counselling students for admissions to PUC, Under Graduate & PG Courses .Candidates may attend a Walk-in-Interview on 6th July at 11am along with their resume. Ph.No. 080-26611924. E-mail: cbbhandarijaincollege@gmail.com, www.cbbhandarijaincollege.ac.in

REQUIRE: HASTHA GLOBAL VENTURES, Rajarajeshwari Nagar. Candidates must have knowledge of MS.Office and good communication skill in English & Kannada. 1.MANAGER OPERATIONS-Post Graduate (8-years experience). 2.OPERATIONS SUPPORT EXECUTIVE-Graduate (2-years experience) for back office. 3.ACCOUNTS EXECUTIVE-Commerce Graduate (2-years experience) in Accounts with Tally must. 4.SOCIAL MEDIA EXECUTIVE-Graduate in Media & Communication (2-years experience). 5.LEADS-MANAGEMENT EXECUTIVE-Graduate (2-years experience) in Real estate industry. Candidate residing in South Bangalore will be given preference. Please email your resume with a photo to: wecare@hasthaglobal.com.

WANTED FIELD EXECUTIVES, OPERATION MANAGER and GENERAL MANAGER to work in Poojyaya Security Services, Contact @ 080- 23536744, 9845996744 raghu_sgr@yahoo.co.in / poojyaya2005@gmail.com

Stores/ Purchase

ELCITA
ELECTRONICS CITY INDUSTRIAL TOWNSHIP AUTHORITY
No. 7 (P), West Phase, Electronics City, Bangalore - 560 100.
Website : www.elcita.in,
Phone : 080-4660 2222
ELCITA invites applications from suitable candidates for the position of Stores Officer
Candidate should be a graduate/diploma/equivalent in any discipline with 5 years' relevant experience in store keeping / inventory management.
He / she will ensure effective control and management of material and inventory of ELCITA including regulation of all incoming/ outgoing material, storage and logistics.
For details refer to: www.elcita.in
Last date for receipt of applications with CV and supporting documents: 15-07-2022 before 5PM
Email id: office.elcita@elcita.in

Part-Time Jobs

REPUTED MNC COMPANY will Provide WORK FROM HOME, Earn 35000 to 40000 Malleshwaram: 7019215243/ 9886641282

Wanted

WANTED OFFICE ASSISTANT, age 25 to 35 years Male, Spoken & written English is a must. Knowledge of basic accounts & basic computer skills. Place of work at ShantiNagar. Salary according to experience. Resume with photo of candidate to be sent to: ramhldg@yahoo.co.in

WANTED EXPERIENCED CO-ORDINATOR for Kangroo Kids International Preschool Banashankari, Eligible candidates apply Resume-Kangroo Kids International Preschool, #1936, 30th cross, 9th main BSK 2nd stage, Bangalore- 560070. Ph: 080- 26715415, M: 9606853665/ 9535631333. Email: perikaalacademy@gmail.com

REAL ESTATE SELLING

Flat

J P Nagar

FLATS FOR SALE 2 & 3 BHK, J.P Nagar 9th Phase,Under construction, Reasonable Price, Loan also Available- 8904522650

Mathikere

URGENT SALE of 2Bhk furnished flat 1257sqft Muthyalanagara 6500/-per sqft slightly negotiable. 9686973320

Sites

Vidyaranyapura

50 X 112 Ft CommercialNear Vidyaranyapura Main RoadPhone 82178 03911

CAUTION NOTICE
Readers are advised to make appropriate thorough enquiries before acting upon any advertisement.
This newspaper does not vouch or subscribe to the claims and representations made by advertisers.
GM-Advertisement

AUTOMOTIVE

Four Wheelers Selling

Others

ACCIDENTAL damaged KA-52 B-0668 Eicher Canter BS-VI 2020 model for sale with documents send quotation to new India Assurance Company, Regional Office. Inspection at Agustya nelamangala for details contact 9845074511

BUSINESS

Business to Business

Financial Services

INVEST 20000/-- 2L in Trading, Multiple businesses. Weekly/Monthly 8% Secured Fixed Returns. Investors Welcome. Call:7892818780

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

FINANCE AGAINST Land & Building Properties Industries Schools Hospitals Projects & NRI Funds.7358729820

General

RUNNING BAR (CL9) FOR LEASE (ARAKERE, Bannerghatta Road) with MRP Counter, 2 Dine, Terrace Garden &.Kitchen Contact: 8904522650

EARN 65,000/- to 90,000/- per-month. Setup Paper-bags, Tea-cups, LED-Bulbs unit. We provide free raw material. Buyback Agreement. Contact: 9958628785.

EDUCATIONAL

Correspondence Courses

DIRECT FINAL PUC B.Com BA BBA BCA MBA B.Ed Diploma BE D.Pharm PhD: 9739077186/ 8618506480

PERSONAL

Change of Name

ARADHANA PAL W/o. 14833939N Sep Triloki Singh R/a. Karthini Shakarouli Jalesar Etah UP my name ARADHANA PAL to ARADHNA PAL notary KV Mani, Bangalore.

I, K.B. PANKAJA, Spouse of No. 2582484-K, Rank- Naik, Name Bosu K.K, address 28/A, Purandara, 3rd main, Kalyaninagar, Vasanthapura, Bangalore South, Subramanyapura, Bangalore-560061, have changed my name to K.M. PANKAJA to K.B. PANKAJA, vide affidavit dated 21.06.2022 before B.K.R. Krishnamurthy, Bangalore.

I PATNAM SWAMY DIWAKAR R/a #.107(62/J), 6th main, 39th A cross, 5th block Jayanagar, Bengaluru-560041 Have Changed my name to PATNAM SWAMY DIVAKAR vide Affidavit Dated 24/06/2022 Before Notary Mamatha. N.K Bangalore

I, PABBISETTY SPOORTHI Residing at No. 282, 1st Block, BEL Layout 3rd main 11th 'B' Cross, Vidyaranyapura, Bengaluru-560097, have changed my name to SPOORTHI CHANDRA PABBISETTY vide affidavit dtd 28.06.2022 before notary P.N. Nagesha, Bengaluru. Henceforth I shall be known as SPOORTHI CHANDRA PABBISETTY.

I PATNAM DIWAKAR MAMATHA R/a #107(62/J), 6th main, 39th A cross, 5th block Jayanagar, Bengaluru-560041 Have Changed my name to PATNAM DIVAKAR MAMATHA vide Affidavit Dated 24/06/2022 Before Notary Mamatha. N.K Bangalore

Lost

LOST
I, Syed Zubairuddin S/o Syed Nooruddin Residing At 112, Cockburn Road, Bengaluru. I have lost my original sale deed of Property suituated in Aralumallige, Doddaballapur bearing survery Nol 154, 155,156,157 & 158. I request if anyone has come across these Property documents to contact me on my Phone Number:
9686345384

ADMISSION CORNER

ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಸ್ವಾಯತ್ತ
mLAC ಶೀಲಂ ಪರಮಂ ಭೂಷಣಂ Excellence in Education Since 1972
MAHARANI LAKSHMI AMMANNI COLLEGE FOR WOMEN, AUTONOMOUS
Science Post, 18th Cross, Malleshwaram, Bengaluru 560012
Affiliated to Bengaluru City University
Re-accredited by NAAC with "A" grade, Recognised by UGC under Section 2(f) and 12(b) of the UGC Act 1956
Conferred the Status of 'College with Potential for Excellence' by UGC
50 1972-2022
Admissions Open 2022-2023

UNDERGRADUATE PROGRAMS
Semester (CBCS)
- BCA Program
- BBA Program
- B.Sc. Program

PHYSICAL SCIENCE
LIFE SCIENCE
B.Com Program
B.Com Regular
B. Com Professional Program
BA UG Program

POST GRADUATE PROGRAMS
M.Sc.
- Biotechnology
- Biochemistry
- Botany

M.Com
- Banking & Finance
- Accounting & Taxation

M.A Kannada ಎಂ.ಎ. ಕನ್ನಡ

PG Diploma Program (1 year duration)
- Genomics & Cloud Computing
- Data Analytics
- Machine Learning & Artificial Intelligence
- Human Resource Management
- Financial Management
- Analytics Management

For Details Contact:
Website: https://mlacw.edu.in/
Email: mlacadm22@gmail.com
Contact No.: 8277586861

Dr. NANDA KULKARNI: 94492 33990
Principal: Dr.SHASHIKALA A 080-23360816, 90082 66885
Administrative Officer: Dr. B. ANNADANESHA 080-23565727, 76766 45930

2nd PU Failed?
Don't be left behind!
A golden opportunity to study degree under Bangalore University this academic year and save one precious year of your life.
BBA B.Com BCA BA
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222



ರೈತರ ಸಾಲ ನೀತಿ ಬದಲಾಯಿಸುವುದರ ಜೊತೆಗೆ ಕೃಷಿ ಸಾಲಕ್ಕೆ ಸಿಬಿಲ್ ಸ್ಕೋರ್ ರದ್ದುಗೊಳಿಸುವಂತೆ ಆಗ್ರಹಿಸಿ ಆರ್‌ಬಿಐ ಕಚೇರಿ ಮುಂದೆ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಮತ್ತು ರಾಜ್ಯ ಕಬ್ಬು ಬೆಳೆಗಾರರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಸಾಲ ನೀತಿ ಬದಲಾಯಿಸುವಂತೆ ರೈತ ಸಂಘಟನೆಗಳ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ಸಾಲ ನೀತಿ ಬದಲಾಯಿಸುವುದರ ಜೊತೆಗೆ ಕೃಷಿ ಸಾಲಕ್ಕೆ ಸಿಬಿಲ್ ಸ್ಕೋರ್ ರದ್ದುಗೊಳಿಸುವಂತೆ ಆಗ್ರಹಿಸಿ ಆರ್‌ಬಿಐ ಕಚೇರಿ ಮುಂದೆ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಮತ್ತು ರಾಜ್ಯ ಕಬ್ಬು ಬೆಳೆಗಾರರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು.

'ಕೃಷಿ ಚಟುವಟಿಕೆಗಳನ್ನು ಮಾಡಲು ರೈತರು ಬ್ಯಾಂಕ್‌ಗಳಿಂದ ಸಾಲ ಪಡೆದುಕೊಳ್ಳುತ್ತಾರೆ. ಆದರೆ ಅತಿವೃಷ್ಟಿ, ಅನಾವೃಷ್ಟಿ ಮತ್ತು ಬರಗಾಲದಂತಹ ಪ್ರಕೃತಿ ವಿಕೋಪಗಳಿಂದ ಬೆಳೆಹಾನಿ ನಷ್ಟದಿಂದ ಸಕಾಲದಲ್ಲಿ ಸಾಲ ಮರುಪಾವತಿಸಲು ಸಾಧ್ಯವಾಗುವುದಿಲ್ಲ. ಕೃಷಿ ಚಟುವಟಿಕೆಗಳಿಗೆ ನೀಡುವ ಸಾಲಕ್ಕೆ ಸಿಬಿಲ್ ಸ್ಕೋರ್ ತಾಳೆ ಹಾಕುವ ಪದ್ಧತಿ ರದ್ದುಗೊಳಿಸಬೇಕು' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದರು.

'ರೈತರು ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡು 12 ತಿಂಗಳ ಅವಧಿಯೊಳಗೆ ಸಾಲದ ಮೇಲಿನ ಬಡ್ಡಿ ಪಾವತಿಸಿದರು. ಬ್ಯಾಂಕುಗಳು ಸಾಲವನ್ನು ನವೀಕರಿಸುತ್ತಿಲ್ಲ. ಸಾಲದ ಹಣ ತುಂಬಿ ಹೊಸದಾಗಿ ಸಾಲ ಪಡೆಯಬೇಕು ಎಂದು ಹೇಳುತ್ತಿದ್ದು, ಇದು ರೈತರಿಗೆ ಸಂಕಷ್ಟ ಉಂಟುಮಾಡಿದೆ. ಈ ನಿಯಮಗಳನ್ನು ತಿದ್ದುಪಡಿ ಮಾಡಿ ನವೀಕರಣಕ್ಕೆ ಅವಕಾಶ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

'ಸಂಕಷ್ಟದಲ್ಲಿರುವ ರೈತರ ಸಾಲ ವಸೂಲಾತಿ ಮಾಡಲು ಬ್ಯಾಂಕ್‌ಗಳು ನೋಟಿಸ್ ನೀಡಿ ಕಿರುಕುಳ ನೀಡುತ್ತಿದ್ದು, ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸುತ್ತಿರುವುದು ಖಂಡನೀಯ. ಸರ್ಕಾರಿ ಯೋಜನೆಗಳ ಪ್ರೋತ್ಸಾಹಧನವನ್ನು ರೈತರ ಸಾಲಕ್ಕೆ ವಜಾ ಮಾಡಿಕೊಳ್ಳುವುದನ್ನು ತಪ್ಪಿಸಬೇಕು' ಎಂದರು.

'ಆನ್‌ಲೈನ್ ಹಣ ಪಾವತಿ, ರೈತರ ಖಾತೆಯಿಂದ ಅನಾಮಧೇಯರು ಹಣ ವಂಚಿಸುತ್ತಿರುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ತನಿಖೆ ಕೈಗೊಳ್ಳಬೇಕು. ರೈತರ ಕೃಷಿ ಭೂಮಿಯ ಮೌಲ್ಯವನ್ನು ಆಧರಿಸಿ ಕಾರು, ಬೈಕ್, ಗೃಹ ನಿರ್ಮಾಣಕ್ಕೆ ಸಾಲ ನೀಡು ರೀತಿ ಶೇ 70ರಷ್ಟು ಸಾಲ ನೀಡುವ ಪದ್ಧತಿ ಜಾರಿಗೊಳಿಸಬೇಕು' ಎಂದು ಒತ್ತಾಯಿಸಿದರು.

ಕೈಬೀಸಿ ಕರೆಯುತ್ತಿದೆ 'ಫ್ರೀಡಂ ವಾಲ್'

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಐ.ಟಿ ಉದ್ಯೋಗಿಗಳ ತಂಡ ರೂಪಿಸಿದ ಯೋಜನೆ

• ಖಲೀಲಅಹ್ಮದ ಶೇಖ

ಬೆಂಗಳೂರು: ಸ್ವಾತಂತ್ರ್ಯ ಹೋರಾಟಗಾರರು, ಮರೆತುಹೋದ ವೀರರು, ಸಮಕಾಲೀನ ಚಿಂತಕರ ಕಿರು ಪರಿಚಯ ಮತ್ತು ಭಾವಚಿತ್ರಗಳನ್ನು ಇಂದಿರಾನಗರದ ಗೋಡೆಗಳ ಮೇಲೆ ಚಿತ್ತಾಕರ್ಷಕವಾಗಿ ಬಿಡಿಸಲಾಗಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಸಿ.ವಿ. ರಾಮನ್ ಆಸ್ಪತ್ರೆಯ ಗೋಡೆ ಹಾಗೂ 5ನೇ ಅಡ್ಡ ರಸ್ತೆಯ ಗೋಡೆಗಳ ಮೇಲೆ 'ನಮ್ಮ ಗೋಡೆಗಳು'ಎಂಬ ಪರಿಕಲ್ಪನೆಯ ಅಡಿ ಮಹನೀಯರ ಚಿತ್ರಗಳು ರಾರಾಜಿಸುತ್ತಿವೆ. ದುಶ್ಯಂತ್ ದುಬೆ, ಸತ್ಯಜಿತ್ ಇಂದ್ರ ಮೋಹನ್ ಮತ್ತು ಸಮೀರ್ ಕುಲಕರ್ಣಿ ಎಂಬ ಮೂವರು ಐ.ಟಿ ಉದ್ಯೋಗಿಗಳ ತಂಡವು ಗೋಡೆ ಗಳಿಗೆ ಜೀವಕಳೆ ತಂದಿದೆ. ಇದಕ್ಕೆ 'ಸ್ವಾತಂತ್ರ್ಯ ಗೋಡೆ' ಎಂದು ಹೆಸರಿಡಲಾಗಿದೆ.

ಬೆಂಗಳೂರಿನಲ್ಲಿ ಜೀವನ ನಡೆಸುತ್ತಿರುವ ದೇಶದ ಬೇರೆ ಬೇರೆ ಭಾಗದ ಜನರಿಗೆ, ಮಕ್ಕಳಿಗೆ ನಾಡಿನ ಇತಿಹಾಸ, ಪ್ರಸಿದ್ಧ ವ್ಯಕ್ತಿಗಳ ಪರಿಚಯಿಸುವುದರ ಜೊತೆಗೆ ಕ್ಯೂಆರ್ ಕೋಡ್ ಮೂಲಕ ತಮ್ಮ ಮೊಬೈಲ್‌ನಲ್ಲಿ ಅವರಿಗೆ ಸಂಬಂಧಿಸಿದ ಮಾಹಿತಿ ಗಳನ್ನು ತೆರೆದುಕೊಳ್ಳುವಂತಹ ತಂತ್ರಜ್ಞಾನ ವ್ಯವಸ್ಥೆ ಅಳವಡಿಸಲಾಗಿದೆ ಎಂದು ತಂಡದ ಸದಸ್ಯ ಸತ್ಯಜಿತ್ ಇಂದ್ರಮೋಹನ್ ತಿಳಿಸಿದರು.

ಗೋಡೆ ಮೇಲೆ ಇರುವವರು ಯಾರ್‍ಯಾರು?: ನಾಡಪ್ರಭು ಕೆಂಪೇಗೌಡ, ಸರ್.ಎಂ. ವಿಶ್ವೇಶ್ವರಯ್ಯ, ಸಿ.ವಿ. ರಾಮನ್, ಕುವೆಂಪು, ಕೃಷ್ಣದೇವರಾಯ, ಡಾ.ರಾಜಕುಮಾರ್, ಪುನೀತ್ ರಾಜ ಕುಮಾರ್, ಬೆಳವಡಿ ಮಲ್ಲಮ್ಮ, ಒನಕೆ ಓಬವ್ವ, ಸಾಲುಮರದ ತಿಮ್ಮಕ್ಕ, ಕೆಳದಿ ಚೆನ್ನಮ್ಮ, ಕಿತ್ತೂರು ರಾಣಿ ಚನ್ನಮ್ಮ, ರಾಣಿ ಅಬ್ಬಕ್ಕ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಜಾರ್ಜ್ ಫರ್ನಾಂಡಿಸ್, ಎಸ್.ಎಲ್.ಭೈರಪ್ಪ, ರಾಮಪ್ರಸಾದ್ ಬಿಸ್ಮಿಲ್, ಸುಶ್ರುತ, ಲಲಿತಾದಿತ್ಯ ಮುಕ್ತಾಪೀಡ, ಮಹಾರಾಜ್ ರಂಜೀತ್ ಸಿಂಗ್, ಡಾ.ಬಾಬಾಸಾಹೇಬ್ ಅಂಬೇಡ್ಕರ್, ವಿಕ್ರಂ ಸಾರಾಬಾಯಿ, ಚಂದ್ರಶೇಖರ್ ಆಜಾದ್ ಸೇರಿ ವಿವಿಧ ಮಹ ನೀಯರ ಭಾವಚಿತ್ರ ಬಿಡಿಸಲಾಗಿದೆ. ಸದ್ಯ 40 ಚಿತ್ರಗಳನ್ನು ಸಂಪೂರ್ಣವಾಗಿ ಬಿಡಿಸಲಾಗಿದೆ. ಇನ್ನೂ 18 ಚಿತ್ರಗಳನ್ನು ಬೆಂಗಳೂರು ಮೆಟ್ರೋ ರೈಲು ಕಾರ್ಪೊರೇಷನ್ ಗೋಡೆಗಳ ಮೇಲೆ ಚಿತ್ರಿಸಲು ಅಧಿಕಾರಿಗಳ ಅನುಮತಿಗಾಗಿ ಕಾಯುತ್ತಿದ್ದೇವೆ. ಸಿ.ವಿ. ರಾಮನ್‌ನಗರದ ಕ್ಷೇತ್ರದ ಶಾಸಕ ಎಸ್.ರಘು ಯೋಜನೆಗೆ ಆರ್ಥಿಕ ಸಹಾಯ ಮಾಡಿದ್ದಾರೆ ಎಂದು ಸಮೀರ್ ಕುಲಕರ್ಣಿ ತಿಳಿಸಿದರು.



ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ಇಂದಿರಾನಗರದ 5ನೇ ಅಡ್ಡ ರಸ್ತೆಯ ಗೋಡೆಗಳ ಮೇಲೆ ರಚಿಸಲಾಗಿದೆ. ಪುನೀತ್ ರಾಜಕುಮಾರ್ ಅವರ ಚಿತ್ರವನ್ನು ಕುತೂಹಲದಿಂದ ನೋಡಿ, ಕ್ಯೂಆರ್ ಕೋಡ್ ಮೂಲಕ ಮಾಹಿತಿ ಪಡೆದುಕೊಳ್ಳುತ್ತಿರುವ ಬಾಲಕ


ಗೋಡೆಗಳ ಮೇಲೆ ರಚಿಸಿರುವ ಚಿತ್ರಗಳನ್ನು ಬಾಲಕರು ಕುತೂಹಲದಿಂದ ವೀಕ್ಷಿಸಿದರು


ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ಇಂದಿರಾನಗರದ ಸರ್ ಸಿ.ವಿ ರಾಮನ್ ಆಸ್ಪತ್ರೆ ರಸ್ತೆಯ ಗೋಡೆಗಳ ಮೇಲೆ ಚಿತ್ರಿಸಿರುವುದು – ಪ್ರಜಾವಾಣಿ ಚಿತ್ರಗಳು / ರಂಜು.ಪಿ

ವಿಶಿಷ್ಟ ವಿನ್ಯಾಸದಲ್ಲಿ 40 ಚಿತ್ರ ರಚನೆ

ಪ್ರಜಾವಾಣಿ ವಿಶೇಷ

ಮಹನೀಯರನ್ನು ಸ್ಮರಿಸಲು ಕೇಂದ್ರ ಸರ್ಕಾರದ 'ಆಜಾದಿ ಕಾ ಅಮೃತ್ ಮಹೋತ್ಸವ'ದ ಕಾರ್ಯಕ್ರಮವೇ ಸ್ಫೂರ್ತಿ. ಇತಿಹಾಸದಲ್ಲಿ ಪ್ರತಿಯೊಬ್ಬರ ಬಗ್ಗೆ ತಿಳಿಸಲು ಅಸಾಧ್ಯ. ಆದ್ದರಿಂದ, ಅಂತಹ ವ್ಯಕ್ತಿಗಳ ಚಿತ್ರ ಮತ್ತು ಸಾಧನೆಯನ್ನು ನಮ್ಮ ಮಕ್ಕಳಿಗೆ ತಿಳಿಸಲು ಈ ಯೋಜನೆ ಸಹಾಯಕವಾಗಲಿದೆ ಎಂದು ದುಶ್ಯಂತ್ ದುಬೆ ಹೇಳಿದರು.

ವಿಶ್ವದ ಹೆಸರಾಂತ ಕಲಾವಿದರಿಂದ ವಿಶಿಷ್ಟ ವಿನ್ಯಾಸದ ಮೂಲಕ 40 ಚಿತ್ರಗಳನ್ನು ರಚಿಸಲಾಗಿದೆ. ಭಾರತದ ಇಂತಹ ಮಹನೀಯರ ಜೀವನ ಮತ್ತು ಸಾಧನೆ ಬಗ್ಗೆ ಕಿರುನೋಟ ನೀಡುವುದಕ್ಕೆ ಪ್ರತಿಯೊಂದು ಚಿತ್ರಕ್ಕೂ ಒಂದೊಂದು ಕ್ಯೂಆರ್ ಕೋಡ್ ಇದ್ದು, ಇಲ್ಲಿಗೆ ಭೇಟಿ ನೀಡುವವರು ತಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ವಕ್ಫ್ ಮಂಡಳಿಗೆ ಇಂದು ಬಿಬಿಎಂಪಿ ನೋಟಿಸ್

ಈದ್ಗಾ ಮೈದಾನ: ಹೆಚ್ಚಿನ ದಾಖಲೆ ಒದಗಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಾಮರಾಜಪೇಟೆ ಈದ್ಗಾ ಮೈದಾನವನ್ನು ವಕ್ಫ್ ಮಂಡಳಿಗೆ ಈವರೆಗೆ ಖಾತೆ ಮಾಡಿಕೊಟ್ಟಿಲ್ಲ. ಹೆಚ್ಚಿನ ದಾಖಲೆಗಳನ್ನು ಒದಗಿಸುವಂತೆ ನೋಟಿಸ್ ನೀಡಲಾಗುತ್ತಿದೆ' ಎಂದು ಬಿಬಿಎಂಪಿ ಪಶ್ಚಿಮ ವಲಯದ ಜಂಟಿ ಆಯುಕ್ತ ಶ್ರೀನಿವಾಸ್ ಸ್ಪಷ್ಟಪಡಿಸಿದರು.

'1965ರಲ್ಲಿ ಸರ್ಕಾರ ಹೊರಡಿಸಿರುವ ಅಧಿಸೂಚನೆ ಒಂದನ್ನೇ ವಕ್ಫ್ ಮಂಡಳಿ ಸಲ್ಲಿಸಿದೆ. ಅದನ್ನೇ ಆಧರಿಸಿ ಖಾತೆ ಮಾಡಿಕೊಡುವಂತೆ ಅರ್ಜಿಯಲ್ಲಿ ಕೋರಿದೆ. ಸುಪ್ರೀಂ ಕೋರ್ಟ್ ಆದೇಶ ಸೇರಿ ಲಭ್ಯ ಇರುವ ಎಲ್ಲ ದಾಖಲೆಗಳನ್ನು ಸಲ್ಲಿಸುಂತೆ ತಿಳಿಸಲಾಗುತ್ತಿದೆ. ಹೆಚ್ಚಿನ ದಾಖಲೆ ಸಲ್ಲಿಸಿದ ಬಳಿಕ ಕಾನೂನು ಸಲಹೆ ಪಡೆದು ಮುಂದುವರಿಯಲಾಗುತ್ತದೆ' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ರಾಗಿ ಬೆಳೆಯುತ್ತಿದ್ದ ಜಾಗ ಕಂದಾಯ ಇಲಾಖೆಯಿಂದ ವಕ್ಫ್ ಮಂಡಳಿಗೆ ಹೇಗೆ ಬಂದಿದೆ, ಮಾಲೀಕತ್ವ ಒದಗಿಸಿಕೊಟ್ಟವರು ಯಾರು, ಯಾವ ಕಾರಣಕ್ಕೆ ಮಾಲೀಕತ್ವದ ಹಕ್ಕು ನೀಡಲಾಗಿದೆ ಎಂಬುದೆಲ್ಲವನ್ನೂ ಪರಿಶೀಲನೆ ಮಾಡಬೇಕಾಗುತ್ತದೆ. ಅಲ್ಲಿಯ ತನಕ ಈ ಆಸ್ತಿ ಬಿಬಿಎಂಪಿ ವಶದಲ್ಲೇ ಇರಲಿದೆ' ಎಂದರು.

'ಮಾಲೀಕತ್ವದ ವಿವಾದ ಅಂತಿಮಗೊಳ್ಳುವ ತನಕ ಯಾವುದೇ ಕಾರ್ಯಕ್ರಮ ನಡೆಸಲು ಅನುಮತಿ ನೀಡುವುದಿಲ್ಲ. ನ್ಯಾಯಾಲಯದ ಆದೇಶ ಇರುವುದರಿಂದ ಮುಸ್ಲಿಂ ಸಮುದಾಯದವರು ವರ್ಷದಲ್ಲಿ ಎರಡು ದಿನ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲು ಅವಕಾಶ ನೀಡಲಾಗುವುದು. ಉಳಿದಂತೆ ಆಟದ ಮೈದಾನವಾಗಿ ಮುಂದುವರಿಯಲಿದೆ' ಎಂದರು.

'ಸ್ಥಳೀಯ ಶಾಸಕರ ಪ್ರಭಾವಕ್ಕೆ ಒಳಗಾಗಿ ವಕ್ಫ್ ಮಂಡಳಿಗೆ ಈ ಜಾಗದ ಮಾಲೀಕತ್ವ ನೀಡಲಾಗುತ್ತಿದೆ ಎಂಬ ಆರೋಪದಲ್ಲಿ ಸತ್ಯಾಂಶ ಇಲ್ಲ. ಶಾಸಕರೊಂದಿಗೆ ಯಾವುದೇ ಅಧಿಕಾರಿಗಳೂ ಸಭೆ ನಡೆಸಿಲ್ಲ, ನಮಗೆ ಯಾವುದೇ ಒತ್ತಡವೂ ಬಂದಿಲ್ಲ. ಖಾತೆ ಮಾಡಿಕೊಡಲು ಕೋರಿ ವಕ್ಫ್ ಮಂಡಳಿ 7 ದಿನಗಳ ಹಿಂದೆ ಅರ್ಜಿ ಸಲ್ಲಿಸಿದ್ದು, ಸಕಾಲ ಕಾಯ್ದೆ ಪ್ರಕಾರ 45 ದಿನಗಳಲ್ಲಿ ಈ ಅರ್ಜಿ ವಿಲೇವಾರಿ ಮಾಡಬೇಕಿದೆ. ಹೆಚ್ಚಿನ ದಾಖಲೆ ಒದಗಿಸುವಂತೆ ಸೂಚಿಸಿ ಬುಧವಾರವೇ ನೋಟಿಸ್ ನೀಡಲಾಗುತ್ತದೆ' ಎಂದು ಸ್ಪಷ್ಟಪಡಿಸಿದರು.

'ವಕ್ಫ್ ಮಂಡಳಿಗೆ ಖಾತೆ ಮಾಡಿದರೆ ಹೋರಾಟ'

'ವಕ್ಫ್ ಮಂಡಳಿಗೆ ಈ ಆಸ್ತಿ ಖಾತೆ ಮಾಡಿಕೊಟ್ಟರೆ ಕಾನೂನು ಹೋರಾಟ ನಡೆಸಲಾಗುವುದು' ಎಂದು ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಅಧ್ಯಕ್ಷ ಎನ್. ಆರ್.ರಮೇಶ್ ಎಚ್ಚರಿಸಿದ್ದಾರೆ.

ಬಿಬಿಎಂಪಿ ಆಡಳಿತಾಧಿಕಾರಿ ಮತ್ತು ಮುಖ್ಯ ಆಯುಕ್ತರಿಗೆ ಮಂಗಳವಾರ ಪತ್ರ ಬರೆದಿರುವ ಅವರು, 'ಶಾಸಕ ಜಮೀರ್ ಅಹಮದ್ ಅವರು ಜೂನ್ 17ರಂದು ತಮ್ಮನ್ನು ಭೇಟಿಯಾದ ಬಳಿಕ ವಕ್ಫ್ ಮಂಡಳಿ ಆಸ್ತಿ ಎಂದು ನೀವು ಹೇಳಿಕೆ ನೀಡಿದ್ದೀರಿ. ನೂರಾರು ಕೋಟಿ ಬೆಲೆ ಬಾಳುವ ಈ ಆಸ್ತಿಯನ್ನು ಯಾರದೋ ಒತ್ತಡಕ್ಕೆ ಮಣಿದು ವಕ್ಫ್ ಮಂಡಳಿಗೆ ಹಸ್ತಾಂತರಿಸುವುದು ತರವಲ್ಲ' ಎಂದಿದ್ದಾರೆ.

'1964ರಿಂದ ಈ ಮೈದಾನದಲ್ಲಿ ಹಲವು ಸಾರ್ವಜನಿಕ ಕಾರ್ಯಕ್ರಮಗಳು ನಡೆದಿವೆ. ಈ ಸಂಬಂಧ ದಾಖಲೆಗಳನ್ನೂ ಸಲ್ಲಿಸಿದ್ದೇನೆ. ಎಲ್ಲವನ್ನೂ ಪರಿಶೀಲಿಸಿ ಪಾಲಿಕೆ ಆಸ್ತಿ ಸಂರಕ್ಷಿಸಬೇಕು' ಎಂದು ಒತ್ತಾಯಿಸಿದ್ದಾರೆ.

ನಕಲಿ ಫೇಸ್‌ಬುಕ್ ಖಾತೆ: ಪವಿತ್ರಾ ಲೋಕೇಶ್ ದೂರು

ಪ್ರಜಾವಾಣಿ ವಾರ್ತೆ

ಮೈಸೂರು: 'ನನ್ನ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆಯನ್ನು ತೆರೆದಿರುವ ವ್ಯಕ್ತಿಯೊಬ್ಬರು ಅನುಚಿತವಾಗಿ ಸಂದೇಶ ಕಳುಹಿಸುತ್ತಿದ್ದಾರೆ' ಎಂದು ಆರೋಪಿಸಿ ನಟಿ ಪವಿತ್ರಾ ಲೋಕೇಶ್, ನಜರಾಬಾದ್‌ನ ಸೈಬರ್ ಮತ್ತು ಆರ್ಥಿಕ ಅಪರಾಧ ಠಾಣೆಗೆ ದೂರು ನೀಡಿದ್ದಾರೆ.

'ಸಾಮಾಜಿಕ ಜಾಲತಾಣದ ಮೂಲಕ ಸುಳ್ಳು ಸುದ್ದಿಗಳನ್ನು ಹರಡುತ್ತಿರುವುದಲ್ಲದೇ, ಘನತೆಗೆ ಧಕ್ಕೆ ತರುವ ಸಂದೇಶ-ಕಳುಹಿಸುವ ಮೂಲಕ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಕೋರಿದ್ದಾರೆ. ಸೈಬರ್ ಅಪರಾಧ ಪೊಲೀಸರು ತನಿಖೆ ನಡೆಸಿದ್ದಾರೆ.

11 ಮಂದಿಗೆ 'ಸಾಲುಮರದ ತಿಮ್ಮಕ್ಕ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲುಮರದ ತಿಮ್ಮಕ್ಕ ಇಂಟರ್‌ನ್ಯಾಷನಲ್ ಫೌಂಡೇಷನ್ ಕೊಡಮಾಡುವ 'ಸಾಲುಮರದ ತಿಮ್ಮಕ್ಕ ನ್ಯಾಷನಲ್ ಗ್ರೀನರಿ ಅವಾರ್ಡ್-2022'ಕ್ಕೆ 11 ಮಂದಿ ಸಾಧಕರು ಆಯ್ಕೆ ಆಗಿದ್ದಾರೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಇಸ್ರೊದ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್‌ಕುಮಾರ್ (ಬೆಂಗಳೂರು), ಸಾಮಾಜಿಕ ಕಳಕಳಿ ವಿಭಾಗದಲ್ಲಿ ಟಿ.ವಿ-9ರ ರಂಗನಾಥ್ ಭಾರದ್ವಾಜ್ (ಬೆಂಗಳೂರು), ಪರಿಸರ ಸಂರಕ್ಷಣೆ ವಿಭಾಗದಲ್ಲಿ ಗ್ರೀನ್ ಇಂಡಿಯಾ ಚಾಲೆಂಜ್ ಸಂಸ್ಥಾಪಕರೂ ಆಗಿರುವ ರಾಜ್ಯಸಭಾ ಸದಸ್ಯ ಸಂತೋಷ್ ಕುಮಾರ್ (ತೆಲಂಗಾಣ), ಪರಿಸರ ಸಂರಕ್ಷಣೆ ಹಾಗೂ ಸಾಮಾಜಿಕ ಕಳಕಳಿ ವಿಭಾಗದಲ್ಲಿ ಪರಿಸರ ಸಂರಕ್ಷಕ ಸತ್ಯ ಮಾರ್ಗನಿ (ಕಡಿಯಂ, ಆಂಧ್ರಪ್ರದೇಶ), ಶಿಕ್ಷಣ ಸಾಮಾಜಿಕ ಕಳಕಳಿ ವಿಭಾಗದಲ್ಲಿ ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ (ಬೆಂಗಳೂರು), ವೈದ್ಯಕೀಯ ಕ್ಷೇತ್ರದಿಂದ ಚಿಕಿತ್ಸೆಗೆ ₹ 10 ಪಡೆಯುವ ಡಾ.ಚಂದ್ರಮೌಳಿ (ಹಾಸನ ಜಿಲ್ಲೆ, ಬೇಲೂರು), ಸಾಮಾಜಿಕ ಕಳಕಳಿ ವಿಭಾಗದಲ್ಲಿ ಆಸ್ಟ್ರೇಲಿಯ ಕನ್ನಡ ಒಕ್ಕೂಟ ಪ್ರಧಾನ ಕಾರ್ಯದರ್ಶಿ ಸತೀಶ್ ಭದ್ರಣ್ಣ (ಆಸ್ಟ್ರೇಲಿಯ), ಸಮಾಜ ಸೇವಾ ಕ್ಷೇತ್ರ ಡಾ.ಗೋವಿಂದ ಬಾಬು ಪೂಜಾರಿ (ಬೈಂದೂರು, ಬಿಜೂರು), ಸಾರ್ವಜನಿಕ ಸೇವಾ ಕ್ಷೇತ್ರ ಪೊಲೀಸ್ ಇಲಾಖೆಯ ಕೆ.ಶಿವಕುಮಾರ್ (ಚಿಕ್ಕಬಳ್ಳಾಪುರ), ಸಮಾಜ ಸೇವಾ ಕ್ಷೇತ್ರ ಅಮರ್ ನಾಗೇಶ್ ರಾವ್ (ಬೆಂಗಳೂರು) ಹಾಗೂ ವಿಶೇಷ ಪ್ರಶಸ್ತಿ ಪುರಸ್ಕೃತರಾಗಿ ಸಂಗೀತ ಕ್ಷೇತ್ರದಿಂದ ಬೆಂಗಳೂರಿನ ಬಾಲಪ್ರತಿಭೆ ಜ್ಞಾನ ಗುರುರಾಜ್ ಆಯ್ಕೆಯಾಗಿದ್ದಾರೆ.

ಶಾಸಕ ಡಾ.ಜಿ.ಪರಮೇಶ್ವರ ನೇತೃತ್ವದ ಆಯ್ಕೆ ಸಮಿತಿಯು ಈ ಸಾಧಕರನ್ನು ಆಯ್ಕೆ ಮಾಡಿದೆ.

ಇಲ್ಲಿನ ವಸಂತನಗರ ಡಾ.ಬಿ. ಆರ್.ಅಂಬೇಡ್ಕರ್ ಭವನದಲ್ಲಿ ಜೂನ್ 30ರಂದು ನಡೆಯುವ ತಿಮ್ಮಕ್ಕ ಅಭಿನಂದನಾ ಸಮಾರಂಭ ಹಾಗೂ ಪರಿಸರ ಜಾತ್ರೆಯಲ್ಲಿ ಪ್ರಶಸ್ತಿ ಪುರಸ್ಕೃತರನ್ನು ಗೌರವಿಸಲಾಗುವುದು ಎಂದು ಪರಮೇಶ್ವರ ತಿಳಿಸಿದ್ದಾರೆ.

ಪುರಸ್ಕೃತರಿಗೆ ತಲಾ ₹ 25 ಸಾವಿರ ನಗದು, ಬೆಳ್ಳಿ ಪದಕ, ಪ್ರಶಸ್ತಿ, ಸ್ಮರಣಿಕೆ ನೀಡಿ ಸನ್ಮಾನಿಸಲಾಗುತ್ತದೆ.

'3 ಲಕ್ಷ ಹೊಸ ರೈತರ ಸಹಿತ 33 ಲಕ್ಷ ಮಂದಿಗೆ ಸಾಲ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಸಹಕಾರ ಬ್ಯಾಂಕ್‌ಗಳ ಮೂಲಕ 33 ಲಕ್ಷ ರೈತರಿಗೆ ಸಾಲಸೌಲಭ್ಯ ಒದಗಿಸಲು ಸರ್ಕಾರ ಯೋಜನೆ ರೂಪಿಸಿದೆ. ಕನಿಷ್ಠ 3 ಲಕ್ಷ ಹೊಸ ರೈತರಿಗೆ ಸೌಲಭ್ಯ ಕಲ್ಪಿಸಲಾಗುವುದು' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು.

ಮಂಗಳವಾರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಸರ್ಕಾರಿ ಸವಲತ್ತುಗಳು ಪಡೆದವರಿಗೇ ಮತ್ತೆ ಸಿಗುತ್ತಿರುವ ದೂರುಗಳಿವೆ. ಈ ಬಾರಿ ಯಾವುದೇ ಸೌಲಭ್ಯ ಪಡೆಯದವರನ್ನು ಹೊಸ ರೈತರು ಎಂದು ಪರಿಗಣಿಸಲಾಗುವುದು' ಎಂದರು.

'ಕೃಷಿಕರಿಗೆ ವಿವಿಧ ಯೋಜನೆಗಳಡಿ ನೆರವು ಒದಗಿಸಲು ಬಜೆಟ್‌ನಲ್ಲಿ ₹ 24,000 ಕೋಟಿ ಅನುದಾನ ಇರಿಸಲಾಗಿದೆ. ಸಹಕಾರ ಸಂಘಗಳ ಮೂಲಕ ಸಾಲ ಮಂಜೂರು ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ' ಎಂದರು.

ಸಾಲದ ಮೊತ್ತ ದುಪ್ಪಟ್ಟು ಚಿಂತನೆ: 'ಸಹಕಾರ ಸಂಘಗಳ ಮೂಲಕ ರೈತರಿಗೆ ನೀಡುತ್ತಿರುವ ಶೂನ್ಯ ಬಡ್ಡಿ ದರದ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲದ ಮೊತ್ತವನ್ನು ದುಪ್ಪಟ್ಟು ಮಾಡುವ ಚಿಂತನೆಯೂ ಇದೆ' ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಬಾರ್ಡ್ ಜೊತೆಗೆ ಚರ್ಚಿಸಿದ್ದಾರೆ. ರೈತರು ರಾಷ್ಟ್ರೀಕೃತ ಬ್ಯಾಂಕ್‌ಗಳ ಬದಲಿಗೆ ಸಹಕಾರ ಬ್ಯಾಂಕ್‌ಗಳಲ್ಲಿಯೇ ಸಾಲ ಪಡೆಯಬೇಕು ಎಂಬುದು ಇದರ ಉದ್ದೇಶ ಎಂದರು.

'ಸಹಕಾರ ಬ್ಯಾಂಕ್‌ಗಳಲ್ಲಿ ಅವ್ಯವಹಾರದ ಆರೋಪಗಳು ಕೇಳಿಬರುತ್ತಿವೆ. ಇದನ್ನು ತಡೆಯಲು ಸಹಕಾರ ಕಾಯ್ದೆಗೆ ತಿದ್ದುಪಡಿ ತರಲಿದ್ದು, ಕಾಯ್ದೆಯನ್ನು ಇನ್ನಷ್ಟು ಬಲಪಡಿಸಲಾಗುವುದು' ಎಂದು ತಿಳಿಸಿದರು.

ಸಿಲಿಂಡರ್ ಕೊಡದಿದ್ದರೂ ಮಂತ್ರಿಗಳಿಗೆ ಊಟ ಹಾಕಿದ ಅಜ್ಜಿ

ರೊಟ್ಟಿ, ಜುನುಕದ ವಡಿ, ಅನ್ನ, ಸಾರು ಸಿದ್ಧಪಡಿಸಿದ ಬಾಯವ್ವ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ನನಗೆ ಮೋದಿ ಇನ್ನೂ ಅಡಗಿ ಗ್ಯಾಸ್ ಕೊಟ್ಟಿಲ್ಲೆಪ್ಪ. ಇವತ್ತು ಮನೆಗೆ ಮಂತ್ರಿ ಬರಾತಾನ್ ಅಂದ್ರು. ಕಟಗಿ ಒಲಿ ಮ್ಯಾಲೆ ಅಡಗಿ ಮಾಡಿ ನೀಡೇನಿ...'

ತಾಲ್ಲೂಕಿನ ಹಿಂಡಲಗಾ ಗ್ರಾಮದ ಅಜ್ಜಿ ಬಾಯವ್ವ ವಸಂತ ಮಾಸ್ತೆ ಅವರ ಮಾತುಗಳಿವು. ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ರಾಜ್ಯ ಖಾತೆ ಸಚಿವ ಸೋಮ ಪ್ರಕಾಶ್ ಅವರು ಮಂಗಳವಾರ ಮಧ್ಯಾಹ್ನ, ಪರಿಶಿಷ್ಟ ಜಾತಿಯ ಈ ಅಜ್ಜಿ ಮನೆಯಲ್ಲೇ ಊಟ ಮಾಡಿದರು.

87 ವರ್ಷ ವಯಸ್ಸಿನ ಈ ಹಿರಿಯ ಜೀವಕ್ಕೆ ಇನ್ನೂ ಅಡುಗೆ ಅನಿಲ ಸಿಲಿಂಡರ್ ನೀಡಿಲ್ಲ. ಒಲೆಯ ಮೇಲೆಯೆ ರೊಟ್ಟಿ, ಜುನುಕದ ವಡಿ, ಬದನೆಕಾಯಿ ಪಲ್ಯ, ಅನ್ನ, ಸಾರು, ಶೇಂಗಾ ಚಟ್ನಿಯನ್ನೂ ಅವರು ಸಿದ್ಧಪಡಿಸಿದ್ದರು. ಸಚಿವರಿಗೆ ತಾವೇ ಉಣಬಡಿಸಿದರು.

ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳ ಜತೆ ಸಂವಾದಕ್ಕೆ ಜಿಲ್ಲೆಗೆ ಬಂದಿದ್ದ ಸಚಿವ ಸೋಮ ಪ್ರಕಾಶ್, ಪೂರ್ವನಿಯೋಜನೆಯಂತೆ ಪರಿಶಿಷ್ಟರ ಮನೆಯಲ್ಲಿ ಊಟ ಮಾಡಿದರು. ಅವರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳ, ಸಂಸದೆ ಮಂಗಲಾ ಸುರೇಶ ಅಂಗಡಿ ಕೂಡ ಊಟ ಸವಿದರು.

'ಮೋದಿ ಬಡವರಿಗೆ ಉಚಿತವಾಗಿ ಗ್ಯಾಸ್ ಕೊಡ್ತಾನೆ ಎಂದಿದ್ದರು. ನಾನು ಸಾಕಷ್ಟು ಅರ್ಜಿ ಕೊಟ್ಟರೂ ನನಗೆ ಗ್ಯಾಸ್ ಬಂದಿಲ್ಲ. ಇಬ್ಬರು ಗಂಡು ಮಕ್ಕಳಿದ್ದು, ಇಬ್ಬರೂ ಬೇರೆ ಬೇರೆ ಮನೆಯಲ್ಲಿದ್ದಾರೆ. ನಾನೊಬ್ಬಳೇ ಇಲ್ಲಿ ಇದ್ದೇನೆ. ಮಗನಿಗೆ ಸಿಲಿಂಡರ್ ಕೊಟ್ಟಿದ್ದರಿಂದ ನಿನಗೆ ಕೊಡಲು ಬರುವುದಿಲ್ಲ ಎಂದು ಪಂಚಾಯಿತಿಯವರು ಹೇಳಿದ್ದಾರೆ. ಈಗಲೂ ಒಲೆ ಬಳಸುತ್ತಿದ್ದೇನೆ' ಎಂದು ಬಾಯವ್ವ ಮಾಧ್ಯಮದವರಿಗೆ ತಿಳಿಸಿದರು.

25 ವರ್ಷಗಳ ಹಿಂದೆ ಬಾಯವ್ವ ಹಿಂಡಲಗಾ ಗ್ರಾಮ ಪಂಚಾಯಿತಿ ಸದಸ್ಯೆಯಾಗಿದ್ದರು. ಈಗಲೂ ಅವರು ಮಣ್ಣಿನ ಮನೆಯಲ್ಲಿ ವಾಸವಾಗಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಸಚಿವ ಗೋವಿಂದ ಕಾರಜೋಳ, 'ಬಾಯವ್ವ ಅವರ ಮನೆಯಲ್ಲಿ ಗ್ಯಾಸ್ ಇದೆ' ಎಂದರು.


ಬೆಳಗಾವಿ ತಾಲ್ಲೂಕಿನ ಹಿಂಡಲಗಾದ ಬಾಯವ್ವ ವಸಂತ ಮಾಸ್ತೆ ಅವರು ಮಂಗಳವಾರ ತಮ್ಮ ಮನೆಯಲ್ಲಿ (ಎಡದಿಂದ) ಸಚಿವರಾದ ಗೋವಿಂದ ಕಾರಜೋಳ, ಸೋಮ ಪ್ರಕಾಶ್ ಹಾಗೂ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸಂಜಯ ಪಾಟೀಲ ಅವರಿಗೆ ಊಟ ಬಡಿಸಿದರು

ಸೇನೆಗೆ ಕಾಮಗಾರಿ ವಹಿಸುವ ಎಚ್ಚರಿಕೆ

ಒಂದನೇ ಪುಟದಿಂದ...

ಆದರೆ, ಪೈಥಾನ್ ಯಂತ್ರ ಬಳಸಿ ರಸ್ತೆಗುಂಡಿಗಳನ್ನು ಮುಚ್ಚುವ ಕಾಮಗಾರಿಗೆ ಸಂಬಂಧಿಸಿದಂತೆ ಅಮೆರಿಕನ್ ರೋಡ್ ಟೆಕ್ನಾಲಜಿ ಸಲ್ಯೂಷನ್ಸ್ (ಎಆರ್‌ಟಿಎಸ್) ಸಂಸ್ಥೆ ಜೊತೆ ಇನ್ನೂ ಒಪ್ಪಂದ ಮಾಡಿಕೊಂಡಿಲ್ಲ ಹಾಗೂ ಕಾರ್ಯಾದೇಶ ಹೊರಡಿಸಿಲ್ಲ' ಎಂದು ಆಕ್ಷೇಪಿಸಿದರು. ಇದಕ್ಕೆ ಗರಂ ಆದ ನ್ಯಾಯಪೀಠ, 'ಪಾಲಿಕೆ ಯಾವುದೇ ಕೆಲಸ ಮಾಡುತ್ತಿಲ್ಲ. ನೀವು ಹೀಗೆ ನಡೆದುಕೊಂಡರೆ ರಸ್ತೆ ಗುಂಡಿ ಮುಚ್ಚುವ ಕೆಲಸವನ್ನು ರಕ್ಷಣಾ ಇಲಾಖೆಯ ಸೇನಾ ಏಜೆನ್ಸಿ ಅಥವಾ ಮತ್ತಾವುದಾದರೂ ಸಂಸ್ಥೆಯಿಂದ ಮಾಡಿಸುತ್ತೇವೆ' ಎಂದು ಚಾಟಿ ಬೀಸಿತು.

ಇದಕ್ಕೆ ಪಾಲಿಕೆ ಪರ ವಕೀಲರು, 'ಈಗಾಗಲೇ ತಾತ್ಕಾಲಿಕ ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿ ನಡೆಯುತ್ತಿದೆ. ಪೈಥಾನ್ ಯಂತ್ರ ಬಳಕೆಗೆ ಪ್ರತಿ ಚದರ ಮೀಟರ್‌ಗೆ ₹598 ಪಡೆಯಲು ಎಆರ್‌ಟಿಎಸ್ ಒಪ್ಪಿಕೊಂಡಿದೆ. ಈ ಸಂಬಂಧದ ಒಪ್ಪಂದ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

ಇದನ್ನು ಒಪ್ಪದ ನ್ಯಾಯಪೀಠ, 'ಕೊನೆಯದಾಗಿ ಒಂದು ದಿನ ಕಾಲಾವಕಾಶ ನೀಡಲಾಗುವುದು. ಅಷ್ಟರೊಳಗೆ ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ಸಂಬಂಧ ಎಆರ್‌ಟಿಎಸ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ಕಾರ್ಯಾದೇಶ ಹೊರಡಿಸಬೇಕು. ಜಂಟಿ ಸಮೀಕ್ಷಾ ವರದಿಯನ್ನೂ ಮುಂದಿನ ವಿಚಾರಣೆ ವೇಳೆ ಕೋರ್ಟ್‌ಗೆ ಸಲ್ಲಿಸಬೇಕು' ಎಂದು ತಾಕೀತು ಮಾಡಿ, ವಿಚಾರಣೆಯನ್ನು ಇದೆ 30ಕ್ಕೆ ಮುಂದೂಡಿತು. ಅಂದು ಬೆಳಗ್ಗೆ 10.30ಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಸಂಬಂಧಿಸಿದ ಅಧಿಕಾರಿಗಳು ನ್ಯಾಯಾಲಯಕ್ಕೆ ಖುದ್ದು ಹಾಜರಾಗಬೇಕು ಎಂದು ಸೂಚಿಸಿತು.

ಸರ್ಕಾರಿ ವಾಹನ ದುರ್ಬಳಕೆ: ಡಿಸಿಪಿ ವಿರುದ್ಧ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸೌಧ ಭದ್ರತಾ ವಿಭಾಗದ ಡಿಸಿಪಿ ಅಶೋಕ ಜುಂಜರವಾಡ ತಮ್ಮ ಮಕ್ಕಳ ಓಡಾಟಕ್ಕಾಗಿ ಸರ್ಕಾರಿ ವಾಹನ ಬಳಸುತ್ತಿದ್ದಾರೆ' ಎಂದು ಡಿಸಿಪಿಯವರ ಚಾಲಕ ಪವನ್ ಆರೋಪಿಸಿದ್ದಾರೆ.

'ರಜೆ ನೀಡದೇ ದಿನಕ್ಕೆ 15 ಗಂಟೆ ದುಡಿಸಿಕೊಳ್ಳಲಾಗುತ್ತಿದೆ' ಎಂಬುದಾಗಿ ಅಸಮಾಧಾನ ವ್ಯಕ್ತಪಡಿಸಿ ಡಿಸಿಪಿ ಅಶೋಕ ಅವರಿಗೇ ಪತ್ರ ಬರೆದಿರುವ ಪವನ್ ಅಳಲು ತೋಡಿಕೊಂಡಿದ್ದಾರೆ. ಈ ಪತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

'ಪೊಲೀಸ್ ಇಲಾಖೆ ಶಿಸ್ತಿನ ಇಲಾಖೆ. ಕೆಲ ತಿಂಗಳಿನಿಂದ ನಾನು ವಿಧಾನಸೌಧ ಭದ್ರತಾ ವಿಭಾಗದ ನಿಮ್ಮ (ಡಿಸಿಪಿ) ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನಿಮಗೆ ಎರಡು ಕಾರುಗಳಿದ್ದು, ಒಂದನ್ನು ಮಾತ್ರ ಕಚೇರಿ ಉಪಯೋಗಕ್ಕೆ ಬಳಸುತ್ತಿದ್ದೀರಿ. ಇನ್ನೊಂದನ್ನು ನಿಮ್ಮ ಮಕ್ಕಳನ್ನು ಶಾಲೆ, ಮಾರುಕಟ್ಟೆ ಹಾಗೂ ಇತರೆಡೆ ಕರೆದೊಯ್ಯಲು ಉಪಯೋಗಿಸುತ್ತಿದ್ದಿರಿ. ನಿಮಗೆ (ಡಿಸಿಪಿ) ನಾನೂ ಸೇರಿ ಇಬ್ಬರು ಚಾಲಕರು. ಒಬ್ಬ ಚಾಲಕನ್ನು ನಿಮ್ಮ ಮಕ್ಕಳ ಓಡಾಟದ ಕಾರಿಗೆ ನಿಯೋಜಿಸಿದ್ದೀರಿ. ನನ್ನನ್ನು ಕಚೇರಿ, ರಾತ್ರಿ ಗಸ್ತು ಹಾಗೂ ಇತರೆಡೆ ಕರೆದೊಯ್ಯುತ್ತೀರಿ. ನಿತ್ಯವೂ 15 ಗಂಟೆ ಕೆಲಸ ಮಾಡಿಸಿಕೊಳ್ಳುತ್ತೀರಿ. ಇದರಿಂದ ನನ್ನ ವೈಯಕ್ತಿಕ ಜೀವನಕ್ಕೆ ಸಮಯ ನೀಡಲು ಆಗುತ್ತಿಲ್ಲ. ರಜೆ ಕೇಳಿದರೆ ಕೊಡುವುದಿಲ್ಲವೆಂದು ಮಾನಸಿಕವಾಗಿ ನೋಯಿಸುತ್ತೀರಿ' ಎಂದು ಪವನ್ ಪತ್ರದಲ್ಲಿ ದೂರಿದ್ದಾರೆ.

'ಪೊಲೀಸ್ ಇಲಾಖೆ ನಿಯಮ ಹಾಗೂ ಹುದ್ದೆಗೆ ತಕ್ಕಂತೆ ನಾನು ಕೆಲಸ ಮಾಡಲು ಸಿದ್ಧನಿದ್ದೇನೆ. ಆದರೆ ಅನಧಿಕೃತವಾಗಿ ಕೆಲಸ ಮಾಡಲು ನನ್ನಿಂದ ಆಗುವುದಿಲ್ಲ' ಎಂದೂ ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಆರೋಪದ ಬಗ್ಗೆ ಪ್ರತಿಕ್ರಿಯೆ ಪಡೆಯಲು ಡಿಸಿಪಿ ಅಶೋಕ ಜುಂಜರವಾಡ ಅವರು ಲಭ್ಯರಾಗಲಿಲ್ಲ.

ಬೇರೆಡೆ ನಿಯೋಜನೆ: ಸಾಮಾಜಿಕ ಮಾಧ್ಯಮಗಳಲ್ಲಿ ಪತ್ರ ಹರಿದಾಡುತ್ತಿದ್ದಂತೆ ಕಾನ್‌ಸ್ಟೇಬಲ್ ಪವನ್ ಅವರನ್ನು ಬೇರೆಡೆ ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಆತ್ಮಹತ್ಯೆಗೆ ಯತ್ನಿಸಿದ ವಿದ್ಯಾರ್ಥಿ: ಆಸ್ಪತ್ರೆಗೆ ಸೇರಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ ವಿದ್ಯಾರ್ಥಿಯೊಬ್ಬರನ್ನು ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸೂಕ್ತ ಸಮಯದಲ್ಲಿ ಆಸ್ಪತ್ರೆಗೆ ದಾಖಲಿಸಿದ್ದು, ಪೊಲೀಸರ ಸಮಯಪ್ರಜ್ಞೆಗೆ ಮೆಚ್ಚುಗೆ ವ್ಯಕ್ತವಾಗಿದೆ.

'ಮಹಾರಾಷ್ಟ್ರ ಪುಣೆಯ ಅನಿಲ್ ದಾಬಾದ್ (24) ನಗರದ ಕಾಲೇಜೊಂದರಲ್ಲಿ ಎರಡನೇ ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯ ಪೇಯಿಂಗ್ ಗೆಸ್ಟ್ ಕಟ್ಟಡವೊಂದರಲ್ಲಿ ನೆಲೆಸಿದ್ದಾರೆ.'

'ಮಾನಸಿಕವಾಗಿ ನೊಂದಿದ್ದರು ಎನ್ನಲಾದ ಅನಿಲ್, ಆತ್ಮಹತ್ಯೆಗೆ ತೀರ್ಮಾನಿಸಿದ್ದರು. ಬೆಂಗಳೂರಿನ ಬೇರೊಂದು ಪ್ರದೇಶದಲ್ಲಿ ವಾಸವಿರುವ ತಮ್ಮ ಸ್ನೇಹಿತನಿಗೆ ವಾಟ್ಸ್‌ಆ್ಯಪ್‌ನಲ್ಲಿ ಮರಣಪತ್ರ ಕಳುಹಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮರಣಪತ್ರ ನೋಡಿ ಗಾಬರಿಗೊಂಡಿದ್ದ ಸ್ನೇಹಿತ, ಪೊಲೀಸ್ ನಿಯಂತ್ರಣ ಕೊಠಡಿ ಸಂಖ್ಯೆ 112ಕ್ಕೆ ಕರೆ ಮಾಡಿದ್ದರು. ಪೇಯಿಂಗ್ ಗೆಸ್ಟ್ ವಿಳಾಸ ನೀಡಿ, ಸ್ನೇಹಿತನನ್ನು ರಕ್ಷಿಸುವಂತೆ ಕೋರಿದ್ದರು.'


'ನಿಯಂತ್ರಣ ಕೊಠಡಿ ಸಿಬ್ಬಂದಿ ಜೆ.ಪಿ. ನಗರ ಠಾಣೆಯ ಹೊಯ್ಸಳ ಗಸ್ತು ವಾಹನಕ್ಕೆ ಮಾಹಿತಿ ರವಾನಿಸಿದ್ದರು. ಕರ್ತವ್ಯದಲ್ಲಿದ್ದ ಎಎಸ್ಐ ರಮೇಶ್ ಹಾಗೂ ಹೆಡ್ ಕಾನ್‌ಸ್ಟೆಬಲ್ ಚಂದ್ರಶೇಖರ್, ಪೇಯಿಂಗ್ ಗೆಸ್ಟ್ ಕಟ್ಟಡಕ್ಕೆ ಹೋಗಿದ್ದರು' ಎಂದೂ ಮೂಲಗಳು ತಿಳಿಸಿವೆ.

ಚಿತ್ರಾವಳಿ



ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ ನಡೆದ ಕೆಂಪೇಗೌಡರ ಜಯಂತಿಯಲ್ಲಿ ಬ್ಯಾಂಕ್ ಸಿಬ್ಬಂದಿ ಪಾಲ್ಗೊಂಡಿದ್ದರು



ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಕೆಂಪೇಗೌಡರ 513ನೇ ಜಯಂತಿಯಲ್ಲಿ ಬಮೂಲ್ ಮಾಜಿ ಅಧ್ಯಕ್ಷ ಆರ್.ಕೆ.ರಮೇಶ್, ಕಾಂಗ್ರೆಸ್ ಮುಖಂಡ ರಾಜಗೋಪಾಲ ರೆಡ್ಡಿ, ಗುಂಡುಮಣಿ ಶ್ರೀನಿವಾಸ್, ಜಿಗಣಿ ಶ್ರೀಧರ್, ಆಂಥೋಣಿ ಕಿರಣ್ ಇದ್ದರು



ಸೃಷ್ಟಿಯ ಪ್ರಾಚೀನ ವಸ್ತುವಿನ ಅಧ್ಯಯನ ಯಾನ

ರ್ಯುಗು ಕ್ಷುದ್ರಗ್ರಹವು ಸುಮಾರು 4.5 ಶತಕೋಟಿ ವರ್ಷಗಳ ಹಿಂದೆ ಸೌರವ್ಯೂಹ ಹುಟ್ಟಿದಾಗ ರೂಪುಗೊಂಡ ಕ್ಷುದ್ರಗ್ರಹ. ಇದು ವಿಜ್ಞಾನಿಗಳು ಅಧ್ಯಯನ ಮಾಡಿರುವ ಅತ್ಯಂತ ಪ್ರಾಚೀನ ವಸ್ತುವಾಗಿದೆ.

ಸುಧೀರ ಎಚ್. ಎಸ್.



‘ಹಯಾಬುಸಾ’ ಎಂದರೆ ವೇಗವಾಗಿ ಚಲಿಸುವ ಜಪಾನೀ ಬೈಕ್ ನೆನಪಿಗೆ ಬರುವುದು ಅಲ್ಲವೇ? ಆದರೆ ಜಪಾನಿನ ಬಾಹ್ಯಾಕಾಶ ಸಂಸ್ಥೆ - (ಜಾಕ್ಸ, JAXA) ತನ್ನ ಒಂದು ನೌಕೆಯ ಹೆಸರನ್ನು ‘ಹಯಾಬುಸಾ 2’ ಎಂದು ಇಟ್ಟಿದ್ದಾರೆ. ಈ ನೌಕೆಯನ್ನು ಜಪಾನಿನ ಬಾಹ್ಯಾಕಾಶ ಸಂಸ್ಥೆ ಸೌರವ್ಯೂಹದಾದ್ಯಂತ ಸಂಚರಿಸಿ ‘ರ್ಯುಗು’ (Ryugu) ಕ್ಷುದ್ರಗ್ರಹವನ್ನು ಸಂಪರ್ಕ ಸಾಧಿಸುವ ಉದ್ದೇಶದಿಂದ ಡಿಸೆಂಬರ್ 2014ರಲ್ಲಿ ಉಡಾವಣೆ ಮಾಡಿತ್ತು. ಇದು ಸುಮಾರು ಮೂವತ್ತು ಕೋಟಿ (300 ಮಿಲಿಯನ್) ಕಿಲೋಮೀಟರ್ ದೂರ ಪ್ರಯಾಣಿಸಿ 2018ರಲ್ಲಿ ರ್ಯುಗು ಕ್ಷುದ್ರಗ್ರಹವನ್ನು ಸ್ಪರ್ಶಿಸಿತ್ತು. ಅಲ್ಲಿಯೇ ಕೆಲವು ತಿಂಗಳು ಇದ್ದು ಮಾಹಿತಿ ಮತ್ತು ವಸ್ತು ಸಂಗ್ರಹಣೆ ಮಾಡಿ, 2020ಯಲ್ಲಿ ಯಶಸ್ವಿಯಾಗಿ ಹಿಂದಿರುಗಿತ್ತು.

ಬೇರೆ ಬೇರೆ ದೇಶದ ವಿಜ್ಞಾನಿಗಳು ಇದನ್ನು ವಿಸ್ತೃತವಾಗಿ ವಿಶ್ಲೇಷಿಸಿ ಇದರ ಬಗ್ಗೆ ‘ಸೈನ್ಸ್’ ಎಂಬ ಪ್ರತಿಷ್ಠಿತ ನಿಯತಕಾಲಿಕೆಯಲ್ಲಿ ಇತ್ತೀಚಿನ (ಜೂನ್ 9) ಸಂಚಿಕೆಯಲ್ಲಿ ವಿವರವಾದ ಲೇಖನವನ್ನು ಪ್ರಕಟಿಸಿದ್ದಾರೆ. ಇದನ್ನು ವಿಶ್ಲೇಷಿಸಲು ‘ಕಾಸ್ಮಿಕ್ ಕೆಮಿಸ್ಟ್ರಿ’ಯನ್ನು ಬಳಸಿಕೊಂಡಿದ್ದಾರೆ.

‘ಹಯಾಬುಸಾ 2’ 2018ರಲ್ಲಿ ಕ್ಷುದ್ರಗ್ರಹವನ್ನು ತಲುಪಿದಾಗ, ಅದರ ಮೇಲ್ಮೈಯಲ್ಲಿ ಎರಡು ರೋವರ್‌ಗಳನ್ನು ಇಳಿಸಲಾಗಿತ್ತು. ಈ ರೋವರ್‌ಗಳು ಕ್ಷುದ್ರಗ್ರಹದ ಮೇಲೆ ಓಡಾಡುವುದರ ಜೊತೆ ಸುಮಾರು ಹದಿನೈದು ಮೀಟರ್‌ನಷ್ಟು ಎತ್ತರ ಜಿಗಿಯುವ ಸಾಮರ್ಥ್ಯ ಹೊಂದಿತ್ತು. ಈ ರೋವರ್‌ಗಳಿಗೆ ಎರಡು ಕ್ಯಾಮೆರಾ ಅಳವಡಿಸಿತ್ತು ಮತ್ತು ಹಲವಾರು ಸೆನ್ಸಾರ್ (ಸಂವೇದಕ)ಗಳನ್ನು ಅಳವಡಿಸಿತ್ತು. ಹಾಗಾಗಿ ಇದರ ಮೇಲಿನ ತಾಪಮಾನ ಮತ್ತು ಇನ್ನಿತರೆ ಮಾಹಿತಿಯನ್ನು ಪಡೆಯಲು ಸಾಧ್ಯವಾಯಿತು. ಅದಲ್ಲದೆ ಈ ಕ್ಷುದ್ರಗ್ರಹದ ಮೇಲ್ಮೈ ವಸ್ತುಗಳನ್ನು ಮಾತ್ರವಲ್ಲದೆ ಅದರ ಮೇಲಿದ್ದ ಕೆಲವು ಕಲ್ಲು-ಬಂಡೆಗಳ ಒಳಗಿನ ವಸ್ತುಗಳನ್ನು ಸಂಗ್ರಹಿಸುವ ಸಲುವಾಗಿ ಕೊನೆಗೆ ಮೂರನೇ ವಾಹಕವಾದ ಒಂದು ಲ್ಯಾಂಡರ್ ಅನ್ನು ಕೂಡ ಅದರ ಮೇಲೆ ಇಳಿಸಲಾಗಿತ್ತು. ಇದರಿಂದ ಸ್ವಲ್ಪ ಪ್ರಮಾಣದಲ್ಲಿ ಮೇಲ್ಮೈಯ ಮೇಲೆ ಸಣ್ಣ ಪೆಲ್ಲೆಟ್‌ಗಳನ್ನು ಹಾರಿಸಿಲಾಗಿತ್ತು. ಪೆಲ್ಲೆಟ್‌ಗಳ ಅಪ್ಪಳಿಕೆಯಿಂದ ಛಿದ್ರಗೊಂಡ ಮಣ್ಣು ಮತ್ತು ಬಂಡೆಯ ತುಣುಕನ್ನು ಸಂಗ್ರಹಿಸಲಾಗಿತ್ತು.


‘ಹಯಾಬುಸಾ 2’ ಆರು ವರ್ಷಗಳ ಯಾನ ಮಾಡಿ ಮತ್ತು ಸುಮಾರು ಐನೂರು ಕೋಟಿ (ಐದು ಬಿಲಿಯನ್) ಕಿಲೋಮೀಟರ್ ಸಂಚರಿಸಿತ್ತು. ಡಿಸೆಂಬರ್ 2020ರಲ್ಲಿ ಭೂಮಿಗೆ ಮರಳಿದಾಗ ದಕ್ಷಿಣ ಆಸ್ಟ್ರೇಲಿಯಾದ ‘ವೂಮೆರಾ’ ಎಂಬ ಪ್ರದೇಶದಲ್ಲಿ ಸಂಗ್ರಹಿಸಿದ್ದ ವಸ್ತುಗಳ ಒಂದು ಕ್ಯಾಪ್ಸುಲ್ ಅನ್ನು ಯಶಸ್ವಿಯಾಗಿ ಬಿಡುಗಡೆ ಮಾಡಿತ್ತು.

‘ಹಯಾಬುಸಾ 2’ ಸಂಗ್ರಹಿಸಿದ ವಸ್ತುವಿನ ಪ್ರಮಾಣ ಐದು ಗ್ರಾಂ ಮಾತ್ರ! ಕೇವಲ ಐದೇ ಗ್ರಾಂ ಅಷ್ಟೆಯೆ ಎನ್ನಬಹುದು. ಆದರೆ ಇದು ಜಪಾನಿನ ಬಾಹ್ಯಾಕಾಶ ಸಂಸ್ಥೆ ನಿರೀಕ್ಷಿಸಿದ ಮಟ್ಟಕ್ಕಿಂತ ಹೆಚ್ಚು ಮತ್ತು ಸದ್ಯಕ್ಕೆ ಅಧ್ಯಯನ ನಡೆಸಲು ಸಾಕಷ್ಟು ಎಂದು ವಿಜ್ಞಾನಿಗಳು ಹೇಳುತ್ತಾರೆ. ‘ಹಯಾಬುಸಾ 2’ ಭೂಮಿಗೆ ಹಿಂದಿರುಗಿದ ನಂತರ ಸಂಗ್ರಹಿಸಿದ ವಸ್ತುವನ್ನು ವಿಜ್ಞಾನಿಗಳು ಬಹಳ ಕೌತುಕದಿಂದ ಅಧ್ಯಯನ ನಡೆಸಿದ್ದಾರೆ. ರ್ಯುಗು ಕ್ಷುದ್ರಗ್ರಹವು ಸುಮಾರು 4.5 ಶತಕೋಟಿ (ಬಿಲಿಯನ್) ವರ್ಷಗಳ ಹಿಂದೆ ಸೌರವ್ಯೂಹವು ಹುಟ್ಟಿದಾಗ ರೂಪುಗೊಂಡ ಕ್ಷುದ್ರಗ್ರಹವೆಂದು ಈ ಅಧ್ಯಯನದಿಂದ ತಿಳಿದುಬಂದಿದೆ. ಇದಲ್ಲದೇ ಈ ವಸ್ತುವು ಇಲ್ಲಿಯವರಗೆ ವಿಜ್ಞಾನಿಗಳು ಅಧ್ಯಯನ ಮಾಡಿರುವ ಅತ್ಯಂತ ಪ್ರಾಚೀನ ವಸ್ತುವಾಗಿದೆ. ಇದರ ಅಧ್ಯಯನದಿಂದ ಮೂಲಜೀವ ವಿಕಾಸನಗೊಂಡ ಬಗ್ಗೆ ಬೆಳಕು ಚೆಲ್ಲಬಹುದೆಂದು ವಿಜ್ಞಾನಿಗಳು ಅಂದಾಜಿಸುತ್ತಿದ್ದಾರೆ.

ರ್ಯುಗು ಕ್ಷುದ್ರಗ್ರಹದಿಂದ ಸಂಗ್ರಹಿಸಿದ್ದ ವಸ್ತುಗಳ ವಿಶ್ಲೇಷಣೆಯು ಸುಮಾರು 20 ‘ಅಮೈನೋ ಆ್ಯಸಿಡ್’ (ಆಮ್ಲ)ಗಳ ಇರುವಿಕೆಯನ್ನು ಸ್ಪಷ್ಟೀಕರಿಸಿದೆ. ಕಾರ್ಬಾಕ್ಸಿಲಿಕ್ ಮತ್ತು ಅಮೈನ್ ಗುಂಪುಗಳಿಂದ ರೂಪುಗೊಂಡ ಅಮೈನೋ ಆ್ಯಸಿಡ್ ಜೀವದ ಮೂಲಭೂತ ಅಂಶಗಳಲ್ಲಿ ಒಂದು ಪ್ರಮುಖ ಅಂಶ. ಇದರಿಂದ ಜೀವದ ಉಗಮ ಮತ್ತು ವಿಕಸನದ ಬಗ್ಗೆ ತಿಳಿಯಲು ಸಾಕಷ್ಟು ಪೂರಕವಾಗಿದೆ. ಅಮೈನೋ ಆ್ಯಸಿಡ್‌ಗಳು ಸೇರಿ ಪ್ರೊಟೀನ್‌ಗಳನ್ನೂ ತಯಾರಿಸುತ್ತವೆ. ಜೀವಂತ ಅಣುಗಳಿಗೆ ಅತ್ಯಾವಶ್ಯಕ. ಏಕೆಂದರೆ ಈ ಪ್ರೊಟೀನ್‌ಗಳಿಂದಲೇ ಜೀರ್ಣಕ್ರಿಯೆ, ಅಭಿವೃದ್ಧಿ, ಅಂಗಾಂಶ ದುರಸ್ತಿ ಮತ್ತು ಇತರ ವಿವಿಧ ದೈಹಿಕ ಚಟುವಟಿಕೆಗಳು ಸಾಧ್ಯವಾಗುವುದು. ಯಾವುದೇ ಜೀವಿ ಇವುಗಳ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದೆ.

ಈ ಹಿಂದೆ ಭೂಮಿಗೆ ಅಪ್ಪಳಿಸಿದ ಕ್ಷುದ್ರಗ್ರಹಗಳಲ್ಲಿ ಅಥವಾ ಉಲ್ಕಾಶಿಲೆಗಳಲ್ಲಿ ಅಮೈನೋ ಆ್ಯಸಿಡ್‌ಗಳ ಕುರುಹುಗಳು ಕಂಡುಬಂದಿವೆ. ಆದರೆ, ಅವುಗಳನ್ನು ಪ್ರಮಾಣೀಕರಿಸುವುದು ಸಾಧ್ಯವಾಗಿರಲಿಲ್ಲ. ಏಕೆಂದರೆ ಅವು ಭೂಮಿಯ ಕಡೆ ಬಂದಾಗ ಇಲ್ಲಿನ ವಾತಾವರಣಕ್ಕೆ ಹೊಂದದೆ, ವಾತಾವರಣದಲ್ಲಿನ ತೇವಾಂಶ ಕೂಡ ಇದರ ಮೂಲ ರಾಸಾಯನಿಕ ರಚನೆಯನ್ನು ಬದಲಾಯಿಸಿರುತ್ತದೆ. ಆದರೆ ‘ಹಯಾಬುಸಾ 2’ ಇಂದ ಸಂಗ್ರಹಿಸಿ ತಂದಿರುವ ವಸ್ತು ಈ ಹಿಂದೆ ಅಧ್ಯಯನ ನಡೆಸಿರುವ ಇಂತಹ ವಸ್ತುಗಳಿಗಿಂತ ಪರಿಶುದ್ಧವಾಗಿದೆ. ಏಕೆಂದರೆ ಇದನ್ನು ಇತರೆ ರಾಸಾಯನಿಕ ಅಂಶಗಳ ಸಂಯೋಜನೆಗೆ ಅವಕಾಶವಿಲ್ಲದಂತೆ ಸಂಗ್ರಹಿಸಿ ಭೂಮಿಗೆ ತರಲಾಗಿದೆ.

ರ್ಯುಗು ಕ್ಷುದ್ರಗ್ರಹವು ಎಂದಿಗೂ 100°Cಗಿಂತ ಹೆಚ್ಚಿನ ತಾಪಮಾನವನ್ನು ಅನುಭವಿಸಿಲ್ಲ ಎಂಬ ಅಂಶವೂ ಗಮನೀಯ. ಏಕೆಂದರೆ ಜೀವನದ ಉಗಮ ಮತ್ತು ವಿಕಸನದ ಮೂಲಭೂತ ಅಂಶಗಳಲ್ಲಿ ಒಂದಾದ ಅಮೈನೋ ಆ್ಯಸಿಡ್‌ಗಳು ಮೂಲತಃ ಕ್ಷುದ್ರಗ್ರಹಗಳಿಂದ ಭೂಮಿಗೆ ಬಂದಿರಬೇಕು ಎಂದು ಕೆಲವರು ವಿಜ್ಞಾನಿಗಳು ನಂಬಿರುತ್ತಾರೆ. ಕ್ಷುದ್ರಗ್ರಹವನ್ನು 100°Cಗಿಂತ ಹೆಚ್ಚಿನ ತಾಪಮಾನಕ್ಕೆ ಒಡ್ಡಿದರೆ, ಕೆಲವು ಮೂಲಭೂತ ರಾಸಾಯನಿಕ ರಚನೆಗಳು ಇದರ ಪರಿಣಾಮವಾಗಿ ಕುದಿಸಿದಾಗ ಆವಿಯಾದಂತೆ ಇವು ಬಾಹ್ಯಾಕಾಶದಲ್ಲಿ ಲೀನವಾಗಿಹೋಗುತ್ತವೆ. ‘ಹಯಾಬುಸಾ 2’ ಇಂದ ಸಂಗ್ರಹಿಸಿದ ವಸ್ತುಗಳಲ್ಲಿ ಸೌರವ್ಯೂಹದ ರಚನೆಯಿಂದ ಇಲ್ಲಿಯವರೆಗೆ ಉಳಿದ ಸಾವಯವ ವಸ್ತುಗಳ ಇರುವಿಕೆಯನ್ನು ಪತ್ತೆಹಚ್ಚಲು ವಿಜ್ಞಾನಿಗಳಿಗೆ ಸಾಧ್ಯವಾಗಿಸಿತು. ರ್ಯುಗು ಕ್ಷುದ್ರಗ್ರಹದಲ್ಲಿ ಇಂಗಾಲವು ಸಮೃದ್ಧವಾಗಿದೆ ಮತ್ತು ಇಲ್ಲಿನ ರಾಸಾಯನಿಕ ರಚನೆ ಸೂರ್ಯನಲ್ಲಿರುವ ರಾಸಾಯನಿಕ ರಚನೆಗೆ ಸಾಕಷ್ಟು ಹೋಲಿಕೆ ಇದೆ ಎಂದು ತಿಳಿದುಬಂದಿದೆ. ಸೌರವ್ಯೂಹವು ಅಸ್ತಿತ್ವಕ್ಕೆ ಬಂದ ಐವತ್ತು ಲಕ್ಷ (ಐದು ಮಿಲಿಯನ್) ವರ್ಷಗಳ ನಂತರ ರೂಪುಗೊಂಡಿದೆ ಎಂದು ವಿಜ್ಞಾನಿಗಳು ಕಂಡುಹಿಡಿದ್ದಾರೆ. ಇದರಿಂದ ಗ್ರಹಗಳು ಮತ್ತು ನಕ್ಷತ್ರಗಳ ಮೂಲವನ್ನು ಇನ್ನೂ ಹೆಚ್ಚು ತಿಳಿಯಾಲು ಮತ್ತು ಪ್ರಮುಖವಾಗಿ ಜೀವದ ಉಗಮದ ಬಗ್ಗೆ ತಿಳಿಯಲು ನೆರವಾಗುತ್ತದೆ ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ. ರ್ಯುಗುನಿಂದ ತಂದಿರುವ ವಸ್ತುವಿನ ರಾಸಾಯನಿಕ ರಚನೆ ಸೂರ್ಯನಲ್ಲಿರುವ ವಸ್ತುಗಳ ಮೂಲ ರಚನೆಯಂತೇ ಇದೆ. ಸೂರ್ಯನಲ್ಲಿ ಹೈಡ್ರೋಜನ್ ಮತ್ತು ಹೀಲಿಯಂ ಅನ್ನು ಬೇರ್ಪಡಿಸಿದರೆ, ಉಳಿದುಕೊಳ್ಳುವ ಇತರೆ ರಾಸಾಯನಿಕ ರಚನೆ ಮತ್ತು ಅಂಶಗಳು ರ್ಯುಗುನಲ್ಲಿ ಇರುವ ರಚನೆಯಂತೆ ಸುಮಾರು ಅದೇ ಅನುಪಾತದಲ್ಲಿ ಇದೆ ಎಂದು ತಿಳಿದುಬಂದಿದೆ. ಹಾಗಾಗಿ ಸೌರವ್ಯೂಹದ ಜೊತೆ ಸೂರ್ಯನಲ್ಲಿ ಇರುವ ಮೂಲ ರಾಸಾಯನಿಕ ರಚನೆಯ ಬಗ್ಗೆ ತಿಳಿದು ಕೊಳ್ಳಲು ಇದು ಸಹಾಯ ಮಾಡಬಲ್ಲದು.



ಒಟ್ಟಾರೆ ಈ ಅಧ್ಯಯನವು ಬಾಹ್ಯಾಕಾಶ, ಸೌರವ್ಯೂಹ ಮತ್ತು ನಮ್ಮ (ಎಂದರೆ, ಜೀವಿಗಳ) ಮೂಲದ ಬಗ್ಗೆ ಅರಿತುಕೊಳ್ಳಲು ಒಂದು ಮಹತ್ವದ ಬೆಳವಣಿಗೆ. ❖

ಸೂಪರ್ ಕಂಪ್ಯೂಟರ್ ಫ್ರಾಂಟಿಯರ್

ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗಳಿಗೆ ಹೊಸ ಚಿಕಿತ್ಸೆ ಮತ್ತು ಔಷಧಗಳ ಅಭಿವೃದ್ಧಿಯಲ್ಲಿ ಫ್ರಾಂಟಿಯರ್ ನೆರವಾಗಲಿದೆ.

ಉದಯ ಶಂಕರ ಪುರಾಣಿಕ

ಒಂದು ಮಿಲಿಯನ್ ಅಂದರೆ 10 ಲಕ್ಷ, ಒಂದು ಬಿಲಿಯನ್ ಅಂದರೆ 100 ಕೋಟಿ, ಒಂದು ಟ್ರಿಲಿಯನ್ ಅಂದರೆ ಒಂದು ಲಕ್ಷ ಕೋಟಿಗಳಷ್ಟಾಗುತ್ತದೆ. ಹಾಗಾದರೆ ಕ್ವಿನ್‌ಟ್ರಿಲಿಯನ್ ಅಂದರೆಷ್ಟು?

ಒಂದು ಕ್ವಿನ್‌ಟ್ರಿಲಿಯನ್ ಅಂದರೆ ಹತ್ತು ಸಾವಿರ ಕೋಟಿ ಕೋಟಿಗಳಷ್ಟಾಗುತ್ತದೆ.

ಒಂದು ಕ್ಷಣದಲ್ಲಿ ಒಂದು ಕ್ವಿನ್‌ಟಿಲಿಯನ್ ಲೆಕ್ಕ ಮಾಡುವ ಸಾಮರ್ಥ್ಯವುಳ್ಳ ‘ಫ್ರಾಂಟಿಯರ್’ ಅನ್ನು, ವಿಶ್ವದ ಅತ್ಯಂತ ವೇಗದ ಮತ್ತು ಸಾಮರ್ಥ್ಯವುಳ್ಳ ಸೂಪರ್ ಕಂಪ್ಯೂಟರ್ ಎಂದು ಹೇಳಲಾಗಿದೆ. ಅಮೆರಿಕಾದ ಓಕ್ ರಿಡ್ಜ್ ರಾಷ್ಟ್ರೀಯ ಪ್ರಯೋಗಾಲಯ(ಓಆರ್‌ಎನ್‌ಎಲ್)ದಲ್ಲಿ ಕೆಲಸ ಮಾಡುತ್ತಿರುವ ಫ್ರಾಂಟಿಯರ್, ವಿಜ್ಞಾನ ಮತ್ತು ಸಂಶೋಧನೆ ಕ್ಷೇತ್ರದಲ್ಲಿ ಸಂಚಲನವನ್ನುಂಟುಮಾಡಿದೆ.


ಅಂದಾಜು 60 ಕೋಟಿ ಡಾಲರ್ ವೆಚ್ಚದಲ್ಲಿ ಸ್ಥಾಪಿಸಲಾಗಿರುವ ಈ ಸೂಪರ್ ಕಂಪ್ಯೂಟರ್, 7300 ಚದರ ಅಡಿ ಪ್ರದೇಶವನ್ನು ಬಳಸಿಕೊಂಡಿದೆ. ಫ್ರಾಂಟಿಯರ್ ಕೆಲಸ ಮಾಡಲು ಸುಮಾರು 21 ಮೆಗಾವ್ಯಾಟ್ ವಿದ್ಯುತ್ ಅನ್ನು ಬಳಸಲಾಗುತ್ತದೆ.

ಫ್ರಾಂಟಿಯರನ್ನು ಜನಸಾಮಾನ್ಯರಿಗೆ ಉಪಯುಕ್ತವಾಗುವಂತೆ, ವಿಜ್ಞಾನ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಸಂಶೋಧನೆಗಾಗಿ ಬಳಸಲು ನಿರ್ಧರಿಸಲಾಗಿದೆ. ಉದಾಹರಣೆಗೆ, ನ್ಯೂಕ್ಲಿಯರ್ ಫ್ಯೂಷನ್ ಮೂಲಕ ವಿದ್ಯುತ್ ಉತ್ಪಾದನೆಯನ್ನು ಕುರಿತು ವಿಜ್ಞಾನಿಗಳು ನಡೆಸಿರುವ ಪ್ರಯತ್ನಕ್ಕೆ, ಫ್ರಾಂಟಿಯರ್ ದೈತ್ಯಬಲವನ್ನು ನೀಡಲಿದೆ. ಸಂಪೂರ್ಣವಾದ ನ್ಯೂಕ್ಲಿಯರ್ ಫ್ಯೂಷನ್ ರಿಯಾಕ್ಟರ್ ಮಾದರಿಯನ್ನು ಫ್ರಾಂಟಿಯರ್‌ನಲ್ಲಿ ಅಭಿವೃದ್ಧಿ ಮಾಡಿ, ಅದು ಕೆಲಸ ಮಾಡುವಾಗ ಏನಾಗುತ್ತದೆ ಎಂದು ತಿಳಿದುಕೊಳ್ಳಲು ವಿಜ್ಞಾನಿಗಳಿಗೆ ಸಾಧ್ಯವಾಗಲಿದೆ. ಇದರಿಂದಾಗಿ, ನಿಕಟ ಭವಿಷ್ಯದಲ್ಲಿ ಅತ್ಯಂತ ಸುರಕ್ಷಿತವಾದ ನ್ಯೂಕ್ಲಿಯರ್ ಫ್ಯೂಷನ್ ಆಧಾರಿತ ವಿದ್ಯುತ್ ಉತ್ಪಾದನೆ ಘಟಕಗಳನ್ನು ಸ್ಥಾಪಿಸಲು ಮತ್ತು ಪರಿಸರಕ್ಕೆ ಮಾರಕವಾದ ಶಾಖೋತ್ಪನ್ನ ಮೊದಲಾದ ವಿದ್ಯುತ್ ಉತ್ಪಾದನೆ ಘಟಕಗಳನ್ನು ನಿಲ್ಲಿಸಲು ಸಾಧ್ಯವಾಗುತ್ತದೆ ಎನ್ನುವ ವಿಶ್ವಾಸವನ್ನು ಓಆರ್‌ಎನ್‌ಎಲ್ ವಿಜ್ಞಾನಿಗಳು ವ್ಯಕ್ತಪಡಿಸುತ್ತಾರೆ.



ವಾಹನೋದ್ಯಮದಲ್ಲಿ ಹೆಚ್ಚು ಸಮರ್ಥವಾದ ಮತ್ತು ಪರಿಸರಸ್ನೇಹಿಯಾಗಿ ಕೆಲಸ ಮಾಡುವ ಇಂಜಿನ್‌ಗಳ ವಿನ್ಯಾಸ ಮತ್ತು ಅಭಿವೃದ್ಧಿಗಾಗಿ ಫ್ರಾಂಟಿಯರನ್ನು ಬಳಸಲು ಉದ್ದೇಶಿಸಲಾಗಿದೆ. ಇಂತಹ ಇಂಜಿನ್‌ಗಳ ಅಭಿವೃದ್ಧಿಯಿಂದ, ಸರಕು ಸಾಗಾಣಿಕೆ ಮತ್ತು ಸಾರ್ವಜನಿಕರಿಗೆ ವೈಯಕ್ತಿಕ ಹಾಗೂ ಸಮೂಹ ಸಾರಿಗೆ ವ್ಯವಸ್ಥೆಯ ವೆಚ್ಚವನ್ನು ಕಡಿಮೆ ಮಾಡಬಹುದಾಗಿದೆ.

ಹವಾಗುಣ ಬದಲಾವಣೆಯಿಂದ ಅತಿವೃಷ್ಟಿ, ಪ್ರವಾಹ, ಬರ ಮತ್ತು ಚಂಡಮಾರುತಗಳಂತಹ ಪ್ರಕೃತಿ ವಿಕೋಪಗಳು ಹೆಚ್ಚಾಗುತ್ತಿವೆ. ಇದರ ನೇರ ಪರಿಣಾಮ ರೈತರ ಮೇಲಾಗುತ್ತಿದೆ. ಶ್ರಮಕ್ಕೆ ತಕ್ಕ ಬೆಳೆ ಮತ್ತು ಬೆಳೆಗೆ ತಕ್ಕ ಬೆಲೆ ಎರಡೂ ಇಲ್ಲದೆ ಕಂಗಾಲಾಗಿರುವ ರೈತರಿಗೆ ಹವಾಮಾನ, ಮಳೆ, ಜಲ, ಕೀಟಬಾಧೆ, ಇತ್ಯಾದಿ ಮಾಹಿತಿಯನ್ನು ಹೋಬಳಿ ಮಟ್ಟದಲ್ಲಿ ನಿಖರವಾಗಿ ನೀಡಲು ಫ್ರಾಂಟಿಯರ್ ನೆರವಾಗುತ್ತದೆ. ಪ್ರಕೃತಿವಿಕೋಪಗಳ ಸಂಭವ ಕುರಿತು ಮುನ್ನೆಚ್ಚರಿಕೆಯನ್ನು ಸಾಕಷ್ಟು ಮುಂಚಿತವಾಗಿ ಹಾಗೂ ಹೆಚ್ಚು ನಿಖರವಾಗಿ ನೀಡಲು ಫ್ರಾಂಟಿಯರ್ ಬಳಸಬಹುದಾಗಿದೆ.



ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗಳಿಗೆ ಹೊಸ ಚಿಕಿತ್ಸೆ ಮತ್ತು ಔಷಧಗಳ ಅಭಿವೃದ್ಧಿಯಲ್ಲಿ ಫ್ರಾಂಟಿಯರ್ ನೆರವಾಗಲಿದೆ. ಈ ಬಳಕೆಯಲ್ಲಿರುವ ಕೆಲವು ಔಷಧಗಳಿಗೆ ನಿರೋಧಕಶಕ್ತಿ ಬೆಳೆಸಿಕೊಂಡಿರುವ ಸೂಪರ್ ಬಗ್‌ಗಳಿಂದ ಉಂಟಾಗುವ ಆರೋಗ್ಯಸಮಸ್ಯೆಗಳು, ಕೋಟ್ಯಂತರ ಜನರ ಸಾವು ನೋವಿಗೆ ಕಾರಣವಾದ ಕೋವಿಡ್-19ರಂತಹ ಸಾಂಕ್ರಾಮಿಕಗಳು – ಹೀಗೆ ವಿವಿಧ ರೀತಿಯ ಆರೋಗ್ಯಸಮಸ್ಯೆಗೆ ಕಡಿಮೆ ಸಮಯದಲ್ಲಿ, ಹೆಚ್ಚು ಪರಿಣಾಮಕಾರಿಯಾದ ಚಿಕಿತ್ಸೆ ಮತ್ತು ಔಷಧಗಳನ್ನು ಅಭಿವೃದ್ಧಿಪಡಿಸಲು ಫ್ರಾಂಟಿಯರನ್ನು ಬಳಸಬಹುದಾಗಿದೆ. ಪರಿಸರ ಮಾಲಿನ್ಯದ ಅಗಾಧ ಸಮಸ್ಯೆ, ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ತ್ಯಾಜ್ಯ ನಿರ್ವಹಣೆ ಸಮಸ್ಯೆ – ಹೀಗೆ ಹಲವು ಸಮಸ್ಯೆಗಳನ್ನು ಕುರಿತು ಆಳವಾದ ಅಧ್ಯಯನ ಹಾಗೂ ಸಂಶೋಧನೆ ಮಾಡಲು ಫ್ರಾಂಟಿಯರನ್ನು ಬಳಸಬಹುದಾಗಿದೆ.

ಹೊಸ ಉತ್ಪನ್ನಗಳ ಅಭಿವೃದ್ಧಿ, ಬಾಹ್ಯಾಕಾಶ ಸಂಶೋಧನೆ, ಹೊಸ ಆವಿಷ್ಕಾರಗಳ ಅಭಿವೃದ್ಧಿ – ಹೀಗೆ ಅನೇಕ ಕ್ಷೇತ್ರಗಳಲ್ಲಿ ಫ್ರಾಂಟಿಯರನ್ನು ಬಳಸಲು ಸಾಧ್ಯವಿದೆ.

ಭಾರತಕ್ಕೆ ವಿಜ್ಞಾನ ಮತ್ತು ಸಂಶೋಧನೆಗೆ ಅಗತ್ಯವಾದ ಸೂಪರ್ ಕಂಪ್ಯೂಟರ್ ನೀಡಲು ಕೆಲವು ದೇಶಗಳು ನಿರಾಕರಿಸಿದಾಗ, 1980ರಲ್ಲಿ ಭಾರತದಲ್ಲಿ ಸೂಪರ್ ಕಂಪ್ಯೂಟರ್ ಅಭಿವೃದ್ಧಿ ಮಾಡುವ ಯೋಜನೆಯನ್ನು ಭಾರತ ಸರ್ಕಾರ ಪ್ರಾರಂಭಿಸಿತು. ಆದರೆ 2015ರಲ್ಲಿ ಭಾರತ ಸರ್ಕಾರವು ರಾಷ್ಟ್ರೀಯ ಸೂಪರ್ ಕಂಪ್ಯೂಟಿಂಗ್ ಮಿಷನ್ ಪ್ರಾರಂಭಿಸಿತು. ಏಳು ವರ್ಷಗಳಲ್ಲಿ 4500 ಕೋಟಿ ರೂಪಾಯಿ ವೆಚ್ಚದಲ್ಲಿ ದೇಶದಾದ್ಯಂತ, ಭಾರತದಲ್ಲೇ ಅಭಿವೃದ್ಧಿ ಮಾಡಲಾದ ಒಟ್ಟು 73 ಸೂಪರ್ ಕಂಪ್ಯೂಟರ್‌ಗಳನ್ನು ಸ್ಥಾಪಿಸುವುದು ಈ ಯೋಜನೆಯ ಉದ್ದೇಶವಾಗಿತ್ತು. ಈ ಯೋಜನೆಯಡಿಯಲ್ಲಿ ಬೆಂಗಳೂರಿನ ಐಐಎಸ್ಸಿಯಲ್ಲಿ ಭಾರತದ ಅತ್ಯಂತ ಸಮರ್ಥ ಸೂಪರ್ ಕಂಪ್ಯೂಟರ್ ‘ಪರಮ್ ಪ್ರವೇಗಾ’ವನ್ನು ಈ ವರ್ಷ ಸ್ಥಾಪಿಸಲಾಗಿದೆ. ಈ ಮೊದಲು 2015ರಲ್ಲಿ ಆಗ ಭಾರತದಲ್ಲಿ ಅತ್ಯಂತ ಸಮರ್ಥ ಸೂಪರ್ ಕಂಪ್ಯೂಟರ್ ಆಗಿದ್ದ ‘ಸಹಸ್ರ ಟಿ’ ಹೆಸರಿನ ಸೂಪರ್ ಕಂಪ್ಯೂಟರ್ ಅನ್ನು ಬೆಂಗಳೂರಿನ ಐಐಎಸ್ಸಿಯಲ್ಲಿ ಸ್ಥಾಪಿಸಲಾಗಿತ್ತು. ಐಐಎಸ್ಸಿ ಸೇರಿದಂತೆ ಭಾರತದ ವಿವಿಧ ಸಂಶೋಧನಾ ಸಂಸ್ಥೆಗಳಲ್ಲಿ ಸ್ಥಾಪಿಸಲಾಗಿರುವ ಸೂಪರ್ ಕಂಪ್ಯೂಟರ್‌ಗಳನ್ನು ಆರೋಗ್ಯ, ಪರಿಸರ, ಹವಾಮಾನ, ಕೃಷಿ ಮೊದಲಾದ ಕ್ಷೇತ್ರಗಳಲ್ಲಿ ಅಧ್ಯಯನ ಮತ್ತು ಸಂಶೋಧನೆಗಾಗಿ ಬಳಸಲಾಗುತ್ತಿದೆ.

ಮುಂಬರುವ ದಿನಗಳಲ್ಲಿ ಜಾಗತಿಕ ಮಟ್ಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾರತದಲ್ಲಿ ಅಭಿವೃದ್ಧಿಯಾದ ಸೂಪರ್ ಕಂಪ್ಯೂಟರ್‌ಗಳು ಸ್ಥಾನ ಪಡೆಯುತ್ತವೆ ಎಂದು ನಿರೀಕ್ಷಿಸೋಣ. ❖

ಕಾರ್ಡ್ ಡೇಟಾ ರಕ್ಷಣೆಗೆ ಟೋಕನ್ ವ್ಯವಸ್ಥೆ



ಕೃಷ್ಣ ಭಟ್

ಇ-ಕಾಮರ್ಸ್ ಬೆಳೆಯುತ್ತಿದ್ದಂತೆಯೇ ಅದಕ್ಕೆ ಸಂಬಂಧಿಸಿದ ಹಲವು ಭದ್ರತಾ ಸಮಸ್ಯೆಗಳೂ ತಲೆದೋರಿದವು. ಅದರಲ್ಲಿ ಎಲ್ಲಕ್ಕಿಂತ ಮುಖ್ಯವಾದದ್ದು ಕಾರ್ಡ್ ಡೇಟಾ ಕಳ್ಳತನ. ಇ-ಕಾಮರ್ಸ್ ಸೈಟ್‌ಗಳು ತಮ್ಮ ಗ್ರಾಹಕರಿಗೆ ಅನುಕೂಲವಾಗಲಿ ಎಂಬ ಉದ್ದೇಶಕ್ಕೆ ಮೊದಲ ಬಾರಿಗೆ ಖರೀದಿ ಮಾಡುವಾಗ ತಮ್ಮ ವೆಬ್‌ಸೈಟ್‌ನಲ್ಲಿ ನಮೂದಿಸಿದ ಗ್ರಾಹಕರ ಕಾರ್ಡ್ ವಿವರಗಳನ್ನು ಉಳಿಸಿಕೊಳ್ಳುವ ವಿಧಾನವನ್ನು ಅನುಸರಿಸಿದವು. ಇದರಿಂದ ಪ್ರತಿ ಬಾರಿ ಖರೀದಿ ಮಾಡುವಾಗಲೂ ಕಾರ್ಡ್‌ನ ಅಷ್ಟೂ ಸಂಖ್ಯೆಯನ್ನು ನಮೂದಿಸುವ ಕಿರಿಕಿರಿ ಗ್ರಾಹಕರಿಗೆ ತಪ್ಪಿತಾದರೂ, ಕಾರ್ಡ್‌ನ ಸಂಪೂರ್ಣ ಸಂಖ್ಯೆ ಯಾವುದೋ ದೇಶದಲ್ಲಿ ಕುಳಿತಿರುವ ಇ-ಕಾಮರ್ಸ್ ವೆಬ್‌ಸೈಟ್ ಕೈಗೆ ಸಿಗುವ ಅಪಾಯವೂ ಎದುರಾಯ್ತು.

ಹೀಗೆ ಕಾರ್ಡ್ ಸಂಖ್ಯೆ ಹಾಗೂ ಎಕ್ಸ್‌ಪೈರಿ ದಿನಾಂಕವನ್ನು ಉಳಿಸಿಕೊಳ್ಳುವುದರಿಂದ ಸೃಷ್ಟಿಯಾದ ಮೊದಲ ಸಮಸ್ಯೆಯೆಂದರೆ, ತದ್ರೂಪಿ ಕಾರ್ಡ್ ಸೃಷ್ಟಿ ಮಾಡಿಕೊಂಡು, ಬಳಕೆ ಮಾಡುವುದು. ಇಂಥ ಹಲವು ಪ್ರಕರಣಗಳು ದೇಶದ ಹಲವು ಕಡೆ ಬೆಳಕಿಗೆ ಬಂದಿವೆ.

ಇಂಥ ಸಮಸ್ಯೆಯನ್ನು ನಿಯಂತ್ರಿಸುವುದಕ್ಕೆಂದೇ ಆರ್‌ಬಿಐ ಹೊಸ ವ್ಯವಸ್ಥೆಯೊಂದನ್ನು ಪರಿಚಯಿಸಿದೆ. ಅದೇ ಟೋಕನೈಸೇಶನ್. ಕಾರ್ಡ್ ವಿವರಗಳನ್ನು ಟೋಕನ್ ಆಗಿ ಬದಲಾಯಿಸುವುದು! ಜುಲೈ 1ರಿಂದ ಈ ಹೊಸ ನಿಯಮ ಜಾರಿಗೆ ಬರುವುದಾಗಿ ಆರ್‌ಬಿಐ ಘೋಷಿಸಿತ್ತಾದರೂ, ಮೂಲಸೌಕರ್ಯವನ್ನು ಕಲ್ಪಿಸಿಕೊಳ್ಳುವುದಕ್ಕೆ ಇನ್ನಷ್ಟು ಅವಕಾಶ ಮಾಡಿಕೊಡುವ ದೃಷ್ಟಿಯಿಂದ ಸೆಪ್ಟೆಂಬರ್‌ವರೆಗೆ ಈ ನೀತಿಯನ್ನು ಆರ್‌ಬಿಐ ಮುಂದೂಡಿದೆ.

ಏನಿದು ಟೋಕನ್?

ಕಾರ್ಡ್ ವಿವರವನ್ನು ‘ಟೋಕನ್’ ಆಗಿ ಪರಿವರ್ತಿಸುವುದೇ ಈ ನಿಯಮದ ಮೂಲ ಉದ್ದೇಶ. ಗ್ರಾಹಕನೊಬ್ಬನ ಬಳಿ ಒಂದು ಕ್ರೆಡಿಟ್ ಕಾರ್ಡ್ ಇದೆ ಎಂದುಕೊಳ್ಳೋಣ. ಅದನ್ನು ಆತ ಒಂದು ಶಾಪಿಂಗ್ ಸೈಟ್‌ನಲ್ಲಿ ಹಾಕಿ ಏನನ್ನೋ ಆರ್ಡರ್ ಮಾಡುತ್ತಾನೆ. ಆಗ ಆ ಕಾರ್ಡ್ ವಿವರವನ್ನು ‘ಟೋಕನ್ ಮಾಡಬೇಕೆ’ ಎಂದು ಆ ಶಾಪಿಂಗ್ ಸೈಟ್ ಕೇಳುತ್ತದೆ. ಒಂದು ವೇಳೆ ಅದಕ್ಕೆ ಒಪ್ಪಿಗೆ ಎಂದರೆ ಆ ಸೈಟ್‌ನಲ್ಲಿ ಆ ಕಾರ್ಡ್ ವಿವರ ಟೋಕನ್ ಆಗಿ ಪರಿವರ್ತನೆಯಾಗಿರುತ್ತದೆ; ಕಾರ್ಡ್ ವಿವರ ಅಲ್ಲಿರುವುದಿಲ್ಲ. ಆದರೆ, ಅದಕ್ಕೊಂದು ಟೋಕನ್ ಕ್ರಿಯೇಟ್ ಆಗುತ್ತದೆ. ಮತ್ತೊಂದು ಬಾರಿ ಅದೇ ಸೈಟ್‌ನಲ್ಲಿ ಶಾಪಿಂಗ್ ಮಾಡುವಾಗ ಆ ಟೋಕನ್ ಬಳಸಿ ಶಾಪಿಂಗ್ ಮಾಡಬಹುದು. ಪ್ರತಿ ಇ-ಕಾಮರ್ಸ್ ಸೈಟ್‌ನಲ್ಲೂ ಹೀಗೆ ನಮ್ಮ ಕಾರ್ಡ್‌ಗಳನ್ನು ಟೋಕನ್ ಮಾಡಿಕೊಳ್ಳಬೇಕು. ಈಗಾಗಲೇ ನಾವು ಸೇವ್ ಮಾಡಿದ್ದ ಕಾರ್ಡ್ ವಿವರಗಳು ಸೆಪ್ಟೆಂಬರ್ 30ರ ನಂತರ (ಮೊದಲಿನ ನಿಯಮದ ಪ್ರಕಾರ ಜುಲೈ 1 ಆಗಿತ್ತು) ಅಳಿಸಿಹೋಗುತ್ತವೆ. ಈ ಟೋಕನ್‌ಗೂ ನಮ್ಮ ಕಾರ್ಡ್‌ಗೂ ಲಿಂಕ್ ಬ್ಯಾಂಕ್‌ನ ಸರ್ವರ್‌ಗಳಲ್ಲಿ ಆಗುತ್ತದೆ. ಒಂದು ಇ-ಕಾಮರ್ಸ್‌ಗೆ ಒಂದು ಕಾರ್ಡ್‌ಗೆ ಒಂದು ಟೋಕನ್ ಇರುತ್ತದೆ. ಅದೇ ಕಾರ್ಡ್ ಅನ್ನು ಬೇರೆ ಇ-ಕಾಮರ್ಸ್ ಸೈಟ್‌ನಲ್ಲಿ ಬಳಸಬೇಕು ಎಂದಾದರೆ ಬೇರೆ ಟೋಕನ್ ಸೃಷ್ಟಿಯಾಗುತ್ತದೆ. ಹೀಗಾಗಿ, ಕಾರ್ಡ್ ವಿವರ ಯಾವುದೇ ರೀತಿಯಲ್ಲೂ ಇ-ಕಾಮರ್ಸ್ ಸೈಟ್ ಬಳಿ ಇರುವುದಿಲ್ಲ. ಅಷ್ಟೇ ಅಲ್ಲ, ಟೋಕನ್‌ಗೂ ಕಾರ್ಡ್‌ಗೂ ಲಿಂಕ್ ಕೂಡ ಬ್ಯಾಂಕ್‌ನ ಸರ್ವರ್‌ನಲ್ಲೇ ಆಗುತ್ತದೆಯಾದ್ದರಿಂದ, ಗ್ರಾಹಕರು ಸಂಪೂರ್ಣ ಸುರಕ್ಷಿತ.

ಗ್ರಾಹಕರಿಗೆ ಏನು ಲಾಭ?

ಮೇಲ್ನೋಟಕ್ಕೆ ಇದರಿಂದ ಗ್ರಾಹಕರಿಗೆ ಯಾವ ಬದಲಾವಣೆಯೂ ಕಾಣುವುದಿಲ್ಲ. ಏಕೆಂದರೆ, ಈಗಾಗಲೇ ಕಾಣುತ್ತಿದ್ದ ಹಾಗೆ ನಮ್ಮ ಕಾರ್ಡ್‌ನ ಕೊನೆಯ ನಾಲ್ಕು ಅಂಕಿಗಳೇ ಇ-ಕಾಮರ್ಸ್ ವೆಬ್‌ಸೈಟ್‌ನ ಪೇಮೆಂಟ್ ಪೇಜ್‌ನಲ್ಲಿ ಕಾಣಿಸುತ್ತಿರುತ್ತವೆ. ಆದರೆ, ಅದರ ಹಿಂದಿನ ತಂತ್ರಜ್ಞಾನದಲ್ಲಿ ಬದಲಾವಣೆಯಾಗಿರುತ್ತದೆ. ಗ್ರಾಹಕರ ಡೆಬಿಟ್, ಕ್ರೆಡಿಟ್ ಕಾರ್ಡ್ ಡೇಟಾ ಕಳ್ಳತನವಾಗುವ ಸಾಧ್ಯತೆ ಕಡಿಮೆಯಾಗುತ್ತದೆ. ಈ ಟೋಕನ್‌ಗಳನ್ನು ಅಳಿಸಿಹಾಕುವ ವ್ಯವಸ್ಥೆಯನ್ನು ಕಾರ್ಡ್ ವಿತರಿಸಿದ ಬ್ಯಾಂಕ್‌ಗಳು ಗ್ರಾಹಕರಿಗೆ ಒದಗಿಸುತ್ತವೆ. ಅದರಿಂದ ಇ-ಕಾಮರ್ಸ್ ಸೈಟ್‌ನ ಹೊರಗೂ ನಾವು ಈ ಡೇಟಾ ಬಳಕೆಯನ್ನು ನಿಯಂತ್ರಿಸಬಹುದು. ಅದೆಲ್ಲಕ್ಕಿಂತ ಮುಖ್ಯವಾಗಿ, ಸುರಕ್ಷಿತವಲ್ಲದ ಇ-ಕಾಮರ್ಸ್ ಸೈಟ್‌ನಲ್ಲಿ ಶಾಪಿಂಗ್ ಮಾಡಿದಾಗ ಕಾರ್ಡ್ ವಿವರಗಳು ದುರ್ಬಳಕೆಯಾಗುವ ಅಪಾಯ ತಪ್ಪುತ್ತದೆ. ಜನಪ್ರಿಯ ಸೈಟ್‌ನಲ್ಲೇ ಆದರೂ, ಹ್ಯಾಕರ್‌ಗಳು ಮುಂದೊಂದು ದಿನ ಕಾರ್ಡ್ ವಿವರಗಳನ್ನು ಕದ್ದು ಅವನ್ನು ದುರ್ಬಳಕೆ ಮಾಡಿಕೊಳ್ಳುವ ಅಪಾಯವೂ ಇದರಲ್ಲಿ ತುಂಬಾ ಕಡಿಮೆ.

ಇದು ಗ್ರಾಹಕರ ಸುರಕ್ಷತೆ ದೃಷ್ಟಿಯಿಂದಲೇ ಮಾಡಿದ ಕ್ರಮವಾದ್ದರಿಂದ, ನಮ್ಮ ಕಾರ್ಡ್‌ಗಳನ್ನು ಆದಷ್ಟು ಬೇಗ ಇ-ಕಾಮರ್ಸ್ ಸೈಟ್‌ಗಳಲ್ಲಿ ಅಳಿಸಿಕೊಂಡು ಅದನ್ನು ಟೋಕನ್ ಆಗಿ ಪರಿವರ್ತಿಸಿಕೊಳ್ಳುವುದು ಅತ್ಯಂತ ಉತ್ತಮ ನಿರ್ಧಾರ.

ಕಾರ್ಡ್ ಸ್ವೈಪ್ ಮಾಡುವುದಕ್ಕೆ ಅಡ್ಡಿ ಇಲ್ಲ

ಈ ವ್ಯವಸ್ಥೆ ಪಿಒಎಸ್‌ಗಳಿಗೆ ಅನ್ವಯಿಸುವುದಿಲ್ಲ. ಅಂದರೆ, ಅಂಗಡಿಗಳಲ್ಲಿ ಖರೀದಿ ಮಾಡುವಾಗ ನಾವು ಕಾರ್ಡ್ ಸ್ವೈಪ್ ಮಾಡುವುದಕ್ಕೆ ಇದು ಅನ್ವಯಿಸುವುದಿಲ್ಲ. ಅಲ್ಲಿ ನಮ್ಮ ಕಾರ್ಡ್ ವಿವರಗಳು ಸಂಗ್ರಹವಾಗದೇ ಇರುವುದರಿಂದ ಈ ಸಮಸ್ಯೆ ಇಲ್ಲ.

ಅಷ್ಟೇ ಅಲ್ಲ, ಅಂತರರಾಷ್ಟ್ರೀಯ ವೆಬ್‌ಸೈಟ್‌ಗಳಲ್ಲಿ ವಹಿವಾಟು ಮಾಡುವುದಕ್ಕೂ ಈ ಟೋಕನೈಸೇಶನ್ ಅನ್ವಯಿಸುವುದಿಲ್ಲ. ಈ ಟೋಕನೈಸೇಶನ್ ಎಂಬುದು ಆರ್‌ಬಿಐ ಮಾಡಿದ ನಿಯಮವಾದ್ದರಿಂದ, ವಿದೇಶದ ವೆಬ್‌ಸೈಟ್‌ಗಳಿಗೆ ಇದು ಅನ್ವಯಿಸುವುದಿಲ್ಲ. ಹೀಗಾಗಿ, ಅಂತಹ ವೆಬ್‌ಸೈಟ್‌ಗಳಲ್ಲಿ ವಹಿವಾಟು ಮಾಡುವಾಗ ಕಾರ್ಡ್ ವಿವರಗಳನ್ನು ಸೇವ್ ಮಾಡದೇ, ಪ್ರತಿ ಬಾರಿ ವಹಿವಾಟು ಮಾಡುವಾಗಲೂ ಕಾರ್ಡ್ ವಿವರಗಳನ್ನು ನಮೂದಿಸುವುದೇ ಅತ್ಯುತ್ತಮ ವಿಧಾನ.

ಕಾರ್ಡ್ ಟೋಕನ್ ಕಡ್ಡಾಯವಲ್ಲ

ಯಾವುದೇ ಸೌಲಭ್ಯವನ್ನಾದರೂ ಕಡ್ಡಾಯವನ್ನಾಗಿಸಿದರೆ ನಾವು ಹುಬ್ಬೇರಿಸುವುದು ಸಹಜ! ಇಲ್ಲೂ ಹಾಗೆಯೇ. ಈ ಕಾರ್ಡ್ ಟೋಕನ್ ಮಾಡಿಕೊಳ್ಳುವುದು ಕಡ್ಡಾಯವಲ್ಲ. ಇದು ನಮ್ಮ ಆಯ್ಕೆ. ಆದರೆ, ನಮ್ಮ ಕಾರ್ಡ್ ವಿವರಗಳನ್ನು ಇ-ಕಾಮರ್ಸ್ ವೆಬ್‌ಸೈಟ್‌ಗಳು ಸೇವ್ ಮಾಡಿಟ್ಟುಕೊಳ್ಳುವ ಹಾಗಿಲ್ಲ. ಒಂದೋ ಟೋಕನ್ ಮಾಡಬೇಕು. ಇಲ್ಲವಾದರೆ, ಕಾರ್ಡ್ ವಿವರ ಉಳಿಸಬಾರದು. ಹೀಗಾಗಿ, ಗ್ರಾಹಕರು ಮತ್ತೊಮ್ಮೆ ಆ ವೆಬ್‌ಸೈಟ್‌ನಲ್ಲಿ ವಹಿವಾಟು ಮಾಡಬೇಕು ಎಂದಾದರೆ ಟೋಕನ್ ಮಾಡಿಕೊಳ್ಳುವುದೇ ಉತ್ತಮ ಆಯ್ಕೆಯಾಗಿರುತ್ತದೆ. ❖



❦ ಸುಭಾಷಿತ ❦

ತಾಳ್ಮೆ ಎಂಬುದು ಒಂದು ಸದ್ಗುಣ. ಜೊತೆಗೆ, ಅದೊಂದು ಕಠಿಣವಾದ ಪಾಠ. - ಎಲಾನ್ ಮಸ್ಕ್

ಸುಗಮ ಸಂಚಾರಕ್ಕೆ ಸಂಚಕಾರ ಪೊಲೀಸರ ಕಿರಿಕಿರಿಗೆ ಬೀಳಲಿ ಕಡಿವಾಣ

‘ದಾಖಲೆಗಳ ಪರಿಶೀಲನೆ ನೆಪದಲ್ಲಿ ಎಲ್ಲೆಂದರಲ್ಲಿ ವಾಹನ ತಡೆಯಬಾರದು’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ-ಐಜಿಪಿ) ಪ್ರವೀಣ್ ಸೂದ್ ಅವರು ಪೊಲೀಸರಿಗೆ ನೀಡಿರುವ ಸೂಚನೆ ಕಟ್ಟುನಿಟ್ಟಾಗಿ ಪಾಲನೆಯಾಗಬೇಕಾದ ಅಗತ್ಯವಿದೆ. ರಾಜಧಾನಿ ಬೆಂಗಳೂರು ತೀವ್ರ ಸಂಚಾರ ದಟ್ಟಣೆ ಸಮಸ್ಯೆ ಎದುರಿಸುತ್ತಿದೆ. ಇಂಥ ಸಂದರ್ಭದಲ್ಲಿ ಪೊಲೀಸರು ಮುಖ್ಯರಸ್ತೆಗಳಲ್ಲಿ ನಿಂತು ವಾಹನಗಳನ್ನು ಅಡ್ಡಗಟ್ಟುವುದು ಸಮಸ್ಯೆಯನ್ನು ಮತ್ತಷ್ಟು ಹೆಚ್ಚಿಸುತ್ತಿದೆ. ಸುಗಮ ಸಂಚಾರಕ್ಕೆ ಕಿರಿಕಿರಿ ಉಂಟು ಮಾಡುತ್ತಿದೆ. ಎಲ್ಲೆಂದರಲ್ಲಿ ವಾಹನ ಅಡ್ಡಗಟ್ಟುವ ಪೊಲೀಸರ ವರ್ತನೆಯನ್ನು ಪ್ರಶ್ನಿಸಿ ಸಾರ್ವಜನಿಕರೊಬ್ಬರು ಟ್ವೀಟ್ ಮಾಡಿದ್ದರು. ಟ್ವೀಟ್‌ಗೆ ಸ್ಪಂದಿಸಿರುವ ಪ್ರವೀಣ್ ಸೂದ್, ‘ಕಣ್ಣಿಗೆ ಕಾಣುವಂತೆ ನಿಯಮ ಉಲ್ಲಂಘನೆಯಾದರೆ ಹಾಗೂ ಮದ್ಯಪಾನ ಮಾಡಿ ವಾಹನ ಚಲಾಯಿಸಿದ್ದಾರೆಯೇ ಎಂಬುದರ ತಪಾಸಣೆಗೆ ಅಗತ್ಯವಿದ್ದರೆ ಮಾತ್ರ ವಾಹನ ತಡೆದು ನಿಲ್ಲಿಸಬೇಕು. ದಾಖಲೆ ಕೇಳುವ ನೆಪದಲ್ಲಿ ವಾಹನ ಅಡ್ಡಗಟ್ಟಬಾರದು’ ಎಂಬುದಾಗಿ ಪೊಲೀಸರಿಗೆ ಸೂಚನೆ ನೀಡುವುದಾಗಿ ತಿಳಿಸಿದ್ದಾರೆ. ಡಿಜಿ-ಐಜಿಪಿ ಅವರಿಂದ ಸೂಚನೆ ಹೊರಬಿದ್ದ ಸಂದರ್ಭದಲ್ಲೇ, ದಾಖಲೆಗಳ ಪರಿಶೀಲನೆ ನೆಪದಲ್ಲಿ ಕೇರಳದ ಕಾರೊಂದನ್ನು ಅಡ್ಡಗಟ್ಟಿ ಅಕ್ರಮವಾಗಿ ಹಣ ವಸೂಲಿ ಮಾಡಿದ ಆರೋಪದಡಿ ಎಎಸ್ಐ ಮತ್ತು ಹೆಡ್ ಕಾನ್‌ಸ್ಟೆಬಲ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ. ಎಲ್ಲೆಂದರಲ್ಲಿ ವಾಹನ ಅಡ್ಡಗಟ್ಟುವ ಸಂಚಾರ ಪೊಲೀಸರು, ವಾಹನಗಳ ಮಾಲೀಕರು ಹಾಗೂ ಚಾಲಕರಿಂದ ಅಕ್ರಮವಾಗಿ ಹಣ ವಸೂಲಿ ಮಾಡುವ ಬಗ್ಗೆ ಸಾರ್ವಜನಿಕರು ಅನೇಕ ಸಲ ದೂರಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲೂ ಪುರಾವೆಸಮೇತ ವಿಡಿಯೊಗಳನ್ನು ಹರಿಯಬಿಟ್ಟಿದ್ದಾರೆ. ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕಾದ ಪೊಲೀಸರಲ್ಲಿ ಕೆಲವರು, ರಸ್ತೆಗಳಲ್ಲಿ ವಾಹನಗಳನ್ನು ಯರ್‍ರಾಬಿರ್‍ರಿ ಅಡ್ಡಗಟ್ಟಿ ದಂಡ ವಸೂಲಿ ಮಾಡುವುದನ್ನೇ ಅಭ್ಯಾಸ ಮಾಡಿಕೊಂಡಿದ್ದಾರೆ. ದಂಡ ಸಂಗ್ರಹ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಮಾಡಲು ಸಂಚಾರ ಪೊಲೀಸರಿಗೆ ಬಾಡಿವೋರ್ನ್ ಕ್ಯಾಮೆರಾ ನೀಡಲಾಗಿದೆ. ಆದರೆ, ಇವುಗಳನ್ನು ಆಫ್ ಮಾಡಿ, ಕೆಲ ಸಿಬ್ಬಂದಿ ಹಣ ವಸೂಲಿ ಮಾಡುತ್ತಿದ್ದಾರೆ. ಡಿಜಿ-ಐಜಿಪಿ ಸೂಚನೆ ಅನ್ವಯ ಇನ್ನಾದರೂ ಪೊಲೀಸರ ವರ್ತನೆ ಬದಲಾಗಬೇಕಿದೆ.



ನಾಗರಿಕರು ಹಾಗೂ ಸಂಚಾರ ಪೊಲೀಸರ ನಡುವೆ ಸೌಹಾರ್ದದ ನಡವಳಿಕೆ ಕಾರ್ಯರೂಪಕ್ಕೆ ಬಂದಾಗಷ್ಟೇ ಸುಗಮ ಸಂಚಾರ ಸಾಧ್ಯ

ರಸ್ತೆಗಳಲ್ಲಿ ಗುಂಡಿ ಹಾಗೂ ಉಬ್ಬುಗಳನ್ನು ನಿಭಾಯಿಸಿಕೊಂಡು ವಾಹನ ಚಲಾಯಿಸುವಾಗ ಏಕಾಏಕಿ ಪೊಲೀಸರು ಅಡ್ಡಗಟ್ಟಿದ ವೇಳೆ ಅಪಘಾತಗಳು ಸಂಭವಿಸಿರುವ ಉದಾಹರಣೆಗಳು ಬಹಳಷ್ಟಿವೆ. ಹೆಲ್ಮೆಟ್ ಧರಿಸದೆ ಬೈಕ್ ಓಡಿಸುತ್ತಿದ್ದ ವ್ಯಕ್ತಿಯನ್ನು ಅಡ್ಡಗಟ್ಟಿದ ಸಂದರ್ಭದಲ್ಲಿ ಉಂಟಾದ ಅಪಘಾತದಲ್ಲಿ ಸವಾರ ದುರ್ಮರಣಕ್ಕೀಡಾದ ಘಟನೆ ಕಳೆದ ವರ್ಷ ಮೈಸೂರಿನಲ್ಲಿ ನಡೆದಿತ್ತು. ಮರೆಯಲ್ಲಿ ನಿಂತು ಕಳ್ಳರನ್ನು ಹಿಡಿಯುವಂತೆ, ವಾಹನ ಸವಾರರನ್ನು ರಸ್ತೆಯಲ್ಲಿ ಇದ್ದಕ್ಕಿದ್ದಂತೆ ತಡೆದು ನಿಲ್ಲಿಸುವುದು ಹಾಗೂ ಬೆನ್ನಟ್ಟಿ ಹೋಗುವ ಸಿನಿಮೀಯ ಸಾಹಸಗಳಿಂದ ಸಂಚಾರ ಪೊಲೀಸರು ಹೊರಬರಬೇಕಿದೆ. ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲು ಇರುವಾಗ ಹಾಗೂ ಪೊಲೀಸರ ಬಳಿಯಲ್ಲಿ ಕ್ಯಾಮೆರಾ ಹೊಂದಿರುವ ಫೋನ್‌ಗಳು ಇರುವಾಗ ನಿಯಮಗಳನ್ನು ಉಲ್ಲಂಘಿಸಿದ ವಾಹನ ಸವಾರರನ್ನು ಕಾನೂನು ಪ್ರಕ್ರಿಯೆಗೆ ಒಳಪಡಿಸುವುದು ಸುಲಭವಾಗಿದೆ. ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಂಡರೆ ವಾಹನ ಸವಾರರನ್ನು ಅನಗತ್ಯವಾಗಿ ಬೆನ್ನುಹತ್ತಿ ಹೋಗುವುದು ತಪ್ಪುತ್ತದೆ ಹಾಗೂ ನಿಯಮ ಉಲ್ಲಂಘಿಸಿದವರನ್ನು ಕಾನೂನು ಪ್ರಕ್ರಿಯೆಗೆ ಒಳಪಡಿಸಲು ಸಾಧ್ಯವಿದೆ. ನಿಯಮ ಉಲ್ಲಂಘಿಸಿದ ವಾಹನಗಳ ಮಾಲೀಕರ ಮನೆಗಳಿಗೆ ನೋಟಿಸ್ ಕಳಿಸುವ ವ್ಯವಸ್ಥೆ ಈಗಾಗಲೇ ಜಾರಿಯಲ್ಲಿದೆ. ಆ ವ್ಯವಸ್ಥೆಯನ್ನು ಮತ್ತಷ್ಟು ವ್ಯಾಪಕವಾಗಿ ಜಾರಿಗೊಳಿಸುವುದರಿಂದ ಸಂಚಾರ ಪೊಲೀಸರು ಮತ್ತು ಸಾರ್ವಜನಿಕರ ನಡುವಿನ ತಿಕ್ಕಾಟ ಬಹುಮಟ್ಟಿಗೆ ಕಡಿಮೆಯಾಗುತ್ತದೆ.

ಸಂಚಾರ ನಿಯಮಗಳನ್ನು ಪಾಲಿಸುವುದು ವಾಹನ ಸವಾರರ ಕರ್ತವ್ಯ. ನಿಯಮಗಳನ್ನು ಮೀರಿದಾಗ ಕಾನೂನುಕ್ರಮ ಜರುಗಿಸುವುದೂ ಅಗತ್ಯ. ಆದರೆ, ಸರಿಯಾದ ದಾಖಲೆಗಳನ್ನು ಹೊಂದಿಲ್ಲದವರನ್ನು ಅಥವಾ ನಿಯಮಗಳನ್ನು ಉಲ್ಲಂಘಿಸುವ ವಾಹನ ಸವಾರರನ್ನು ಪೊಲೀಸರು ಅವಮಾನಿಸುವುದಕ್ಕೆ ಅಥವಾ ಅವರಿಂದ ಅಕ್ರಮವಾಗಿ ಹಣ ವಸೂಲಿ ಮಾಡುವುದಕ್ಕೆ ಯಾವ ಸಮರ್ಥನೆಯೂ ಇಲ್ಲ. ನಿಯಮ ಪಾಲನೆ ತಪ್ಪಿದವರೊಂದಿಗೆ ಒರಟು ವರ್ತನೆಯೂ ಸರಿಯಲ್ಲ. ಸಂಚಾರ ನಿಯಮಗಳ ಪಾಲನೆಯ ಹಿನ್ನೆಲೆಯಲ್ಲಿ ಸಾರ್ವಜನಿಕರು ತಮ್ಮ ನಾಗರಿಕಪ್ರಜ್ಞೆ ಪ್ರದರ್ಶಿಸಬೇಕೆಂದು ನಿರೀಕ್ಷಿಸುವಂತೆಯೇ, ಸಂಚಾರ ಪೊಲೀಸರು ಕೂಡ ತಮ್ಮ ಸಾರ್ವಜನಿಕ ನಡವಳಿಕೆಯನ್ನು ಸುಧಾರಿಸಿಕೊಳ್ಳಬೇಕಾಗಿದೆ. ರಾಜ್ಯದಲ್ಲಿ ಅನೇಕ ರಸ್ತೆಗಳ ನಿರ್ವಹಣೆ ಉತ್ತಮ ಸ್ಥಿತಿಯಲ್ಲಿಲ್ಲ. ಬೆಂಗಳೂರಿನಲ್ಲಂತೂ ಗುಂಡಿಯಿಲ್ಲದ ರಸ್ತೆಯೇ ಇಲ್ಲ ಎನ್ನುವ ಪರಿಸ್ಥಿತಿಯಿದೆ. ರಸ್ತೆಯಲ್ಲಿನ ಗುಂಡಿಗಳ ಬಗ್ಗೆ ಹೈಕೋರ್ಟ್ ನಿರಂತರವಾಗಿ ಎಚ್ಚರಿಸುತ್ತಿದ್ದರೂ ಪರಿಸ್ಥಿತಿಯಲ್ಲೇನೂ ಗಮನಾರ್ಹ ಬದಲಾವಣೆ ಕಂಡುಬಂದಿಲ್ಲ. ಪ್ರಮುಖ ರಸ್ತೆಗಳಲ್ಲಿ ವಾಹನಗಳ ನಿಲುಗಡೆಗೆ ಸಾಕಷ್ಟು ಸ್ಥಳಾವಕಾಶವನ್ನು ಕಲ್ಪಿಸಲಾಗಿಲ್ಲ. ಮತ್ತೂ ಕೆಲವೆಡೆ ದುಬಾರಿ ಪಾರ್ಕಿಂಗ್ ಶುಲ್ಕದ ಹೊರೆಯಿದೆ. ತೆರಿಗೆಯನ್ನು ಏರಿಸುವ ವಿಚಾರದಲ್ಲಿ ಸರ್ಕಾರಕ್ಕೆ ಇರುವ ಉತ್ಸಾಹವು ಮೂಲ ಸೌಕರ್ಯ ಕಲ್ಪಿಸುವುದರಲ್ಲಿ ಇಲ್ಲ. ಇಡೀ ವ್ಯವಸ್ಥೆಯು ವಾಹನ ಸವಾರರನ್ನು ಒತ್ತಡಕ್ಕೆ ಗುರಿಮಾಡುವಂತಿದೆ. ಇಂಥ ಪ್ರತಿಕೂಲ ಸಂದರ್ಭದಲ್ಲಿ ವಾಹನಗಳ ಸಂಚಾರಕ್ಕೆ ಮತ್ತೊಂದು ಅಡೆತಡೆಯ ರೂಪದಲ್ಲಿ ಪೊಲೀಸರು ವರ್ತಿಸಬಾರದು. ಪ್ರವೀಣ್ ಸೂದ್ ಅವರು ಬೆಂಗಳೂರು ಪೊಲೀಸ್ ಕಮಿಷನರ್ ಆಗಿದ್ದ ಅವಧಿಯಲ್ಲೂ ಸಾರ್ವಜನಿಕರೊಂದಿಗೆ ಸೌಹಾರ್ದದಿಂದ ವರ್ತಿಸುವಂತೆ ಸಂಚಾರ ಪೊಲೀಸರಿಗೆ ಲಿಖಿತ ಸೂಚನೆ ನೀಡಿದ್ದರು. ಆ ಸೂಚನೆಯ ನಂತರವೂ ಪೊಲೀಸರ ವರ್ತನೆ ಬದಲಾಗಿಲ್ಲ. ವಾಹನಗಳನ್ನು ಅಡ್ಡಗಟ್ಟಿ ನಿಲ್ಲಿಸುವ ಚಾಳಿಗೆ ಕಡಿವಾಣ ಬಿದ್ದಿಲ್ಲ. ಪೊಲೀಸ್ ಮಹಾನಿರ್ದೇಶಕರ ಸೂಚನೆ ಇನ್ನು ಮುಂದಾದರೂ ಕಟ್ಟುನಿಟ್ಟಾಗಿ ಜಾರಿಗೆ ಬರಲಿ. ಹಿರಿಯ ಅಧಿಕಾರಿಗಳು ಆಗಾಗ್ಗೆ ರಸ್ತೆಗಿಳಿದು ಪರಿಶೀಲನೆ ನಡೆಸಲಿ. ನಾಗರಿಕರು ಹಾಗೂ ಸಂಚಾರ ಪೊಲೀಸರ ನಡುವೆ ಸೌಹಾರ್ದದ ನಡವಳಿಕೆ ಕಾರ್ಯರೂಪಕ್ಕೆ ಬಂದಾಗಷ್ಟೇ ಸುಗಮ ಸಂಚಾರ ಸಾಧ್ಯವಾಗುತ್ತದೆ.

ದಿನದ ಟ್ವೀಟ್

ಭಯೋತ್ಪಾದನೆಗೆ ಸಮರ್ಥನೆಯಿಲ್ಲ



ಉದಯಪುರ ವಿಡಿಯೊ ಕ್ರೌರ್ಯದಿಂದ ಕೂಡಿದೆ, ಮನಸ್ಸನ್ನು ಗಾಸಿಗೊಳಿಸುವಂತಿದೆ ಮತ್ತು ಭಯಾನಕವಾಗಿದೆ. ಇದೊಂದು ಭಯೋತ್ಪಾದಕ ಕೃತ್ಯ. ಇಂತಹ ಕ್ರೂರ ಕೃತ್ಯದಲ್ಲಿ ಭಾಗಿಯಾದ ಉಗ್ರರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಯಾವುದೇ ದ್ವೇಷ ಭಾಷಣವು ಭಯೋತ್ಪಾದನಾ ಕೃತ್ಯಕ್ಕೆ ಸಮರ್ಥನೆ ಆಗಲಾರದು.

ರೋಹಿಣಿ ಸಿಂಗ್, ಪತ್ರಕರ್ತೆ

ಕಿಡಿನುಡಿ



ಜುಬೇರ್ ಅವರು ಫ್ಯಾಕ್ಟ್ ಚೆಕ್ ಮಾಡುವವರು. ತಪ್ಪು ಮಾಹಿತಿಗಳನ್ನು ತೊಡೆದುಹಾಕುವುದು ಪ್ರಜಾಪ್ರಭುತ್ವದ ಪ್ರಮುಖ ಭಾಗ. ಅವರು ರಾಜಕಾರಣಿಯಲ್ಲ. ಪ್ರವಚನಕಾರರಲ್ಲ. ಹೀಗಿರುವಾಗ, ವಿರೋಧ ಪಕ್ಷದ ನಾಯಕರಷ್ಟೇ ಅವರ ಬೆಂಬಲಕ್ಕೆ ನಿಲ್ಲುತ್ತಿರುವುದೇಕೆ?

ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

25 ವರ್ಷಗಳ ಹಿಂದೆ

ಭಾನುವಾರ, 29-6-1997

• **ಲಾಲೂ ಬೆಂಬಲಿಗರಿಂದ ಚುನಾವಣೆ ಬಹಿಷ್ಕಾರ: ದಳ ಒಡಕು ಸನ್ನಿಹಿತ**

ನವದೆಹಲಿ, ಜೂನ್ 28 – ಜನತಾದಳದ ಸಾಂಸ್ಥಿಕ ಚುನಾವಣೆಗಳನ್ನು ಬಹಿಷ್ಕರಿಸಿ, ಹೊಸ ಪಕ್ಷ ಸ್ಥಾಪನೆ ಮಾಡಲು ಬಿಹಾರದ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರ ಬೆಂಬಲಿಗರು ಇಂದು ನಿರ್ಧರಿಸಿದ್ದರಿಂದ ಜನತಾ ದಳದ ವಿಭಜನೆ ಸನ್ನಿಹಿತ ಎನಿಸಿದೆ.

ಇಂದು ನಡೆದ ನಾಟಕೀಯ ಬೆಳವಣಿಗೆಯೊಂದರಲ್ಲಿ, ದಳ ಚುನಾವಣೆಯ ಉಸ್ತುವಾರಿಗಾಗಿ ನೇಮಕಗೊಂಡಿದ್ದ ಯಾದವ್ ಬೆಂಬಲಿಗ, ಕೇಂದ್ರ ಸಚಿವ ರಘುವಂಶ ಪ್ರಸಾದ್ ಸಿಂಗ್ ಅವರನ್ನು ಸುಪ್ರೀಂ ಕೋರ್ಟ್ ಇಂದು ವಜಾ ಮಾಡಿ, ಜುಲೈ ಮೂರರ ಒಳಗೆ ಪಕ್ಷದ ಸಾಂಸ್ಥಿಕ ಚುನಾವಣೆಗಳನ್ನು ಪೂರ್ಣಗೊಳಿಸುವಂತೆ ಪ್ರೊ. ಮಧುದಂಡವತೆ ಅವರಿಗೆ ಆದೇಶಿಸಿದೆ.

50 ವರ್ಷಗಳ ಹಿಂದೆ

ಗುರುವಾರ, 29-6-1972

• **‘ಕನ್ನಡದ ಕೆಲಸಕ್ಕೆ ಹಣ ವಿನಿಯೋಗಕ್ಕೆ ಹಿಂದೆ ಬೀಳುವುದಿಲ್ಲ’**

ಬೆಂಗಳೂರು, ಜೂನ್ 28– ‘ಕನ್ನಡದ ಕೆಲಸಕ್ಕೆ ದುಡ್ಡು ಯಾವ ರೀತಿಯೂ ಕಡಿಮೆ ಬೀಳುವುದಿಲ್ಲ’ ಎಂದು ಹಣಕಾಸಿನ ಸಚಿವ ಶ್ರೀ ಎಂ.ವೈ. ಘೋರ್ಪಡೆ ಅವರು ಇಂದು ವಿಧಾನಸಭೆಯಲ್ಲಿ ಸ್ಪಷ್ಟವಾಗಿ ಹೇಳಿದರು.

ಆಯವ್ಯಯದ ಮೇಲಿನ ಚರ್ಚೆಗೆ ಉತ್ತರ ನೀಡಿದ ಅವರು, ‘ಕನ್ನಡಕ್ಕೆ 10 ಲಕ್ಷ ರೂ. ಇಟ್ಟಿದ್ದೇವೆ. ಅದನ್ನು ಯಾವ ರೀತಿ ಸದುಪಯೋಗ ಮಾಡಬೇಕು ಎಂದು ಸಲಹೆ ನೀಡುವುದು ನಿಮ್ಮ ಕರ್ತವ್ಯ’ ಎಂದು ಸದಸ್ಯರನ್ನು ಕೋರಿದರು.

‘ಇನ್ನಷ್ಟು ಹಣ ಬೇಕಾದರೆ ಒದಗಿಸಲು ಸಿದ್ಧ’ ಎಂದು ಭರವಸೆ ನೀಡಿದರು.

ಮತ್ತೆ ಚುರುಕಾದಂತಿರುವ ಡಬ್ಲ್ಯುಟಿಒ • ಪ್ರಸ್ತಾವ ಮತ್ತು ಫಲಶ್ರುತಿ

ಜಿನೀವಾದಲ್ಲಿ ಭಾರತಕ್ಕೆ ದಕ್ಕಿದ್ದೇನು?



ವಿಶ್ಲೇಷಣೆ

ವೈ.ಜಿ.ಮುರಳೀಧರನ್

ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) 12ನೇ ‘ಸಚಿವರ ಸಮಾವೇಶ’ ಜಿನೀವಾದಲ್ಲಿ ಈ ತಿಂಗಳ 12ರಿಂದ 15ರವರೆಗೆ ನಡೆಯಿತು. ಎರಡು ವರ್ಷಕ್ಕೊಮ್ಮೆ ನಡೆಯುವ ಈ ಸಮಾವೇಶ ಮಹತ್ವದ್ದಾಗಿದೆ. ಕಾರಣ, ನಿರ್ಧಾರ ಕೈಗೊಳ್ಳುವ ಅಧಿಕಾರ ಇದಕ್ಕೆ ಇದೆ.

ವಿಶ್ವದ 164 ರಾಷ್ಟ್ರಗಳನ್ನು ಒಳಗೊಂಡಿರುವ ವಿಶ್ವ ವ್ಯಾಪಾರ ಸಂಘಟನೆಯ ಸಮಾವೇಶದಲ್ಲಿ ವಿವಿಧ ರಾಷ್ಟ್ರಗಳ ಸಂಬಂಧಿಸಿದ ಖಾತೆಯ ಸಚಿವರು ಭಾಗವಹಿಸುತ್ತಾರೆ. ಇತರ ಅಂತರರಾಷ್ಟ್ರೀಯ ಸಂಸ್ಥೆಗಳಲ್ಲಿ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಆಯಾ ಸಂಸ್ಥೆಯ ಮುಖ್ಯಸ್ಥರಿಗೆ ನೀಡಲಾಗಿರುತ್ತದೆ. ಆದರೆ ಡಬ್ಲ್ಯುಟಿಒದಲ್ಲಿ ರಾಷ್ಟ್ರಗಳ ಸಚಿವರೇ ಭಾಗವಹಿಸಿ ನಿರ್ಧಾರ ಕೈಗೊಳ್ಳುತ್ತಾರೆ. ಆದಕಾರಣ ಡಬ್ಲ್ಯುಟಿಒ ಸಭೆಗಳು ಹೆಚ್ಚು ಮಹತ್ವದ್ದಾಗಿವೆ.

ವಿಶ್ವ ವ್ಯಾಪಾರ ಸಂಘಟನೆಯು ಹೆಸರೇ ಹೇಳುವಂತೆ ವ್ಯಾಪಾರವನ್ನು ಆಧರಿಸಿದ್ದು. ಅಂದಮೇಲೆ ಗಳಿಸುವುದು, ಕಳೆದುಕೊಳ್ಳುವುದು ಇರುತ್ತದೆ. ಭಾರತ ಗಳಿಸಿದ್ದೇನು ಎಂಬುದನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಜಿನೀವಾದಲ್ಲಿ ನಡೆದ ಸಮಾವೇಶದಿಂದ ಭಾರತಕ್ಕೆ ಆಗಬಹುದಾದ ಪ್ರಯೋಜನ ಮತ್ತು ನಷ್ಟದ ಬಗ್ಗೆ ಗಮನಹರಿಸಬೇಕಿದೆ. ಕಳೆದ ಏಳು ವರ್ಷಗಳಲ್ಲಿ, ಮುಖ್ಯವಾಗಿ ಕೋವಿಡ್ ಹಿನ್ನೆಲೆಯಲ್ಲಿ ಡಬ್ಲ್ಯುಟಿಒ ಔಚಿತ್ಯದ ಬಗ್ಗೆ ಅನುಮಾನಗಳು ವ್ಯಕ್ತವಾಗಿದ್ದವು. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಈ ಸಂಘಟನೆಯಿಂದ ಯಾವುದೇ ಪ್ರಯೋಜನ ಅಥವಾ ಸಹಾಯ ಆಗುತ್ತಿಲ್ಲ ಎಂಬ ಕೂಗು ಕೇಳಿಬಂದಿತ್ತು. ಆದರೆ ಇತ್ತೀಚಿನ ಸಭೆಯ ನಂತರ ಡಬ್ಲ್ಯುಟಿಒ ಮತ್ತೆ ಚುರುಕಾಗಿ ಕೆಲಸ ಮಾಡುವ ಸೂಚನೆಗಳು ಕಂಡುಬರುತ್ತಿವೆ.

ಡಬ್ಲ್ಯುಟಿಒ ಮುಂದೆ ಭಾರತ ಮೂರು ಪ್ರಸ್ತಾವಗಳನ್ನು ಇರಿಸಿತ್ತು. ಮೊದಲನೆಯದು, ಕೋವಿಡ್ ಚಿಕಿತ್ಸೆ ಮತ್ತು ಆ ರೀತಿಯ ಸೋಂಕನ್ನು ತಡೆಗಟ್ಟಲು ಅಗತ್ಯವಾದ ಲಸಿಕೆ, ಔಷಧಗಳ ತಯಾರಿಕೆ ಮತ್ತು ವಿತರಣೆ ಕುರಿತಾದುದು. ಎರಡನೆಯದು, ಆಹಾರ ಸುಭದ್ರತೆ ವಿಷಯಕ್ಕೆ ಸಂಬಂಧಿಸಿದ್ದು. ಮೂರನೆಯದು, ಮತ್ಸ್ಯೋದ್ಯಮಕ್ಕೆ ಪೂರಕವಾದ ಕ್ರಮಗಳು. ಈ ಮೂರೂ ವಿಷಯಗಳಲ್ಲಿ ಭಾರತವು ಸಂಪೂರ್ಣ ಪ್ರಯೋಜನ ಪಡೆದಿದೆ ಎಂದು ಹೇಳಲಾಗದಿದ್ದರೂ ಒಂದಿಷ್ಟು ದಕ್ಕಿಸಿಕೊಂಡಿರುವುದನ್ನು ಅಲಕ್ಷಿಸುವಂತಿಲ್ಲ.

ಭಾರತ ಮತ್ತು ದಕ್ಷಿಣ ಆಫ್ರಿಕಾ 2020ರ ಅಕ್ಟೋಬರ್‌ನಲ್ಲಿ ಒಂದು ಪ್ರಸ್ತಾವವನ್ನು ಸಲ್ಲಿಸಿದ್ದವು. ಕೋವಿಡ್ ಲಸಿಕೆಯ ಉತ್ಪಾದನೆ ಮತ್ತು ಹಂಚುವಿಕೆಯಲ್ಲಿ ಆಗಿರುವ ಅಸಮತೋಲನವನ್ನು ಸರಿಪಡಿಸುವ ಅಗತ್ಯದ ಬಗ್ಗೆ ಸೂಚಿಸಿದ್ದವು. ಬೌದ್ಧಿಕ ಆಸ್ತಿ ಹಕ್ಕು ನಿಯಮವನ್ನು ಸಡಿಲಗೊಳಿಸಿದರೆ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಸುಲಭ ಬೆಲೆಯಲ್ಲಿ ಲಸಿಕೆ ಮತ್ತು ಇತರ ಔಷಧಗಳನ್ನು ಬಡಜನರಿಗೆ ಹಂಚಲು ಅನುಕೂಲವಾಗುತ್ತದೆ ಎಂದು ಭಾರತ ಹೇಳಿತ್ತು. ಲಸಿಕೆಯ ಉತ್ಪಾದನೆಗೆ ಉತ್ತೇಜನ, ಔಷಧ ಆಮದು ಮತ್ತು ಸರಬರಾಜು ಮಾಡಲು ಈಗಿರುವ ತೊಡಕುಗಳ ನಿವಾರಣೆ, ಪೇಟೆಂಟ್ ಮತ್ತು ಬೌದ್ಧಿಕ ಆಸ್ತಿ ಹಕ್ಕಿನ ನಿಯಮ ಸಡಿಲಿಕೆಯು ಪ್ರಸ್ತಾವದಲ್ಲಿ ಸೇರಿದ್ದವು. ಇದಕ್ಕೆ 63 ರಾಷ್ಟ್ರಗಳು ಸಮ್ಮತಿ ಸೂಚಿಸಿದ್ದವು ಹಾಗೂ ಮೂರನೇ ಎರಡರಷ್ಟು ಸದಸ್ಯ ರಾಷ್ಟ್ರಗಳು ಬೆಂಬಲ ನೀಡಿದ್ದವು. ಆದರೆ ಸಭೆಯಲ್ಲಿ ಕೈಗೊಂಡಿರುವ ನಿರ್ಧಾರವು ಭಾರತದ ಪ್ರಸ್ತಾವಕ್ಕೆ ಪೂರಕವಾಗಿಲ್ಲ.

ಬೌದ್ಧಿಕ ಆಸ್ತಿ ಹಕ್ಕು ನಿಯಮ ಸಡಿಲಿಕೆಗೆ ಬದಲಾಗಿ ರಾಷ್ಟ್ರಗಳು ತುರ್ತು ಸಂದರ್ಭಗಳಲ್ಲಿ ಇತರ ಕಂಪನಿಗಳಿಗೆ ಕಡ್ಡಾಯ ಪರವಾನಗಿ ನೀಡಬಹುದೆಂಬ ನಿರ್ಧಾರಕ್ಕೆ ಸಭೆ ಬಂದಿದೆ. ಇದರ ಫಲವಾಗಿ, ಲಸಿಕೆ ಉತ್ಪಾದನೆಗೆ ಪೇಟೆಂಟ್ ಹೊಂದಿರುವವರ ಅಪ್ಪಣೆ ಇಲ್ಲದೆ ಇತರ ಕಂಪನಿಗಳು ಲಸಿಕೆ ಉತ್ಪಾದನೆ ಮಾಡಬಹುದು. ಆದರೆ ಈ ನಿಯಮ ಕೋವಿಡ್ ಶುಶ್ರೂಷೆಗೆ ಇರುವ ಔಷಧಗಳಿಗೆ ಅನ್ವಯಿಸುವುದಿಲ್ಲ. ಭಾರತ ಈ ನಿರ್ಧಾರವನ್ನು ಒಪ್ಪಿಕೊಂಡಿರುವುದು ಆಶ್ಚರ್ಯದ ಸಂಗತಿ. ಏಕೆಂದರೆ, 2001ರಲ್ಲಿ ದೋಹಾದಲ್ಲಿ ನಡೆದ ಸಭೆಯಲ್ಲಿ ಕಡ್ಡಾಯ ಪರವಾನಗಿ ನೀಡಬಹುದೆಂದು ಸದಸ್ಯ ರಾಷ್ಟ್ರಗಳು ಅದಾಗಲೇ ಒಪ್ಪಿಗೆ ಸೂಚಿಸಿದ್ದವು. ಅಲ್ಲದೆ ಭಾರತದ ಪೇಟೆಂಟ್ ಅಧಿನಿಯಮದಲ್ಲಿ ಕಡ್ಡಾಯ ಪರವಾನಗಿ ನೀಡುವುದಕ್ಕೆ ಸಂಬಂಧಿಸಿದ ಅಂಶ ಈಗಾಗಲೇ ಸೇರಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆ ವಿಷಯದಲ್ಲಿ ಭಾರತ ಬಹಳಷ್ಟು ನಿರೀಕ್ಷೆಯನ್ನು ಹೊಂದಿತ್ತು. ಡಬ್ಲ್ಯುಟಿಒದಲ್ಲಿ ಕೃಷಿಗೆ ಪ್ರತ್ಯೇಕ ಒಡಂಬಡಿಕೆ ಇದೆ. ಅದರ ಪ್ರಕಾರ, ರಾಷ್ಟ್ರಗಳು ಆಹಾರಧಾನ್ಯಗಳಿಗೆ ನೀಡುವ ಸಬ್ಸಿಡಿಗೆ ಮಿತಿ ನಿಗದಿಪಡಿಸಲಾಗಿದೆ. ಭಾರತದ ಆಹಾರ ಸಬ್ಸಿಡಿ ಈ ಮಿತಿಯನ್ನು ಮೀರಿದೆ ಎಂಬುದು ಕೆಲವು ಸದಸ್ಯ ರಾಷ್ಟ್ರಗಳ ಅಭಿಪ್ರಾಯ. ಭಾರತ ಈಗಾಗಲೇ ಡಬ್ಲ್ಯುಟಿಒದಲ್ಲಿರುವ ‘ಶಾಂತಿ ನಿಯಮ’ದ ಅಡಿಯಲ್ಲಿ ರಕ್ಷಣೆ ಪಡೆದಿದೆ. ಭಾರತವು ವಿಶ್ವ ಆಹಾರ ಯೋಜನೆಗೆ ಕೊಡುಗೆ ನೀಡುವ ರಾಷ್ಟ್ರಗಳಲ್ಲಿ ಒಂದಾಗಿದೆ. ಈ ಯೋಜನೆಯ ಅಡಿಯಲ್ಲಿ ಆಹಾರ ಧಾನ್ಯಗಳ ರಫ್ತಿಗೆ ಭಾರತ ಯಾವುದೇ ತಡೆ ಒಡ್ಡಿಲ್ಲ. ಒಂದು ವೇಳೆ ಷರತ್ತುಗಳನ್ನು ವಿಧಿಸಿದಲ್ಲಿ ಆಹಾರ ಸುರಕ್ಷತೆಗೆ ಧಕ್ಕೆ ಉಂಟಾಗುತ್ತದೆ ಎಂದು ಭಾರತ ತನ್ನ ನಿಲುವನ್ನು ಸ್ಪಷ್ಟಪಡಿಸಿತ್ತು. ಸದಸ್ಯ ರಾಷ್ಟ್ರಗಳು ಕೆಲವು ಷರತ್ತುಗಳಿಗೆ ಒಳಪಟ್ಟು ಭಾರತದ ನಿಲುವಿಗೆ ಒಪ್ಪಿಗೆ ಸೂಚಿಸಿವೆ.



ಮತ್ಸ್ಯೋದ್ಯಮಕ್ಕೆ ನೀಡುವ ಸಬ್ಸಿಡಿ ವಿಚಾರದಲ್ಲಿ ಮೂರು ಅಂಶಗಳು ಚರ್ಚೆಗೆ ಒಳಪಟ್ಟವು. ಕಾನೂನುಬಾಹಿರ- ನಿಯಂತ್ರಣವಿಲ್ಲದ ಮೀನುಗಾರಿಕೆ, ಅಧಿಕ ಮೀನುಗಾರಿಕೆ ಹಾಗೂ ಮತ್ಸ್ಯೋದ್ಯಮದ ಮೂಲಸೌಕರ್ಯ ಅಭಿವೃದ್ಧಿಯಿಂದ ಉಂಟಾಗುವ ದುಷ್ಪರಿಣಾಮಗಳ ಬಗೆಗೆ ಚರ್ಚಿಸಲಾಯಿತು. ಚೀನಾ, ಐರೋಪ್ಯ ಒಕ್ಕೂಟ, ಅಮೆರಿಕ, ದಕ್ಷಿಣ ಕೊರಿಯಾ ಮತ್ತು ಜಪಾನ್ ರಾಷ್ಟ್ರಗಳು ವಿಶ್ವ ಮತ್ಸ್ಯೋದ್ಯಮದ ಒಟ್ಟು ಸಬ್ಸಿಡಿಯಲ್ಲಿ ಶೇಕಡ 60ರಷ್ಟು ಪಾಲು ಹೊಂದಿವೆ. ಈ ದೇಶಗಳು ತಮ್ಮ ಗಡಿ ಭಾಗದಿಂದ ಸಾವಿರಾರು ಮೈಲಿ ದೂರದವರೆಗೆ ಮೀನುಗಾರಿಕೆ ಮಾಡುತ್ತವೆ. ಅದಕ್ಕೆ ತಕ್ಕ ಮೂಲಸೌಕರ್ಯ ಕಲ್ಪಿಸಿಕೊಂಡಿವೆ.

ಅಭಿವೃದ್ಧಿ ಹೊಂದಿರುವ ದೇಶಗಳು ಅಧಿಕ ಮೀನುಗಾರಿಕೆ ಮಾಡುತ್ತಿರುವುದನ್ನು ಕೆಲವು ರಾಷ್ಟ್ರಗಳು ಪ್ರಶ್ನಿಸುತ್ತಿವೆ. ಅಧಿಕ ಮೀನುಗಾರಿಕೆ ಅಂದರೆ, ಹೊಸ ಮೀನುಗಳು ಹುಟ್ಟುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮೀನುಗಾರಿಕೆ ಮಾಡುವುದು. ಇದರಿಂದ ಮೀನುಗಳ ಸಂಖ್ಯೆ ಕಡಿಮೆಯಾಗಿ ಬಡವರು ಹಾಗೂ ಮೀನನ್ನೇ ಆಹಾರವಾಗಿಸಿಕೊಂಡಿರುವ ಸಮುದಾಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ.

ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಮೀನುಗಾರಿಕೆ ಒಂದು ಜೀವನೋಪಾಯವಾಗಿದೆ. ಮೀನುಗಾರಿಕೆಗೆ ಮೂಲಸೌಕರ್ಯ ಒದಗಿಸುವ ವಿಷಯದಲ್ಲಿ ಭಾರತವು ಕನಿಷ್ಠ 25 ವರ್ಷ ಕಾಲಾವಕಾಶ ಬೇಕೆಂದು, ಅದುವರೆಗೆ ತನ್ನ ನಿಲುವನ್ನು ಬದಲಿಸುವುದಿಲ್ಲವೆಂದು ಹೇಳಿದೆ. ಮತ್ಸ್ಯೋದ್ಯಮದ ವಿಷಯ ಇನ್ನೂ ಇತ್ಯರ್ಥವಾಗಿಲ್ಲ. ಮುಂದಿನ ನಾಲ್ಕು ವರ್ಷಗಳಲ್ಲಿ ಅಂತಿಮ ಹಂತ ತಲುಪುವ ಸಾಧ್ಯತೆ ಇದೆ. ಸದ್ಯಕ್ಕೆ ಭಾರತ ಪ್ರತ್ಯೇಕ ಆರ್ಥಿಕ ವಲಯದಲ್ಲಿ ಮೀನುಗಾರಿಕೆಗೆ ಎರಡು ವರ್ಷಗಳ ಕಾಲ ಸಬ್ಸಿಡಿ ನೀಡಬಹುದಾಗಿದೆ. ಆದರೆ ಇದರಲ್ಲಿ ಯಾವ ವಿಶೇಷವೂ ಇಲ್ಲ. ಕಾರಣ, ವಿಶ್ವಸಂಸ್ಥೆಯ ಸಮುದ್ರ ಕಾನೂನಿನ ಅಡಿಯಲ್ಲಿ ಭಾರತಕ್ಕೆ ಈ ಅಧಿಕಾರ ಇದ್ದೇ ಇದೆ.

ಮೇಲಿನ ಮೂರು ವಿಷಯಗಳಲ್ಲದೆ ಇತರ ಮೂರು ವಿಷಯಗಳು ಸಮಾವೇಶದಲ್ಲಿ ಚರ್ಚೆಗೆ ಒಳಪಟ್ಟಿದ್ದರೂ ಇತ್ಯರ್ಥವಾಗಿಲ್ಲ. ಡಬ್ಲ್ಯುಟಿಒದಲ್ಲಿ ವ್ಯಾಜ್ಯ ಇತ್ಯರ್ಥಕ್ಕೆ ಪ್ರತ್ಯೇಕ ವ್ಯವಸ್ಥೆ ಹಾಗೂ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸುವ ವಿಷಯಗಳು ಚರ್ಚೆಗೆ ಒಳಪಟ್ಟರೂ ಈ ಎರಡೂ ವಿಷಯಗಳನ್ನು ಮುಂದೂಡಲಾಗಿದೆ. ಇ-ವಾಣಿಜ್ಯ ವಹಿವಾಟಿನ ಮೇಲೆ ಸುಂಕ ವಿಧಿಸಬೇಕೆಂಬ ವಾದ ಕೇಳಿಬಂದಿತ್ತು. ಆದರೆ ಈ ವಿಷಯವನ್ನು ಎರಡು ವರ್ಷಗಳ ಕಾಲ ಮುಂದೂಡಲಾಗಿದ್ದು, ಸದ್ಯಕ್ಕೆ ಯಾವುದೇ ಸುಂಕ ವಿಧಿಸುವುದಕ್ಕೆ ಅವಕಾಶವಿಲ್ಲ.

ಡಬ್ಲ್ಯುಟಿಒ ವ್ಯಾಪ್ತಿ ವ್ಯಾಪಾರಕ್ಕೆ ಸೀಮಿತವಾಗಿರಬೇಕು, ಇತರ ವಿಷಯಗಳಿಗೆ ಅವಕಾಶ ಇರಬಾರದೆಂಬ ವಾದ ಮೊದಲಿನಿಂದಲೂ ಕೇಳಿಬರುತ್ತಿದೆ. ಆದರೆ ಕ್ರಮೇಣ ಇದರ ವ್ಯಾಪ್ತಿಗೆ ಕೃಷಿ, ಮೀನುಗಾರಿಕೆಯಂತಹ ವಿಷಯಗಳು ಸೇರಿಕೊಂಡಿವೆ. ಸಂಘಟನೆಯು ಈಗ ಸುಸ್ಥಿರ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳತ್ತ ವಾಲುತ್ತಿದೆ, ವ್ಯಾಪಾರೇತರ ವಿಷಯಗಳನ್ನು ತನ್ನ ಪರಿಧಿಯೊಳಗೆ ಸೇರಿಸಿಕೊಳ್ಳುತ್ತಿದೆ. ಇದರ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ.

ಚುರುಮುರಿ



ರೆಬೆಲ್ ರಗಳೆ

• ಮಣ್ಣೆರಾಜು

‘ಸೊಸೆ ಮುನಿಸಿಕೊಂಡು ತವರಿಗೆ ಹೋಗುವಂತೆ ರೆಬೆಲ್ ಶಾಸಕರು ಸಿಟ್ಟು ಮಾಡಿಕೊಂಡು ರೆಸಾರ್ಟ್‌ಗೆ ಹೋಗುವುದು ನಿಲ್ಲಬೇಕು?’ ಸುಮಿ ಹೇಳಿದಳು.

‘ತವರು, ರೆಸಾರ್ಟ್ ಇರೋವರೆಗೂ ಈ ಸಮಸ್ಯೆ ಇದ್ದೇ ಇರುತ್ತದೆ, ಸಹಿಸಿಕೊಂಡು ಹೋಗಬೇಕಷ್ಟೇ. ಎಲೆಕ್ಷನ್ ಟೈಮ್‌ನಲ್ಲಿ ಜನನಾಯಕರು ಉದ್ರಿಕ್ತರಾಗಿರುತ್ತಾರೆ, ಅವರನ್ನು ಎಚ್ಚರಿಕೆಯಿಂದ ನಿಭಾಯಿಸಬೇಕು’ ಅಂದ ಶಂಕ್ರಿ.

‘ರೆಬೆಲ್ ಖ್ಯಾತಿಯ ಮಹಾರಾಷ್ಟ್ರದ ಮಾದರಿ ಆಡಳಿತ ಇತರ ರಾಜ್ಯಗಳಿಗೆ ಪಠ್ಯವಾಗಬೇಕು. ರೆಬೆಲ್‌ಗಳ ನಿಯಂತ್ರಣ ಸರ್ಕಾರಗಳಿಗೆ ಎಚ್ಚರಿಕೆಯ ಪಾಠವಾಗಬೇಕು’.

‘ಪರರಾಜ್ಯದಿಂದ ಪಾಠ ಕಲಿಯುವಷ್ಟು ನಾವು ಹಿಂದುಳಿದಿಲ್ಲ. ನಮ್ಮ ಚರಿತ್ರೆಯ ಪುಟಗಳನ್ನು ತೆರೆದು ನೋಡಿದರೆ ಸಾಕಷ್ಟು ರೆಬೆಲ್ ರಾದ್ಧಾಂತಗಳು ಸಿಗುತ್ತವೆ’.

‘ಹೌದೂರೀ, ಹಳ್ಳಿ ಹಕ್ಕಿ ವಿಶ್ವಣ್ಣ ರಚಿಸಿರುವ ‘ಬಾಂಬೆ ಫೈಲ್ಸ್’ ಪುಸ್ತಕ ರಾಜಕಾರಣದ ದೊಡ್ಡ ಚರಿತ್ರೆಯಾಗಲಿದೆಯಂತೆ, ಈ ಪುಸ್ತಕವನ್ನು ಸರ್ಕಾರಿ ಸಿಲೆಬಸ್‌ಗೆ ಅಳವಡಿಸಿಕೊಂಡರೆ ಆಡಳಿತದ ಅಧ್ವಾನಗಳನ್ನು ನಿಯಂತ್ರಿಸಬಹುದೇನೋ’.

‘ಬಹುತಾರಾಗಣದ ಬಾಂಬೆ ಫೈಲ್ಸ್ ಶೀಘ್ರದಲ್ಲೇ ತೆರೆ ಕಾಣಲಿದೆಯಂತೆ, ಆಮೇಲೆ ಅದರ ಸಾಧಕಬಾಧಕಗಳನ್ನು ಅಧ್ಯಯನ ಮಾಡಿ ಅಳವಡಿಸಿಕೊಳ್ಳಬಹುದು’.

‘ಸಿಎಂ ಸರ್ವಾಧಿಕಾರಿಯಾದಾಗ, ಶಾಸಕರ ಸ್ವಾಭಿಮಾನಕ್ಕೆ ಧಕ್ಕೆಯಾದಾಗ ರೆಬೆಲ್ ರೋಗ ಕಾಣಿಸಿಕೊಳ್ಳುವುದಂತೆ. ಅತೃಪ್ತ ಶಾಸಕರಿಗೆ ಯೋಗ್ಯ ಅಧಿಕಾರ, ಅನುದಾನ ನೀಡುತ್ತಿದ್ದರೆ ಅವರೇಕೆ ರೆಬೆಲ್‌ಗಳಾಗುತ್ತಾರೆ? ರೇಷನ್ ಕೊರತೆಯಾದಾಗ ಆಪರೇಷನ್‌ಗೆ ಮನಸ್ಸು ಮಾಡುತ್ತಾರೆ ಎಂಬೆಲ್ಲಾ ವಿಚಾರಗಳು ಬಾಂಬೆ ಫೈಲ್ಸ್‌ನಲ್ಲಿ ಇರಬಹುದು’.

‘ಹೌದು, ಶಾಸಕರ ಬೇಕುಬೇಡಗಳನ್ನು ಅರ್ಥ ಮಾಡಿಕೊಂಡು ಅವರ ಆರೈಕೆ, ಪೂರೈಕೆಗಳನ್ನು ಪೂರೈಸಿಕೊಂಡಿದ್ದರೆ ಅವರೇಕೆ ಹೊಸಿಲು ದಾಟಿ ರೆಸಾರ್ಟ್ ದಾರಿ ಹಿಡಿಯುತ್ತಾರೆ?’

‘ನಿಜ, ಪ್ರಜೆಗಳ ಕ್ಷೇಮ ಸೈಡಿಗಿರಲಿ, ಹೇಗೋ ಸರ್ಕಾರ ಕ್ಷೇಮವಾಗಿದ್ದರೆ ಸಾಕು...’ ಎಂದಳು ಸುಮಿ.

ಸಂಗತ

ಶಿಕ್ಷಣ ಮತ್ತು ಕೌಶಲದ ಮಹತ್ವ

ಪ್ರಮಾಣಪತ್ರವನ್ನು ಒದಗಿಸುವ ಈಗಿನ ಶಿಕ್ಷಣ, ಸದ್ಯದ ಸಮಾಜವನ್ನು ಹೇಗೆ ಕಟ್ಟುತ್ತಿದೆ ಎಂದು ಯೋಚಿಸಬೇಕು

• ಸದಾಶಿವ್ ಸೊರಟೂರು

ಎಸ್‌ಎಸ್‌ಎಲ್‌ಸಿಯಲ್ಲಿ ತಕ್ಕಮಟ್ಟಿಗೆ ಒಳ್ಳೆ ಅಂಕ ಪಡೆದಿದ್ದ ನನ್ನ ವಿದ್ಯಾರ್ಥಿಯೊಬ್ಬ ಕಾಲೇಜು ಸೇರಿರಲಿಲ್ಲ. ಆ ಕುರಿತು ಮಾತನಾಡಲು ಅವನ ತಂದೆಯನ್ನು ಭೇಟಿಯಾದೆ. ಅನಿರೀಕ್ಷಿತ ಉತ್ತರ ಅವರಿಂದ ಬಂತು. ‘ಮಗ ಮುಂದೆ ಎರಡು ವರ್ಷ ಪಿಯುಸಿ ಓದ್ಬೇಕು, ನಂತರ ಮೂರು ವರ್ಷ ಪದವಿ. ಆಮೇಲೆ ಏನು? ಮತ್ತೆ ನೌಕರಿಗೆ ಆ ಪರೀಕ್ಷೆ, ಈ ಪರೀಕ್ಷೆ. ಸಿಕ್ಕರೆ ಸಿಕ್ತು ಇಲ್ಲ ಅಂದ್ರೆ ಇಲ್ಲ. ಆರೇಳು ವರ್ಷ ವ್ಯರ್ಥ. ಅಷ್ಟರಲ್ಲವನು ಮನೆ ಕೆಲಸ ಮಾಡೋದೆ ಮರೀತಾನೆ. ಹೊಲದ ಕೆಲಸ ಮನಸ್ಸಿಂದಲೇ ದೂರ. ತಲೆಗೆ ಪದವಿ ತುಂಬಿರುತ್ತೆ. ಅತ್ತ ನೌಕರಿ ಇಲ್ಲ, ಇತ್ತ ಮನೆಗೆ ಆಸ್ತಿಯೂ ಅಲ್ಲ. ಹೇಳಿ ಸರ್, ನನ್ನ ಮಗನ್ನ ಈ ಓದಿನ ಕೈಗೆ ಕೊಟ್ಟು ಹಾಳು ಮಾಡ್ಲಾ?’ ಅಂದುಬಿಟ್ಟರು.

‘ಒಬ್ಬ ತಂದೆಯಾಗಿ ನೀವು ಹೀಗೆ ಮಾತಾಡೋದು ಸರಿಯಿಲ್ಲ. ಮಗನ ಭವಿಷ್ಯ ಮುಖ್ಯ’ ಅಂದೆ. ‘ಎಲ್ಲಾ ತಂದೆ-ತಾಯಂದಿರು ಇದೇ ಆಸೆಯಲ್ಲಿ ಕಳಿಸ್ತಾರೆ. ಎಲ್ಲಾ ಮುಗಿದ ಮೇಲೆ ತಿಳಿಯುತ್ತೆ ನಾವೆಲ್ಲೋ ತಪ್ಪು ಮಾಡಿದ್ವಿ ಅಂತ. ಆಗ ಕಾಲ ಮಿಂಚಿರುತ್ತೆ’ ಅಂದರು.

‘ಶಿಕ್ಷಣ ಇರೋದು ಬರೀ ನೌಕರಿಗಲ್ಲ ಯಜಮಾನ್ರೆ, ಬದುಕಿಗೆ ಬೇಕು’ ಅಂದೆ. ಅವರು ನಕ್ಕರು. ‘ಮಗನಿಗೆ ಕನ್ನಡ ಚೆನ್ನಾಗಿ ಬರುತ್ತೆ. ಇಂಗ್ಲಿಷ್ ಕೂಡ ತಕ್ಕಮಟ್ಟಿಗೆ ಓಕೆ. ಗಣಿತ ಅಡ್ಡಿಯಿಲ್ಲ. ಶಾಲೆಯಲ್ಲಿ ಒಳ್ಳೆಯದನ್ನೇ ಕಲಿಸಲಾಗುತ್ತಿದೆ. ಆದರೆ ಎಷ್ಟೋ ಜನ ಒಳ್ಳೆಯವರಾಗಿಲ್ಲ. ಓದಿದವರೇ ಸಮಾಜಕ್ಕೆ ಹೆಚ್ಚು ಸವಾಲಾಗಿರೋದು ಹೊಸ ವಿಚಾರನಾ ಸರ್?’ ಎಂದು ಹೇಳಿ ಹೊರಟುಹೋದರು.

‘ಮಕ್ಕಳನ್ನು ಭತ್ತ ಬೆಳೆಯುವ ಗದ್ದೆಗಳನ್ನಾಗಿ ಮಾಡಿ; ಭತ್ತ ತುಂಬುವ ಗೋಣಿಚೀಲಗಳನ್ನಾಗಿ ಅಲ್ಲ’ ಅಂದಿದ್ದರು ಕುವೆಂಪು. ಆದರೆ ಈಗ ಪ್ರತೀ ಮಗು ಒಂದೊಂದು ಗೋಣಿಚೀಲ. ಶಿಕ್ಷಣ ಎಂದರೇನು ಎಂಬ ಪ್ರಶ್ನೆಗೆ ಉತ್ತರಿಸಲು ಹೆಚ್ಚು ತಲೆಕೆಡಿಸಿಕೊಳ್ಳಬೇಕಾಗಿಲ್ಲ. ‘ಒಂದು ಹಂತದವರೆಗೆ ಮಕ್ಕಳ ಮೇಲೆ ಬಂಡವಾಳ ಹೂಡಿ ನಂತರ ಬಡ್ಡಿ ಸಮೇತ ಬಂಡವಾಳ ವಾಪಸು ತೆಗೆಯುವ ಕ್ರಮವೇ ಶಿಕ್ಷಣ’ ಎಂದು ಉತ್ತರಿಸಿದರೆ ಸಾಕು! ಬಂಡವಾಳ ಇದ್ದವರು ಹೂಡುತ್ತಾರೆ, ಗೆಲ್ಲುತ್ತಾರೆ. ಇಲ್ಲದವರು ಬರೀ ಪದವಿ ಪತ್ರ ಹಿಡಿದುಕೊಂಡು ಬದುಕು ಸವೆಸುತ್ತಾರೆ. ಶುದ್ಧ ಮಾರುಕಟ್ಟೆಯಾಗಿರುವ ‘ಪ್ರಮಾಣಪತ್ರ’ ಒದಗಿಸುವ ಈಗಿನ ಶಿಕ್ಷಣ ಸದ್ಯದ ಸಮಾಜವನ್ನು ಹೇಗೆ ಕಟ್ಟುತ್ತಿದೆ ಎಂದು ಯೋಚಿಸಬೇಕು.

ಕಲಿಯುತ್ತಾ ಗಳಿಸುವ ಕೌಶಲ ಹೇಳಿಕೊಡುವ ಮೂಲ ಶಿಕ್ಷಣ ಬೇಕು ಎಂದಿದ್ದರು ಗಾಂಧೀಜಿ. ಪ್ರತಿಯೊಬ್ಬ ವಿದ್ಯಾರ್ಥಿಯೂ ಶಿಕ್ಷಣದ ಜೊತೆಗೆ ಕೌಶಲವನ್ನು ಬೆಳೆಸಿಕೊಳ್ಳುವುದು ಮುಖ್ಯ. ಕೌಶಲವಿಲ್ಲದ ಶಿಕ್ಷಣ ಯಾವುದಕ್ಕೂ ಪ್ರಯೋಜನವಿಲ್ಲ ಎಂಬ ಸಂದರ್ಭ ಉಂಟಾಗಿದೆ. ಬರೀ ಕೌಶಲವಿದ್ದರೆ ಜೀವನ ಸಾಗಿಸಬಹುದು. ಆದರೆ ಕೌಶಲದೊಂದಿಗೆ ಶಿಕ್ಷಣವಿದ್ದರೆ ಜೀವನದಲ್ಲಿ ಎತ್ತರಕ್ಕೆ ಹೋಗಬಹುದು, ಬಹು ಎತ್ತರದ ಅದ್ಭುತವನ್ನು ಸಾಧಿಸಬಹುದು. ಬಿ.ಎಸ್ಸಿ ಅಗ್ರಿ ಓದುವವನಿಗಿಂತ ಓದದ ರೈತ ಬುದ್ಧಿವಂತನಾಗಿರಬಹುದು, ಎಂಬಿಎ ಮಾಡಿದವನು ಒಂದು ಅಂಗಿ ಮಾರಲು ಅರ್ಧ ದಿನ ತೆಗೆದುಕೊಂಡರೆ, ಬಟ್ಟೆ ಅಂಗಡಿಯಲ್ಲಿರುವ ಹುಡುಗ ಅರ್ಧದಿನಕ್ಕೆ ಹತ್ತು ಅಂಗಿ ಮಾರಬಹುದು. ಕಾಲೇಜು ಏನು ಕಲಿಸುತ್ತಿದೆ ಎಂಬ ಪ್ರಶ್ನೆ ಯಾರಿಗಾದರೂ ಮೂಡದೇ ಇರದು.

ನಮ್ಮ ದೇಶ ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳನ್ನು ಇನ್ನು ಹತ್ತು ವರ್ಷ ನಿರಂತರವಾಗಿ ಸೃಷ್ಟಿಸದಿದ್ದರೆ ಒಂದು ಮಧ್ಯಮ ಆದಾಯದ ದೇಶವಾಗುವುದು ಸಾಧ್ಯವಿಲ್ಲ. ಈಗಿರುವ ಯುವಜನರ ಬಲ ಒಂದು ತೊಂದರೆಯಾಗದೇ ಶಕ್ತಿಯಾಗಬೇಕು ಅಂದರೆ ಅವರು ಕೌಶಲಭರಿತರಾಗಬೇಕು. ಪದವಿ ಪತ್ರವುಳ್ಳವರಷ್ಟೇ ಆದರೆ ಸಾಲದು. ಪದವಿ ಪಡೆದವನಿಗೆ ಒಂದೂ ತಪ್ಪಿಲ್ಲದೆ ಅರ್ಜಿ ಕೂಡ ಬರೆಯಲು ಬರುವುದಿಲ್ಲ ಎಂಬುದನ್ನು ನಾವು ನೆನಪಿಡಬೇಕು. ಕೌಶಲ ಕಲಿಸಬೇಕು, ಅದಕ್ಕೆ ಸಂಬಂಧಿಸಿದಂತೆ ದೊಡ್ಡ ಪ್ರಮಾಣದ ಉದ್ಯೋಗ ಸೃಷ್ಟಿಯಾಗಲೇಬೇಕು. ಹೀಗೆ ಉದ್ಯೋಗ ಸೃಷ್ಟಿಸುವಂತಹ ವಾತಾವರಣ ಕಟ್ಟಲು ಭಾರತದಂತಹ ದೇಶಕ್ಕೆ ಜ್ಞಾನ ವಿಜ್ಞಾನದ ಬಲವೊಂದರಿಂದಲೇ ಸಾಧ್ಯ ಮತ್ತು ಅದಾಗಲು ಸೂಕ್ತ ಕಲಿಕೆ ಬೇಕು. ಈಗಿರುವ ನಮ್ಮ ಶಿಕ್ಷಣಕ್ರಮದಿಂದ ಅದನ್ನು ಸಾಧ್ಯವಾಗಿಸಬಹುದೇ? ಯೋಚಿಸಬೇಕು.



ಬರೀ ಕೌಶಲ ಕಲಿಸಿದರೆ ಮುಗಿಯಿತೇ? ಸಾಲದು. ಅದಷ್ಟೇ ಶಿಕ್ಷಣವಲ್ಲ. ಒಂದೊಳ್ಳೆ ಶಿಕ್ಷಣ ನಮಗೆ ಸಿಕ್ಕಿದ್ದರೆ ಅಂಬೇಡ್ಕರ್ ಕಂಡ ಪ್ರಜಾಪ್ರಭುತ್ವದ ಪೂರ್ಣ ಕನಸು ನನಸಾಗದೆ ಉಳಿಯುತ್ತಿತ್ತೇ? ಮನುಷ್ಯರನ್ನು ಧರ್ಮದ ಹಿನ್ನೆಲೆಯಲ್ಲಿ, ಜಾತಿಯ ನೆಲೆಯಲ್ಲಿ, ಅಂತಸ್ತಿನ ಹಿನ್ನೆಲೆಯಲ್ಲಿ, ರಾಜಕೀಯ ಬಲದಲ್ಲಿ ಅಳೆಯುವ ಸ್ಥಿತಿ ಜೀವಂತವಾಗಿ ಇರುತ್ತಿತ್ತೇ? ಮನುಷ್ಯರನ್ನು ಮನುಷ್ಯರನ್ನಾಗಿ ನೋಡದೆ ಶೋಷಿಸುವ ಕಾಲ ಉಳಿಯುತ್ತಿತ್ತೇ? ನಮ್ಮ ಶಿಕ್ಷಣ ಎಲ್ಲೋ ಎಡವಿದೆ ಅನಿಸುತ್ತಿಲ್ಲವೇ?

ಶಿವರಾಮ ಕಾರಂತರು ತಮ್ಮ ಮಗುವನ್ನು ಸಾಂಪ್ರದಾಯಿಕ ಶಿಕ್ಷಣದ ಶಾಲೆಗೆ ಸೇರಿಸಲು ಮನಸ್ಸು ಮಾಡಲಿಲ್ಲ. ಅವರೇಕೆ ಹಾಗೆ ಮಾಡಿದರು ಎಂಬುದು ವಿವರಿಸಲಾಗದಷ್ಟು ನಿಗೂಢವೇನಲ್ಲ. ಸ್ವಾತಂತ್ರ್ಯ ಬಂದ ನಂತರ ಅನೇಕ ರಾಷ್ಟ್ರೀಯ ಶಿಕ್ಷಣ ನೀತಿಗಳು ಬಂದು ಹೋಗಿವೆ. ಎಷ್ಟೊಂದು ಯೋಜನೆಗಳು ಜಾರಿಯಾಗಿವೆ. ಶಿಕ್ಷಣದಲ್ಲಿ ಕ್ರಾಂತಿ ಆಗಲೇ ಇಲ್ಲ. ಈಗ ಮತ್ತೊಂದು ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗುತ್ತಿದೆ. ಅದರ ಕಡೆ ಆಸೆಗಣ್ಣನಿಡಬಹುದೇ? ಕಾಲವೇ ಉತ್ತರಿಸಬೇಕು.

ವಾಚಕರ ವಾಣಿ

ಅತ್ತ ಉಚಿತ ವಿದ್ಯುತ್, ಇತ್ತ...

ಒಂದೆಡೆ, ಪಂಜಾಬ್ ಸರ್ಕಾರ ಜುಲೈ 1ರಿಂದ ತಮ್ಮ ರಾಜ್ಯದ ಜನರಿಗೆ ಗೃಹ ಬಳಕೆಗಾಗಿ 300 ಯುನಿಟ್‌ಗಳವರೆಗೆ ಉಚಿತ ವಿದ್ಯುತ್ ನೀಡಲು ನಿರ್ಧರಿಸಿದ್ದರೆ, ಇನ್ನೊಂದೆಡೆ, ನಮ್ಮ ಕರ್ನಾಟಕ ಸರ್ಕಾರ ಅದೇ ದಿನದಿಂದ ವಿದ್ಯುತ್ ದರ ಏರಿಸಲು ನಿರ್ಧರಿಸಿರುವುದು ವಿಪರ್ಯಾಸ. ಉಚಿತ ವಿದ್ಯುತ್ ನೀಡುವುದಿರಲಿ ಕೊನೇಪಕ್ಷ ಜನರಿಗೆ ಕೈಗೆಟುಕುವ ದರದಲ್ಲಿಯಾದರೂ ನೀಡಬಹುದಲ್ಲವೇ? ಸರ್ಕಾರ ತನ್ನ ಅನಗತ್ಯ ಖರ್ಚು ವೆಚ್ಚಗಳಿಗೆ ಕಡಿವಾಣ ಹಾಕಿ, ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸಲೇಬೇಕಾದ ಅನಿವಾರ್ಯ ಸ್ಥಿತಿ ಈಗ ಬಂದಿದೆ.

ಭಾಸ್ಕರ್ ಶೆಟ್ಟಿ, ಹಾಸನ

ಎಲ್ಲ ಬಗೆಯ ಬಡತನವೂ ಒಂದೇ ಅಲ್ಲ

‘ಜಾತಿಯಲ್ಲಿ ಮುಂದುವರಿದವರು ಅಂದಮಾತ್ರಕ್ಕೆ ಅವರನ್ನು ಸಾಮಾಜಿಕವಾಗಿ ತುಳಿಯುವುದು ಎಂಥ ಮಾನವೀಯತೆ’ ಎಂದು ಗಣಪತಿ ಶಿರಳಗಿ ಕೇಳಿದ್ದಾರೆ (ವಾ.ವಾ., ಜೂನ್ 28). ಅವರ ಈ ಮಾತನ್ನು ಒಪ್ಪುವುದು ಸಾಧ್ಯವಿಲ್ಲ. ಪರಿಶಿಷ್ಟ ಜಾತಿಯ ಅನಕ್ಷರಸ್ಥ, ವಸತಿಹೀನ, ಕೂಲಿಕಾರಳಾದ ಒಬ್ಬ ಹೆಣ್ಣು ಮಗಳ ಬಡತನವೂ ‘ಮುಂದುವರಿದ’ ಜಾತಿಯ ಅಕ್ಷರಸ್ಥ, ಆಸ್ತಿವಂತ, ವಸತಿಯುಳ್ಳ ಹೆಣ್ಣು ಮಗಳ ಬಡತನವೂ ಒಂದೇ ಅಲ್ಲ. ರಾಜ್ಯದಲ್ಲಿನ ಒಟ್ಟು ಸಾಕ್ಷರತೆಯು ಶೇ 75.36ರಷ್ಟಿದ್ದರೆ, ಪರಿಶಿಷ್ಟ ಜಾತಿಯ ಹೆಣ್ಣು ಮಕ್ಕಳ ಸಾಕ್ಷರತೆಯು ಇಂದಿಗೂ ಶೇ 56.55ರಷ್ಟಿದೆ (2011ರ ಜನಗಣತಿ). ರಾಜ್ಯದಲ್ಲಿನ ಒಟ್ಟು ದುಡಿಮೆಗಾರರಲ್ಲಿ (15ರಿಂದ 60 ವರ್ಷಗಳ ವಯೋಮಾನ) ಭೂರಹಿತ, ದಿನಗೂಲಿ ಮಾಡುವವರ ಪ್ರಮಾಣ ಶೇ 25.67ರಷ್ಟಿದ್ದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳಲ್ಲಿನ ಇವರ ಪ್ರಮಾಣ ಶೇ 32ಕ್ಕಿಂತ ಅಧಿಕವಾಗಿದೆ. ರಾಜ್ಯದಲ್ಲಿನ ಪೌರಕಾರ್ಮಿಕರಲ್ಲಿ ಶೇ 99ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿದ್ದಾರೆ. ಹಾಗಿದ್ದರೆ ‘ಜಾತಿಯಲ್ಲಿ ಮುಂದುವರಿದವರು’ ಯಾಕೆ ಸದರಿ ವೃತ್ತಿಯಲ್ಲಿಲ್ಲ? ಜಾತಿಯಲ್ಲಿ ಮುಂದುವರಿದವರ ‘ಮಾನವೀಯತೆ’ ಬಗ್ಗೆ ಮಾತನಾಡುವ ನಾವು ‘ಸನಾತನ ಅಸಮಾನತೆ’ ಉಂಟುಮಾಡಿರುವ ಅಮಾನವೀಯತೆ ಬಗ್ಗೆ ಏಕೆ ಮಾತನಾಡುತ್ತಿಲ್ಲ?!

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಪ್ರತಿಪಕ್ಷಗಳು ಕಾಣುತ್ತಿಲ್ಲವೇಕೆ?

ಬಿಜೆಪಿ ನಾಯಕರಲ್ಲಿ ಒಂದು ವಿಶೇಷ ಗುಣವಿದೆ. ತಮ್ಮ ವಾರ್ಷಿಕ ಕಾರ್ಯಕ್ರಮದ ಭಾಗವಾಗಿ, ತುರ್ತು ಪರಿಸ್ಥಿತಿಯಲ್ಲಾದ ಪ್ರಜಾಪ್ರಭುತ್ವದ ದಮನ, ಕರಾಳತೆ ಕುರಿತು ಮಾತನಾಡಿ ಅವರು ಹೆಚ್ಚು ಪ್ರಚಾರ ಪಡೆಯುತ್ತಾರೆ. ಇದರಿಂದ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ವರ್ಚಸ್ಸಿಗೆ ಮಸಿ ಬಳಿಯುವುದರಲ್ಲಿ ಯಶಸ್ವಿಯಾಗುತ್ತಾರೆ. ದುರಂತವೆಂದರೆ, ಕಾಂಗ್ರೆಸ್ಸಿನ ನಾಯಕರು ಬಿಜೆಪಿಯ ದಾಳಿಗೆ ದಾಳವಾಗಿ ಬಲಿಯಾಗುತ್ತಿರುವುದು. ಇಂದಿರಾ ಅವರನ್ನು ಅಮೆರಿಕದ ಮಾಜಿ ವಿದೇಶಾಂಗ ಸಚಿವ ಹೆನ್ರಿ ಕಿಸ್ಸಿಂಗರ್ ಅವರು ‘ವಿಶ್ವದ ಅತಿ ಬಲಿಷ್ಠ ಮಹಿಳೆ’ ಎಂದು ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿರುವುದು ಕಾಂಗ್ರೆಸ್ಸಿಗೆ ಹುಮ್ಮಸ್ಸು ತರುವುದಿಲ್ಲವೇ? ಇಂದಿರಾ ಅವರಿಂದ ಪಾಕಿಸ್ತಾನದ ಇಬ್ಭಾಗ, ದೇಶವು ಅಣ್ವಸ್ತ್ರರಾಷ್ಟ್ರ ಆಗಿರುವುದು, ಆಹಾರ ಮತ್ತು ರಕ್ಷಣೆಯಲ್ಲಿ ಸ್ವಾವಲಂಬನೆ ಸಾಧಿಸಿರುವುದು, ಪಂಜಾಬಿನಲ್ಲಿ ಖಲಿಸ್ಥಾನದ ಉಗ್ರ ಜರ್ನೈಲ್ ಸಿಂಗ್ ಭಿಂದ್ರನ್‌ವಾಲೆಯ ನಿಗ್ರಹ ಮಾಡಿರುವುದು ಉತ್ತೇಜಿಸುವುದಿಲ್ಲವೇ? ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಯೊಂದು ವಿಶ್ವ ಪರ್ಯಟನೆಯಲ್ಲೂ ತಮ್ಮ ಹೆಗ್ಗಳಿಕೆಯನ್ನು ವಿಜೃಂಭಿಸುತ್ತಾ, ಇಂದಿರಾ ಅವರ ತುರ್ತುಪರಿಸ್ಥಿತಿಯ ಕರಾಳ ದುರಂತವನ್ನು ಅನಿವಾಸಿ ಭಾರತೀಯರ ಮುಂದೆ ಹೇಳುತ್ತಿದ್ದರೂ, ಕಾಂಗ್ರೆಸ್ ನಾಯಕರು ಬಿಜೆಪಿಯ ದುರಾಡಳಿತ, ಅಘೋಷಿತ ತುರ್ತುಪರಿಸ್ಥಿತಿಯಿಂದ ಆಗುತ್ತಿರುವ ವಾಕ್ ಸ್ವಾತಂತ್ರ್ಯದ ಹರಣ, ಪತ್ರಕರ್ತರ ಮೇಲೆ ದೇಶದ್ರೋಹದ ಮೊಕದ್ದಮೆ, ಆಯ್ದ ವಿರೋಧಿಗಳ ಮೇಲೆ ಇ.ಡಿ, ಸಿಬಿಐ ಛೂ ಬಿಡುವುದು, ಪ್ರಜಾಪ್ರಭುತ್ವದ ಮೇಲೆ ಆಗುತ್ತಿರುವ ದಾಳಿಯನ್ನು ಖಂಡಿಸಲೂ ನಿತ್ರಾಣವಾಗಿರುವುದು ಪ್ರಮಾದವಲ್ಲವೇ?

ದೇಶದಲ್ಲಿ ದ್ವೇಷವನ್ನು ಬೆಳೆಸಿ ಸೌಹಾರ್ದವನ್ನು ಕಲುಷಿತಗೊಳಿಸಿ, ದೇಶವನ್ನು ಒಡೆಯುವ ಪ್ರವೃತ್ತಿಯ ಅಂತ್ಯಕ್ಕೆ ಹೋರಾಟ ಮಾಡಬಾರದೇ? ದೋಷಪೂರಿತ ಆರ್ಥಿಕ ನೀತಿಯಿಂದ ಖಾಸಗಿ ಉದ್ಯಮಗಳು ನಾಶವಾಗಿ, ನಿರುದ್ಯೋಗ ಗಗನಕ್ಕೇರಿ, ಹಣದುಬ್ಬರದಿಂದ ತತ್ತರಿಸುತ್ತಿರುವ ಜನರಿಗಾಗಿ ಹೋರಾಟ ಮಾಡುವವರಾರು? ಮಧ್ಯಪ್ರಾಚ್ಯ ದೇಶಗಳು, ಪಾಶ್ಚಿಮಾತ್ಯ ದೇಶಗಳು ಭಾರತದಲ್ಲಿನ ದುರ್ಘಟನೆಗಳ ವಿರುದ್ಧ ಸಿಡಿದೆದ್ದಿರುವುದಕ್ಕಾಗಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಬೇಕಾದ ಪ್ರತಿಪಕ್ಷಗಳು ಕಾಣುತ್ತಿಲ್ಲವೇಕೆ?

ಕೆ.ಎನ್.ಭಗವಾನ್, ಬೆಂಗಳೂರು

ಅಧಿಕಾರಿಗಳ ಸಹಕಾರವಿರಲಿ

ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ‘ಆಯುಷ್ಮಾನ್ ಭಾರತ’ವೂ ಒಂದು. ಇದು ಒಂದು ಉಪಯುಕ್ತ ಯೋಜನೆಯಾಗಿದೆ. ಸಹಸ್ರಾರು ಬಡವರು, ಅಂಗವಿಕಲರು ಇದರಿಂದ ಪ್ರಯೋಜನ ಪಡೆಯಬಹುದಾಗಿದ್ದರೂ ಈ ಯೋಜನೆಯ ಫಲವನ್ನು ಎಲ್ಲ ಆಸ್ಪತ್ರೆಗಳಿಗೂ ತಲುಪಿಸುವಲ್ಲಿ ಅಧಿಕಾರಿಗಳು ಸಹಕರಿಸುತ್ತಿಲ್ಲ ಎಂಬ ಆರೋಪವಿದೆ.

ಸರ್ಕಾರದ ಯೋಜನೆಗಳನ್ನು ಸರಿಯಾಗಿ ಚಾಲನೆಯಲ್ಲಿಡುವ ಕೆಲಸವನ್ನು ಅಧಿಕಾರಿಗಳು ವ್ಯವಸ್ಥಿತವಾಗಿ ಮಾಡಬೇಕಾದ ಅಗತ್ಯವಿದೆ.

ಕೊಡಕ್ಕಲ್ ಶಿವಪ್ರಸಾದ್, ಶಿವಮೊಗ್ಗ

ಸಣ್ಣ ತಪ್ಪುಗಳಿಗೆ ತನ್ನಿ ತಿದ್ದೋಲೆ

ಪಠ್ಯಪುಸ್ತಕಕ್ಕೆ ಸಂಬಂಧಿಸಿದಂತೆ ‘ಮಣಿದ ಸರ್ಕಾರ!’ ಎಂಬ ಪದವೇ ದಾರಿತಪ್ಪಿಸುವಂಥದ್ದು. ಇದು ಹಲವು ಅನುಮಾನಗಳಿಗೆ ಎಡೆ ಮಾಡುತ್ತದೆ. ಸರ್ಕಾರವು ರಂಗೋಲಿ ಕೆಳಗೆ ನುಸುಳುವ ಕೆಲಸ ಮಾಡಹೊರಟಿದೆ. ರೋಹಿತ್ ಚಕ್ರತೀರ್ಥ ಅವರು ಮಾಡಿದ ಪರಿಷ್ಕರಣೆಯನ್ನು ಪೂರ್ಣ ಹಿಂಪಡೆಯಬೇಕು. ಆರ್‌ಎಸ್‌ಎಸ್ ಪ್ರಣೀತ ಪಠ್ಯವು ಬೆಳೆವ ಮಕ್ಕಳ ಮನಸ್ಸಿಗೆ ವಿಷ ಉಣಿಸುವಂತಹದ್ದು. ಪ್ರೊ. ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿಯ ಪಠ್ಯವನ್ನೇ ಮುಂದುವರಿಸಬೇಕು. ಅಲ್ಲಿ ಬಸವಣ್ಣನವರ ಬಗ್ಗೆ ಇರುವ ಮಾಹಿತಿ, ಇತರ ಬರಹದಲ್ಲಿ ಮತ್ತೇನಾದರೂ ಕಣ್ತಪ್ಪಿ ಸಣ್ಣ ತಪ್ಪುಗಳು ನುಸುಳಿದ್ದರೆ ಅವಕ್ಕೆ ‘ತಿದ್ದೋಲೆ’ ಇರಲಿ.


ಆರ್.ಜಿ.ಹಳ್ಳಿ ನಾಗರಾಜ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಗಿಗ್ ಆರ್ಥಿಕತೆಯಲ್ಲಿ ಚಿಲ್ಲರೆ ವ್ಯಾಪಾರದ್ದೇ ಸಿಂಹಪಾಲು

ಪ್ರಜಾವಾಣಿ ವಾರ್ತೆ

ಗಿಗ್ ಆರ್ಥಿಕತೆಯು ದೊಡ್ಡ ಪ್ರಮಾಣದಲ್ಲಿ ಉದ್ಯೋಗವನ್ನು ಸೃಷ್ಟಿಸಲಿದೆ ಎಂದು ನೀತಿ ಆಯೋಗವು ಹೇಳಿದೆ. 2020–21ನೇ ಸಾಲಿನಲ್ಲಿ ಗಿಗ್ ಆರ್ಥಿಕತೆಯಲ್ಲಿ ತೊಡಗಿಕೊಂಡಿರುವ ಉದ್ಯೋಗಿಗಳ ಸಂಖ್ಯೆ 77 ಲಕ್ಷದಷ್ಟಿದ್ದು, 2029–30ನೇ ಸಾಲಿನಷ್ಟರಲ್ಲಿ ಈ ಸಂಖ್ಯೆ 2.35 ಕೋಟಿಗಳಿಗೆ ಏರಿಕೆಯಾಗಲಿದೆ ಎಂದು ಆಯೋಗವು ತನ್ನ ವರದಿಯಲ್ಲಿ ಹೇಳಿದೆ. ಗಿಗ್ ಆರ್ಥಿಕತೆಯಲ್ಲಿ ಅತಿಹೆಚ್ಚು ಉದ್ಯೋಗ ಸೃಷ್ಟಿಸಿರುವ ವಲಯ ಚಿಲ್ಲರೆ ವ್ಯಾಪಾರ. ಗಿಗ್ ಆರ್ಥಿಕತೆಯ ಒಟ್ಟು ಉದ್ಯೋಗದಲ್ಲಿ ಸುಮಾರು ಶೇ 39ರಷ್ಟು ಪಾಲು ಚಿಲ್ಲರೆ ವ್ಯಾಪಾರದ್ದು.




2021–22ರಲ್ಲಿ ಗಿಗ್ ಆರ್ಥಿಕತೆಯಲ್ಲಿ ತೊಡಗಿಸಿಕೊಂಡಿದ್ದ ಚಿಲ್ಲರೆ ವ್ಯಾಪಾರಿಗಳು ಮತ್ತು ಮಾರಾಟ ಪ್ರತಿನಿಧಿಗಳ ಸಂಖ್ಯೆ 10.6 ಲಕ್ಷ. 2017-18ರ ವೇಳೆಗೆ ಇಂತಹ ಉದ್ಯೋಗಿಗಳ ಸಂಖ್ಯೆ 19.2 ಲಕ್ಷಕ್ಕೆ ಏರಿಕೆಯಾಗಿದೆ. ಆರು ವರ್ಷಗಳಲ್ಲಿ ಇಂತಹ ಉದ್ಯೋಗಿಗಳ ಸಂಖ್ಯೆಯಲ್ಲಿ 8.6 ಲಕ್ಷದಷ್ಟು ಏರಿಕೆಯಾಗಿದೆ. 2019–20ನೇ ಸಾಲಿನ ವೇಳೆಗೆ ಈ ಸ್ವರೂಪದ ಉದ್ಯೋಗಿಗಳ ಸಂಖ್ಯೆ 26.3 ಲಕ್ಷಕ್ಕೆ ಏರಿಕೆಯಾಗಿದೆ. ನಂತರದ ಎರಡೇ ವರ್ಷಗಳಲ್ಲಿ ಇಂತಹ ಉದ್ಯೋಗಿಗಳ ಸಂಖ್ಯೆಯಲ್ಲಿ 7.1 ಲಕ್ಷದಷ್ಟು ಏರಿಕೆಯಾಗಿದೆ. ಅಂದರೆ, 2017–18ರ ನಂತರ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿಕೊಳ್ಳುವ ಮಂದಿಯ ಸಂಖ್ಯೆ ಹೆಚ್ಚಾಗಿದೆ. ದೇಶದ ನಗರ ಮತ್ತು ಪಟ್ಟಣ ಪ್ರದೇಶದಲ್ಲಿರುವ, ಸ್ವಂತ ಉದ್ಯೋಗ–ಪಾಲುದಾರಿಕೆ ಉದ್ಯೋಗ, ಅಂಗಡಿ–ಷೋರೂಂಗಳಲ್ಲಿ ಮಾರಾಟ ಪ್ರತಿನಿಧಿಯಾಗಿ ಮಾಡುವ ಕೆಲಸವನ್ನು ಈ ವರ್ಗದಲ್ಲಿ ಗುರುತಿಸಲಾಗಿದೆ. ಈ ಸ್ವರೂಪದ ಉದ್ಯೋಗಿಗಳ ಸಂಖ್ಯೆಯೂ ಮುಂದಿನ ವರ್ಷದಲ್ಲಿ ಏರಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ.

ಗಿಗ್ ಉದ್ಯೋಗ ಎಂದರೆ...

ಅಲ್ಪಾವಧಿಯವರೆಗೆ ಮಾತ್ರ ಇರುವ ಉದ್ಯೋಗವನ್ನು ಗಿಗ್ ಉದ್ಯೋಗ ಎಂದು ಜಾಗತಿಕ ಮಟ್ಟದಲ್ಲಿ ಪರಿಗಣಿಸಲಾಗುತ್ತದೆ. ಆದರೆ, ನೀತಿ ಆಯೋಗವು ಆನ್‌ಲೈನ್ ಪ್ಲಾಟ್‌ಫಾರಂ ಮತ್ತು ಅಂತಹ ಪ್ಲಾಟ್‌ಫಾರಂ ಇಲ್ಲದೇ ನಡೆಯುವ ಸ್ವಯಂ ಉದ್ಯೋಗಗಳನ್ನೂ ಗಿಗ್ ಉದ್ಯೋಗ ಎಂದು ಪರಿಗಣಿಸಿದೆ. ಭಾರತದಲ್ಲಿ ಗಿಗ್ ಉದ್ಯೋಗದ ಬೆಳವಣಿಗೆಯ ಸಾಧ್ಯತೆಗಳ ಬಗ್ಗೆ ನೀತಿ ಆಯೋಗವು ಪ್ರಕಟಿಸಿರುವ ವರದಿಯಲ್ಲಿ ಇಂತಹ ವ್ಯಾಖ್ಯಾನ ಇದೆ.


ಡೆಲಿವರಿ ಸೇವೆ, ಪ್ಲಂಬಿಂಗ್, ಎಲೆಕ್ಟ್ರೀಷಿಯನ್, ಗಾರ್ಡನಿಂಗ್, ವಿಡಿಯೊ ಬ್ಲಾಗಿಂಗ್, ಚಹಾ–ತಿಂಡಿ ವ್ಯಾಪಾರ, ಮಾರಾಟ ಪ್ರತಿನಿಧಿ... ಹೀಗೆ ನೀತಿ ಆಯೋಗವು ಗಿಗ್ ಉದ್ಯೋಗ ಎಂದು ಪರಿಗಣಿಸಿದ ಉದ್ಯೋಗಗಳ ಪಟ್ಟಿ ಬಹಳ ಉದ್ದವಿದೆ. ಇಂತಹ ಉದ್ಯೋಗದಲ್ಲಿ ತೊಡಗಿಕೊಂಡವರು ಸ್ಮಾರ್ಟ್‌ಫೋನ್ ಬಳಸುತ್ತಿದ್ದರೆ ಮತ್ತು ಅವರು 18–45 ವರ್ಷದವರಾಗಿದ್ದರೆ, ಅಂತಹವರನ್ನು ಗಿಗ್ ಉದ್ಯೋಗಿಗಳು ಎಂದು ಪರಿಗಣಿಸಲಾಗಿದೆ.



ಡೆಲಿವರಿ ಸೇವೆ

ಡೆಲಿವರಿ ಸೇವೆಯು ಗಿಗ್ ಆರ್ಥಿಕತೆಯ ಎರಡನೇ ಅತ್ಯಂತ ದೊಡ್ಡ ಉದ್ಯೋಗದಾತ ವಲಯವಾಗಿದೆ. ಡೆಲಿವರಿ, ಡೆಲಿವರಿ ಸಹಾಯಕ, ಲೋಡಿಂಗ್–ಅನ್‌ಲೋಡಿಂಗ್, ಡೆಲಿವರಿ ಸಮನ್ವಯಕಾರ, ಡೆಲಿವರಿ ವಾಹನಗಳ ಚಾಲಕ ಸಿಬ್ಬಂದಿಯ ಸಂಖ್ಯೆಯು 2019–20ರಲ್ಲಿ 13 ಲಕ್ಷದಷ್ಟಿತ್ತು.

2011–12ರಲ್ಲಿ ಗಿಗ್ ಆರ್ಥಿಕತೆಯಲ್ಲಿ ಇಂತಹ ಉದ್ಯೋಗಿಗಳ ಸಂಖ್ಯೆ 5.3 ಲಕ್ಷದಷ್ಟಿತ್ತು. ಇಂತಹ ಉದ್ಯೋಗಿಗಳ ಸಂಖ್ಯೆ ಈಗಾಗಲೇ ದುಪ್ಪಟ್ಟಾಗಿದೆ. ಮುಂದಿನ ವರ್ಷಗಳಲ್ಲಿ, ಇಂತಹ ಉದ್ಯೋಗಿಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಲಿದೆ ಎಂದು ನೀತಿ ಆಯೋಗದ ವರದಿಯಲ್ಲಿ ಅಂದಾಜಿಸಲಾಗಿದೆ.



ಕಡಿಮೆ ಕೌಶಲ ಸಾಕು

ಗಿಗ್ ಆರ್ಥಿಕತೆಯಲ್ಲಿ ಹೆಚ್ಚು ಕೌಶಲ ಬೇಡುವ ಉದ್ಯೋಗಗಳ ಪ್ರಮಾಣ ಕಡಿಮೆ ಇದೆ. ಸಾಧಾರಣ ಮತ್ತು ಮಧ್ಯಮ ಪ್ರಮಾಣದ ಕೌಶಲ ಅಗತ್ಯವಿರುವ ಉದ್ಯೋಗಗಳ ಪ್ರಮಾಣ ಹೆಚ್ಚು. ಜತೆಗೆ ಕಡಿಮೆ ಕೌಶಲ ಬೇಕಿರುವ ಉದ್ಯೋಗಗಳ ಪ್ರಮಾಣವೂ ಹೆಚ್ಚು. ಹೀಗಾಗಿಯೇ ಇಂತಹ ಆರ್ಥಿಕತೆಯಲ್ಲಿ ಉದ್ಯೋಗವಕಾಶ ಹೆಚ್ಚು ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

47% ಮಧ್ಯಮ ಕೌಶಲದ ಉದ್ಯೋಗಗಳು

31% ಕಡಿಮೆ ಕೌಶಲ ಬೇಡುವ ಉದ್ಯೋಗಗಳು


22% ಹೆಚ್ಚು ಕೌಶಲ ಬೇಡುವ ಉದ್ಯೋಗಗಳು

ಆಧಾರ: ನೀತಿ ಆಯೋಗದ 'ಭಾರತದ ಉದಯೋನ್ಮುಖ ಗಿಗ್ ಮತ್ತು ಪ್ಲಾಟ್‌ಫಾರಂ ಆರ್ಥಿಕತೆ' ವರದಿ

ಮಹಿಳೆ: ಉದ್ಯಮಿಯಾಗುವ ಬಯಕೆ


ತಾವು ಪ್ಲಾಟ್‌ಫಾರಂ ಆಧಾರಿತ ಗಿಗ್ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಲು ಪ್ರಥಮ ಕಾರಣ ಏನು ಎಂಬುದನ್ನು ಸಮೀಕ್ಷೆಯಲ್ಲಿ ಮಹಿಳೆಯರು ಬಿಚ್ಚಿಟ್ಟಿದ್ದಾರೆ.

ಉದ್ಯಮಿಯಾಗಬೇಕು ಎಂಬ ಹಂಬಲದೊಂದಿಗೆ ಗಿಗ್ ಉದ್ಯೋಗಕ್ಕೆ ಕಾಲಿರಿಸಿರುವುದಾಗಿ ಸಮೀಕ್ಷೆಯಲ್ಲಿ ಭಾಗಿಯಾದ ಮಹಿಳೆಯರ ಪೈಕಿ ಶೇ 25ರಷ್ಟು ಮಹಿಳೆಯರು ಹೇಳಿದ್ದಾರೆ. ಬೇರೆಲ್ಲ ಕಾರಣಗಳಿಗೆ ಹೋಲಿಸಿದರೆ, ಸ್ವಂತ ಉದ್ಯಮ ಕಟ್ಟುವ ಕನಸು ಕಟ್ಟಿಕೊಂಡು ಬಂದವರೇ ಅಧಿಕ ಪ್ರಮಾಣದಲ್ಲಿದ್ದಾರೆ ಎಂದು ವರದಿ ಅಭಿಪ್ರಾಯಪಟ್ಟಿದೆ. ಸದಾ ಚಟುವಟಿಕೆಯಿಂದ ಇರಬೇಕು ಎಂಬ ಕಾರಣ ನೀಡಿರುವವರ ಪ್ರಮಾಣ ಶೇ 13ರಷ್ಟಿದೆ. ಖಚಿತ ಆದಾಯ ಹಾಗೂ ಹೆಚ್ಚು ಹಣ ಗಳಿಸುವ ಉದ್ದೇಶ ಹೊಂದಿದವರು ನಂತರದ ಸ್ಥಾನಗಳಲ್ಲಿದ್ದಾರೆ. ಶೇ 39ರಷ್ಟು ಮಹಿಳೆಯರ ತಿಂಗಳ ವೇತನ ₹10,000–₹25,000ದ ಒಳಗಿದೆ. ಈ ಪೈಕಿ ಶೇ 48ರಷ್ಟು ಮಹಿಳೆಯರಿಗೆ ಗಿಗ್ ಉದ್ಯೋಗದಿಂದ ಬರುವ ವೇತನವೇ ಆದಾಯದ ಏಕೈಕ ಮೂಲವಾಗಿದೆ.



ಶೇ 90ರಷ್ಟು ಮಹಿಳೆಯರಿಗೆ ಅವಲಂಬಿತರು

ಗಿಗ್ ಉದ್ಯೋಗಗಳನ್ನು ಮಾಡುತ್ತಿರುವ ಮಹಿಳೆಯರ ಪೈಕಿ ಶೇ 90ರಷ್ಟು ಮಹಿಳೆಯರಿಗೆ ಇಬ್ಬರಿಂದ ಮೂವರು ಅವಲಂಬಿತರಿದ್ದಾರೆ. ಅವರನ್ನು ನೋಡಿಕೊಳ್ಳುವ ಹೊಣೆ ಈ ಮಹಿಳೆಯರ ಮೇಲಿದೆ. 18 ವರ್ಷ ಹಾಗೂ ಅದಕ್ಕಿಂತ ಕಡಿಮೆ ವಯಸ್ಸಿನ ಅವಲಂಬಿತರನ್ನು ಹೊಂದಿರುವ ಮಹಿಳೆಯರ ಪ್ರಮಾಣ ಶೇ 80ರಷ್ಟಿದೆ. ಈ ಪೈಕಿ ಶೇ 33ರಷ್ಟು ಮಹಿಳಾ ಉದ್ಯೋಗಿಗಳು ನಾಲ್ವರು ಅವಲಂಬಿತರನ್ನು ಸಲಹುತ್ತಿದ್ದಾರೆ. ಶೇ 27ರಷ್ಟು ಮಹಿಳೆಯರ ಮನೆಗಳಲ್ಲಿ ಮೂವರು ಅವಲಂಬಿತರಿದ್ದಾರೆ. ಶೇ 10ರಷ್ಟು ಮಹಿಳೆಯರ ಮನೆಗಳಲ್ಲಿ ಅವರ ವೇತನವನ್ನು ನಂಬಿಕೊಂಡ ಆರು ಅವಲಂಬಿತರು ಇದ್ದಾರೆ. ಇದರರ್ಥ, ಮಹಿಳೆಯರು ತಮ್ಮನ್ನು ನಂಬಿಕೊಂಡಿರುವ ಅವಲಂಬಿತರಿಗಾಗಿ ಗಿಗ್ ಉದ್ಯೋಗಗಳನ್ನು ಮಾಡಲೇಬೇಕಾದ ಅನಿವಾರ್ಯದಲ್ಲಿ ಇದ್ದಾರೆ ಎಂದಾಗಿದೆ.



ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 159

ಬ್ರಹ್ಮನಿಗೆ ದಕ್ಷಿಣೆ ಕೊಟ್ಟ ಶಿವ

ಸತೀದೇವಿಯೊಂದಿಗೆ ವಿವಾಹವಾದ ಬಳಿಕ ಲೌಕಿಕ ಮತ್ತು ವೈದಿಕಕರ್ಮಗಳಿಗೆ ಫಲದಾತೃವಾದ ಶಿವ ಪ್ರಸನ್ನನಾಗಿ ರಾರಾಜಿಸಿದ. ಅಲುತ್ತಾ ನಿಂತ ಬ್ರಹ್ಮನನ್ನು ನೋಡಿ 'ಎಲೈ ಬ್ರಹ್ಮನೇ, ನೀನು ವಿವಾಹಕರ್ಮವನ್ನು ಚೆನ್ನಾಗಿ ಮಾಡಿಸಿರುವೆ. ಇದರಿಂದ ನಾನು ತುಂಬಾ ಪ್ರಸನ್ನವಾಗಿರುವೆ. ಪುರೋಹಿತನಾದ ನಿನಗೆ ಏನು ದಕ್ಷಿಣೆಯನ್ನು ಕೊಡಲಿ ಹೇಳು' ಎಂದ.

'ಓ ದೇವದೇವ, ನೀನು ನನ್ನಲ್ಲಿ ಪ್ರಸನ್ನನಾಗಿದ್ದರೆ ಮತ್ತು ನಾನು ವರಕ್ಕೆ ಯೋಗ್ಯನಾಗಿದ್ದರೆ, ನೀನು ಈ ರೂಪದಿಂದಲೇ ಈ ವೇದಿಕೆಯಲ್ಲಿ ಸ್ಥಿರವಾಗಿ ನೆಲಸಿ, ಭಕ್ತರನ್ನನುಗ್ರಹಿಸಿ ಪಾಪಪರಿಶುದ್ಧರನ್ನಾಗಿ ಮಾಡಬೇಕು. ನಾನು ಇಲ್ಲೇ ಆಶ್ರಮವನ್ನು ಕಟ್ಟಿಕೊಂಡು, ನನ್ನ ಪಾಪನಾಶಕ್ಕಾಗಿ ತಪಸ್ಸನ್ನಾಚರಿಸುವೆ. ಚೈತ್ರ ಮಾಸದ ಶುಕ್ಲ ಪಕ್ಷದ ತ್ರಯೋದಶೀಯಂದು ಬರುವ ಭಾನುವಾರ ಪೂರ್ವಫಲ್ಗುಣಿ ನಕ್ಷತ್ರದಲ್ಲಿ, ಇಲ್ಲಿ ನೆಲೆಸಿರುವ ನಿನ್ನನ್ನು ಯಾರು ನೋಡುವರೋ, ಅವರ ಪಾಪಗಳು ನಷ್ಟವಾಗಿ, ಅವರಿಗೆ ಪುಣ್ಯ ಲಭಿಸಿ, ರೋಗಗಳೆಲ್ಲವೂ ನಾಶವಾಗಬೇಕು' ಎಂದು ಪ್ರಾರ್ಥಿಸಿದ.

ಬ್ರಹ್ಮನ ಕೋರಿಕೆಯನ್ನು ಅಂಗೀಕರಿಸಿದ ಮಹಾಶಿವ 'ಎಲೈ ವಿಧಿ, ನಿನ್ನ ಮಾತಿನಂತೆ ಈ ವೇದಿಕೆಯಲ್ಲಿ ಸಕಲ ಜನರಿಗೆ ಹಿತವನ್ನು ಮಾಡಲು ನನ್ನ ಪತ್ನಿಯಾದ ಈ ಸತಿಯೊಡನೆ ನೆಲಸಿರುವೆ' ಎಂದು ಹೇಳಿ, ವೇದಿಮಧ್ಯದಲ್ಲಿ ಪತ್ನಿಯೊಡನೆ ನಿಂತು ತಮ್ಮೀರ್ವರ ಸ್ವರೂಪವಾದ ಮೂರ್ತಿಯನ್ನು ಕಲ್ಪಿಸಿದ. ಬಳಿಕ ದಕ್ಷಬ್ರಹ್ಮನ ಅನುಮತಿಯನ್ನು ಪಡೆದು ಪತ್ನಿಯೊಡನೆ ಶಿವ ತನ್ನ ಸ್ಥಾನಕ್ಕೆ ತೆರಳಲುದ್ಯುಕ್ತನಾದ. ದೇವತೆಗಳು, ಮುನಿಗಳು, ಗಣಗಳೆಲ್ಲರೂ ಪರಮೇಶ್ವರನನ್ನು ನಮಸ್ಕರಿಸಿ ಭಕ್ತಿಯಿಂದ ಸ್ತೋತ್ರಮಾಡಿ ಜಯಘೋಷ ಮಾಡಿದರು.

ಇದಾದ ನಂತರ ದಕ್ಷನ ಅನುಮತಿಯನ್ನು ಪಡೆದು ಶಿವ ತನ್ನ ಪತ್ನಿ ಸತೀದೇವಿಯನ್ನು ನಂದಿಯ ಮೇಲೆ ಕೂರಿಸಿ, ತಾನೂ ಕುಳಿತು ಹಿಮಾಲಯದ ತಪ್ಪಲಲ್ಲಿರುವ ತನ್ನ ವಾಸಸ್ಥಾನಕ್ಕೆ ತೆರಳಿದ. ನಂದಿಯ ಮೇಲೆ ಶಂಕರನ ಪಕ್ಕದಲ್ಲಿ ಕುಳಿತು ಮಂದಹಾಸವನ್ನು ಬೀರುತ್ತಿದ್ದ ಸತೀದೇವಿಯು ಶೋಭಿಸುತ್ತಿದ್ದಳು.

ವಿಷ್ಣು ಮೊದಲಾದ ದೇವತೆಗಳು, ಮರೀಚಿ ಮೊದಲಾದ ಮುನಿಗಳು, ದಕ್ಷ ಮೊದಲಾದ ಗೃಹಸ್ಥರು ಮತ್ತು ಇತರರೆಲ್ಲರೂ ತುಂಬಾ ಸಂತೋಷಗೊಂಡರು. ಕೆಲವರು ವಾದ್ಯಗಳನ್ನು ಬಾರಿಸುತ್ತಲೂ, ಇನ್ನೂ ಕೆಲವರು ಶಿವನ ನಿರ್ಮಲವಾದ ಯಶಸ್ಸನ್ನು ಗಾನ ಮಾಡುತ್ತಲೂ, ಆ ಶಿವನನ್ನು ಹಿಂಬಾಲಿಸಿ ನಡೆದರು. ವಧು ಸತೀದೇವಿಯ ತಂದೆಯಾದ ದಕ್ಷಪ್ರಜಾಪತಿ ಅರ್ಧ ದಾರಿಯವರೆಗೆ ಶಿವನನ್ನು ಹಿಂಬಾಲಿಸಿ ಹೋದ. ಮಾರ್ಗ ಮಧ್ಯೆ ಶಿವನಿಂದ ಪ್ರೀತಿಪೂರ್ವಕವಾಗಿ ಬೀಳ್ಕೊಂಡು ತನ್ನ ಪರಿವಾರದೊಡನೆ ಮನೆಗೆ ಹಿಂದಿರುಗಿದ.

ಎಲ್ಲಾ ದೇವತೆಗಳೊಡನೆ ತನ್ನ ಪತ್ನಿಯಾದ ಸತೀದೇವಿಯೊಡನೆ ಹಿಮಾಲಯ ತಪ್ಪಲಲ್ಲಿರುವ ತನ್ನ ವಾಸಸ್ಥಾನಕ್ಕೆ ಬಂದ ಶಿವ, ಸಂತೋಷದಿಂದ ಎಲ್ಲಾ ದೇವತೆಗಳಿಗೂ ಮುನಿಗಳಿಗೂ ತುಂಬಾ ಗೌರವದಿಂದ ಸನ್ಮಾನಿಸಿದ. ನಂತರ ಅಪರೂಪದ ಕಾಣಿಕೆಗಳನ್ನು ಕೊಟ್ಟು, ಆದರದಿಂದ ಅವರನ್ನು ಬೀಳ್ಕೊಟ್ಟ. ವಿಷ್ಣು ಮೊದಲಾದ ದೇವತೆಗಳು ಶಂಕರನ ಅಪ್ಪಣೆಯನ್ನು ಪಡೆದು ತೆರಳಿದರು.

ಹಿಮಾಲಯದ ತಪ್ಪಲುಗಳಲ್ಲಿ ಶಿವನು ಸತಿಯೊಡನೆ ದಾಂಪತ್ಯಜೀವನವನ್ನು ಸುಖವಾಗಿ ಅನುಭವಿಸುತ್ತಾ ಸಂತೋಷದಿಂದ ವಿಹರಿಸಿದ ಎಂದು ಶಿವ-ಸತೀದೇವಿಯರ ವಿವಾಹಕಥೆಯನ್ನ ಹೇಳಿದ ಬ್ರಹ್ಮ 'ಎಲೈ ನಾರದ, ಶಿವನು ಸತೀದೇವಿ ಮತ್ತು ಗಣಗಳೊಡನೆ ತನ್ನ ಪೂರ್ವಸ್ಥಾನವಾದ ಕೈಲಾಸಪರ್ವತಕ್ಕೆ ತೆರಳಿ ಸುಖಿ ದಾಂಪತ್ಯಜೀವನ ನಡೆಸುತ್ತಿದ್ದ. ಸ್ವಾಯಂಭುವ ಮನ್ವಂತರದಲ್ಲಿ ನಡೆದ ಶಿವಸತೀದೇವಿಯರ ವಿವಾಹವೃತ್ತಾಂತವನ್ನು ಸಂಪೂರ್ಣವಾಗಿ ನಿನಗೆ ಹೇಳಿರುವೆ. ಈ ಕಥೆಯನ್ನು ಮದುವೆಯಂಥ ಶುಭ ಸಂದರ್ಭದಲ್ಲಿ ಮತ್ತು ಯಜ್ಞದ ಸಮಯದಲ್ಲಿ ಶಿವನನ್ನು ಪೂಜಿಸಿ ಶ್ರದ್ಧೆಯಿಂದ ಕೇಳಿದರೆ, ಆ ಮದುವೆ ಮತ್ತು ಯಜ್ಞವೂ ನಿರ್ವಿಘ್ನವಾಗಿ ನೆರವೇರಿ ಮಂಗಳವುಂಟಾಗುವುದು. ಕನ್ಯೆಯರು ಈ ಕಥೆಯನ್ನು ಕೇಳಿದರೆ ಸುಖ, ಸೌಭಾಗ್ಯಶೀಲತೆಗಳನ್ನು ಪಡೆದು ಉತ್ತಮ ಆಚಾರ ಮತ್ತು ಒಳ್ಳೆಯ ಗುಣಗಳುಳ್ಳವಳಾಗುವರು; ಸತ್ಪುತ್ರರನ್ನು ಪಡೆಯುವರು' ಎಂದು ಬ್ರಹ್ಮ ಹೇಳುವಲ್ಲಿಗೆ ಶಿವಪುರಾಣದ ರುದ್ರಸಂಹಿತೆಯಲ್ಲಿನ ಸತೀಖಂಡದ ಇಪ್ಪತ್ತನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'**70 ವರ್ಷಗಳಿಂದ** ಈವರೆಗೆ ಜಮ್ಮು ಕಾಶ್ಮೀರದ ಜನರು ಅನುಭವಿಸುತ್ತಿದ್ದ ಉಚಿತ ವಿದ್ಯುತ್ ಕೊಡುಗೆ ಕೊನೆಯಾಗಲಿದೆ. ಕಣಿವೆಯ ಜನರು ತಾವು ಬಳಸುವ ವಿದ್ಯುತ್‌ಗೆ ಇನ್ನುಮುಂದೆ ಹಣ ಪಾವತಿಸಬೇಕಿದೆ' ಎಂದು ಹೇಳುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿವೆ. ಮುಸ್ಲಿಮರನ್ನು ಗುರಿಯಾಗಿಸಿ ಕೆಲವು ಪೋಸ್ಟ್ ಹಾಕಲಾಗಿದೆ. ಲೆಫ್ಟಿನೆಂಟ್ ಜನರಲ್ ಮನೋಜ್ ಸಿನ್ಹಾ ಅವರು 'ಇನ್ನು ಮುಂದೆ ಉಚಿತ ವಿದ್ಯುತ್ ನೀಡುವುದಿಲ್ಲ' ಎಂದು ಹೇಳಿದ್ದಾರೆ ಎನ್ನಲಾದ ವರದಿಗಳಿದ್ದು, ಕಾಶ್ಮೀರದ ಕೆಲವು ಭಾಗಗಳಲ್ಲಿ ವಿದ್ಯುತ್ ಮೀಟರ್‌ಗಳನ್ನು ಜನರು ಒಡೆದುಹಾಕುತ್ತಿರುವ ವಿಡಿಯೊಗಳು ವೈರಲ್ ಆಗಿವೆ.



ಜಮ್ಮು ಕಾಶ್ಮೀರದ ಜನರಿಗೆ ಈವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿತ್ತು ಎಂಬ ವಾದ ಸತ್ಯಕ್ಕೆ ದೂರವಾದುದು ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ವೇದಿಕೆ ತಿಳಿಸಿದೆ. 1971ರ ಜಮ್ಮು ಕಾಶ್ಮೀರ ವಿದ್ಯುತ್ ಕಾಯ್ದೆಯ ಪ್ರಕಾರ, ಜನರು ವಿದ್ಯುತ್ ಶುಲ್ಕ ಪಾವತಿಸುತ್ತಿದ್ದಾರೆ. ಸಿನ್ಹಾ ಅವರು ತಮ್ಮ ಭಾಷಣದಲ್ಲಿ ಉಚಿತ ವಿದ್ಯುತ್ ಬಗ್ಗೆ ಪ್ರಸ್ತಾಪಿಸಿಲ್ಲ. ಆದರೆ ಮಾಧ್ಯಮಗಳು ಅವರ ಮಾತುಗಳನ್ನು ತಪ್ಪಾಗಿ ವರದಿ ಮಾಡಿವೆ. ವಿದ್ಯುತ್ ದರ ಏರಿಕೆ ಖಂಡಿಸಿ ಜನರು ಮೀಟರ್‌ಗಳನ್ನು ಒಡೆದು ಹಾಕಿದ್ದಾರೆಯೇ ವಿನಾ, ಉಚಿತ ವಿದ್ಯುತ್ ಸಿಗುತ್ತಿಲ್ಲ ಎಂಬ ಕಾರಣಕ್ಕೆ ಅಲ್ಲ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಗರ್ವಭಂಗ

ಗರುವಭಂಗವನಾಗಿಸಿದನು ಗರುಡಂಗೆ ಹರಿ|
ಮುರಿಯಿಸಿದನಂತೆ ಫಲುಗುಣನ ಹೆಮ್ಮೆಯನು||
ಕರುಬುವಂ ವಿಧಿ ಸೈಸನಾರೊಳಂ ದರ್ಪವನು|
ಶಿರವ ಬಾಗಿಹುದೆ ಸರಿ – ಮಂಕುತಿಮ್ಮ ||660||

ಪದ-ಅರ್ಥ: ಗರುವ = ಗರ್ವ, ಕರುಬು = ಹೊಟ್ಟೆಕಿಚ್ಚು, ಸೈಸನಾರೊಳಂ = ಸೈಸನು (ಸಹಿಸನು) + ಆರೊಳಂ (ಯಾರಲ್ಲಿಯೂ)

ವಾಚ್ಯಾರ್ಥ: ಹರಿ ಗರುಡನ ಗರ್ವಭಂಗ ಮಾಡಿದ ಮತ್ತು ಅರ್ಜುನನ ಹೆಮ್ಮೆಯನ್ನು ಮುರಿಸಿದ ವಿಧಿಗೆ ಅಸೂಯೆ. ಅವನು ಯಾರಲ್ಲಿಯೂ ದರ್ಪವನ್ನು ಸಹಿಸುವುದಿಲ್ಲ. ತಲೆಬಾಗಿ ವಿನಯದಿಂದಿರುವುದೇ ಸರಿಯಾದದ್ದು.

ವಿವರಣೆ: ಗರ್ವಬಂದರೆ ಅದಕ್ಕೆ ತಕ್ಕ ಶಾಸ್ತಿಯಾಗಿಯೇ ತೀರುತ್ತದೆ. ಎನ್ನುವುದಕ್ಕೆ ಎರಡು ನಿದರ್ಶನಗಳನ್ನು ಕಗ್ಗ ನೀಡುತ್ತದೆ. ಮೊದಲನೆಯದು ಗರುಡ ಗರ್ವಭಂಗ. ಇದಕ್ಕೆ ಎರಡು ಕಥೆಗಳಿವೆ. ತಾಯಿ ವಿನುತೆಯ ದಾಸ್ಯವನ್ನು ಪರಿಹರಿಸಲು ಗರುಡ ದೇವಲೋಕಕ್ಕೆ ಅಮೃತವನ್ನು ತರಲು ಹಾರಿದ. ಅಮೃತರಕ್ಷಕರನ್ನೆಲ್ಲ ಕೊಂದು ಎದುರಿಗೆ ಬಂದ ಇಂದ್ರನಿಗೂ ಮರ್ಯಾದೆ ಕೊಡದೆ ಅವನ ವಜ್ರಾಯುಧಕ್ಕೆ ಪ್ರತಿಯಾಗಿ ತನ್ನ ಗರಿಯೊಂದನ್ನು ಎಸೆದು ಗರ್ವವನ್ನು ಮೆರೆದ. ಆಗ ಇಂದ್ರನ ಕರೆಗೆ ಓಗೊಟ್ಟ ವಿಷ್ಣು ಅಲ್ಲಿಗೆ ಬಂದ. ವಿಷ್ಣುವಿನ ರೂಪ ಎಷ್ಟು ದೊಡ್ಡದಾಗಿತ್ತೆಂದರೆ, ಗರುಡ ಅವನ ಪಾದದ ಕಿರುಬೆರಳಿನಡಿ ಸಿಕ್ಕು ಒದ್ದಾಡಿ ಹೋದ. ಆಗ ಅವನಿಗೆ ವಿಷ್ಣುವಿನ ನಿಜವಾದ ಶಕ್ತಿಯ ಅರಿವಾಗುವುದರೊಂದಿಗೆ, ತನ್ನ ಅಶಕ್ತಿಯ ಅರಿವೂ ಆಗಿ ಗರ್ವಭಂಗವಾಯಿತು. ಮತ್ತೊಂದು ಕಥೆಯಲ್ಲಿ ಗರುಡ ಆದಿಶೇಷನ ಮಗ ಮಣಿನಾಗನನ್ನು ಕಚ್ಚಿಕೊಂಡು ಗೌತಮೀ ನದಿಯ ಮೇಲೆ ಹಾರುತ್ತಿದ್ದ. ಮಣಿನಾಗ ಶಿವನನ್ನು ಪ್ರಾರ್ಥಿಸಿ ಪ್ರಾಣಭಿಕ್ಷೆ ಬೇಡಿದ. ಶಿವ ಮಣಿನಾಗನನ್ನು ಬಿಡಲು ಗರುಡನಿಗೆ ಅಪ್ಪಣೆ ಮಾಡಿದ. ಗರ್ವಿತನಾದ ಗರುಡ ಅಪ್ಪಣೆಯನ್ನು ಲೆಕ್ಕಿಸದೇ ಹಾರಿದಾಗ ಶಿವ ಅವನ ಶಕ್ತಿಯನ್ನೆಲ್ಲ ಹೀರಿ ಅವನು ಮತ್ತೆ ಹಾರಲಾರದಂತೆ ಮಾಡಿದ. ಗರುಡ ವಿಷ್ಣುವಿನ ಮೊರೆಹೊಕ್ಕ. ಆದರೆ ವಿಷ್ಣು ಶಿವನಿಗೇ ಶರಣಾಗುವಂತೆ ಆಜ್ಞೆ ಮಾಡಿದ. ಗರುಡ ಶಿವನಿಗೆ ಶರಣಾದಾಗ, ಅವನಿಗೆ ಗೌತಮೀ ನದಿಯಲ್ಲಿ ಸ್ನಾನ ಮಾಡಲು ಹೇಳಿದ. ನಂತರ ಅವನ ಶಕ್ತಿಯನ್ನು ಮರಳಿ ಕೊಟ್ಟ. ಗೌತಮೀ ನದಿಯ ಆ ಭಾಗಕ್ಕೆ ಈಗಲೂ ಗರುಡ ತೀರ್ಥ ಎನ್ನುತ್ತಾರೆ.

ಅರ್ಜುನನಿಗೆ ಆಗಾಗ ಗರ್ವ ಬಂದೇ ಬರುತ್ತಿತ್ತು ಮತ್ತು ಕೃಷ್ಣ ಅದನ್ನು ಕರಗಿಸುತ್ತಿದ್ದ. ತನ್ನ ಬಿಲ್ಲುವಿದ್ಯೆಯ ಬಗ್ಗೆ ಅಪಾರ ಗರ್ವವಿದ್ದ ಅರ್ಜುನ ಕೃಷ್ಣನನ್ನು ಕೇಳಿದ, 'ಸಮುದ್ರ ದಾಟಲು ರಾಮ ಸೇತುವೆಗಾಗಿ ಯಾಕೆ ಕಷ್ಟಪಟ್ಟ? ನಾನಾಗಿದ್ದರೆ ಒಂದು ಕ್ಷಣದಲ್ಲಿ ಬಾಣದ ಸೇತುವೆ ಕಟ್ಟಿಬಿಡುತ್ತಿದ್ದೆ'. ಕೃಷ್ಣ ಕೇಳಿದ, 'ಹೌದಪ್ಪ, ಆದರೆ ಆ ಸೇತುವೆ ವಾನರರ ಭಾರವನ್ನು ತಾಳಬೇಕಲ್ಲ?' ಅರ್ಜುನ ಗಹಗಹಿಸಿ ನಕ್ಕ, 'ನಾನು ಕಟ್ಟಿದ ಸೇತುವೆಯ ಮೇಲೆ ಐರಾವತ ನಡೆದರೂ ಅಲುಗಾಡದು, ಇನ್ನು ವಾನರರದೇನು ತೂಕ?'. ಕೃಷ್ಣ ಆಂಜನೇಯನನ್ನು ಸ್ಮರಿಸಿದ. ಆತ ತಕ್ಷಣ ಬಂದ. ಅರ್ಜುನ ಕಟ್ಟಿದ ಬಾಣದ ಸೇತುವೆಯ ಮೇಲೆ ಪಾದದ ತುದಿಯನ್ನಿಟ್ಟ. ಅದು ಮುರಿದು ಪುಡಿಪುಡಿಯಾಯಿತು. ಅದರೊಂದಿಗೆ ಅರ್ಜುನನ ಗರ್ವವೂ ಮುರಿಯಿತು.

ಈ ಕಥೆಗಳನ್ನು ನೆನಪಿಸುವ ಕಗ್ಗದ ಆಶಯ ಒಂದೇ. ಗರ್ವ ಎಂದಿಗೂ ಒಳ್ಳೆಯದನ್ನು ಮಾಡದು. ಗರುಡ ಮತ್ತು ಅರ್ಜುನನಂಥ ಮಹಾಶಕ್ತಿಶಾಲಿಗಳಿಗೇ ಹೀಗೆ ಗರ್ವಭಂಗವಾಗಿರುವುದಾದರೆ, ನಮ್ಮಂಥ ಸಾಮಾನ್ಯರ ಪಾಡೇನು? ವಿಧಿಗೆ ಅಹಂಕಾರಿಗಳನ್ನು ಕಂಡರೆ ಬಲು ಅಸೂಯೆ. ಅವನು ಯಾರ ದರ್ಪವನ್ನೂ ಸಹಿಸಲಾರ. ಗರ್ವವನ್ನು ಪಡುವುದೇಕೆ? ಗರ್ವಕ್ಕೆ ಶಿಕ್ಷೆ ಪಡೆದು ಮುಖಭಂಗ ಮಾಡಿಸಿಕೊಳ್ಳುವುದೇಕೆ? ಆದ್ದರಿಂದ ವಿನಯದಿಂದ ತಲೆತಗ್ಗಿಸಿ ಬದುಕುವುದೇ ಸರಿಯಾದ ದಾರಿ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜೂನ್ 29, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಅಮಾವಾಸ್ಯೆ ಗಂ. 08-22 ನಕ್ಷತ್ರ: ಆದ್ರಾ ಗಂ. 22-08 ಯೋಗ: ವೃದ್ಧಿ ಗಂ. 08-50, ಕರಣ: ನಾಗವಾನ್ ಗಂ. 08-22, ಮಿಥುನ ಮಾಸದ 14ನೇ ದಿನ.
ರಾಹುಕಾಲ: ಮಧ್ಯಾಹ್ನ 12:00–01:30
ಸೂರ್ಯೋದಯ: 06-11 **ಸೂರ್ಯಾಸ್ತ:** 06-57
ಮುಸ್ಲಿಂ ದಿನಾಂಕ: 29 ಜುಲ್ಕಾಯದ್
ಅದೃಷ್ಟ ಸಂಖ್ಯೆ: 1, 5

ಮೇಷ: ವೃತ್ತಿರಂಗದಲ್ಲಿ ನಿಮ್ಮ ಸಾಮರ್ಥ್ಯ ಈ ದಿನ ಹೆಚ್ಚೇನು ಪ್ರಯೋಜಕಾರಿಯಾಗುವುದಿಲ್ಲ. ಆದ್ದರಿಂದ ಮನುಷ್ಯ ಪ್ರಯತ್ನದ ಜೊತೆಯಲ್ಲಿ ದೇವಬಲವು ಅಗತ್ಯ.

ವೃಷಭ: ನೌಕರಿಯಲ್ಲಿ ಇದ್ದಂತಹ ತೊಂದರೆ ನಿವಾರಣೆ ಆಗಲಿದೆ. ಸ್ತ್ರೀಯರಿಗೆ ಎಲ್ಲಾ ಕ್ಷೇತ್ರದಲ್ಲೂ ಗೌರವ, ಮನ್ನಣೆ ದೊರೆಕುವುದು. ಸಹೋದರರಲ್ಲಿನ ಭಿನ್ನಾಭಿಪ್ರಾಯ ಅನ್ಯರಿಗೆ ತಿಳಿಯುವಂಥಹ ಘಟನೆ ಈ ದಿನ ನಡೆಯಬಹುದು.

ಮಿಥುನ: ಆದಾಯಕ್ಕೆ ತಕ್ಕಂತೆ ಜೀವನವನ್ನು ರೂಪಿಸಿಕೊಳ್ಳುವಲ್ಲಿ ಸಮರ್ಥರಾಗುವಿರಿ. ತಂದೆ ಆರೋಗ್ಯ ತಪಾಸಣೆ ಬಗ್ಗೆ ಗಮನವಿರಲಿ. ಸಣ್ಣ ಉದ್ಯಮಿಗಳಿಗೆ ಹೆಚ್ಚು ವ್ಯಾಪಾರವಿರುವುದು ಜೊತೆಯಲ್ಲಿ ಕೆಲಸಗಾರರ ಸಹಕಾರ.

ಕರ್ಕಾಟಕ: ನಿಮ್ಮ ವೃತ್ತಿರಂಗದಲ್ಲಿ ಆಕಸ್ಮಿಕವಾಗಿ ನಡೆಯುವ ಕೆಲವು ಬದಲಾವಣೆಗಳಿಂದ ಹೆಚ್ಚಿನ ಅನುಕೂಲದ ವಾತಾವರಣ ಸೃಷ್ಟಿ. ಹಳೆಯ ಘಟನೆಗಳಿಂದ ಕಲಿತ ಪಾಠವು ಇಂದು ಉತ್ತಮವಾದ ತಿಳಿವಳಿಕೆಗೆ ಕಾರಣವಾಗುವುದು.

ಸಿಂಹ: ಕೆಲಸದಲ್ಲಿ ಹೆಚ್ಚಿನ ಹೊಣೆಗಾರಿಕೆ ನಿಮ್ಮದಾಗಲಿದೆ. ಸ್ವ ಸಾಮರ್ಥ್ಯವನ್ನು ಉತ್ತಮ ರೀತಿಯಲ್ಲಿ ಪ್ರದರ್ಶಿಸಿದ್ದಲ್ಲಿ, ಹುದ್ದೆಯನ್ನು ಭದ್ರಗೊಳಿಸಿಕೊಳ್ಳಬಹುದು.

ಕನ್ಯಾ: ಸಾಮಾಜಿಕವಾಗಿ ನಿಮ್ಮ ಗೌರವ ಬೆಳೆಯುವುದರ ಫಲವಾಗಿ ನಿಮಗೆ ಶತ್ರುಬಾಧೆ ಅಥವಾ ಅಸೂಯೆಯು ವೃದ್ಧಿಯಾಗಲಿದೆ. ಈ ದಿನ ಸುಗಂಧ ದ್ರವ್ಯಗಳ ಉಪಯೋಗದಿಂದ ಅಲರ್ಜಿ ಸಂಭವಿಸಬಹುದು.

ತುಲಾ: ನಿಮ್ಮ ಬದುಕಿನ ತಿರುವಿಗೆ ಸ್ನೇಹಿತರ ಕೊಡುಗೆ ಬಹಳವಾದುದು ಎಂದು ನೆನಪಿನಲ್ಲಿಟ್ಟುಕೊಂಡು ವ್ಯವಹರಿಸಿ. ಸಂಶೋಧಕರಿಗೆ ದೊಡ್ಡ ಮಟ್ಟದಲ್ಲಿ ವಸ್ತು ನಷ್ಟ ಆಗಬಹುದು ಅಥವಾ ಹಿನ್ನಡೆಯಾಗುತ್ತದೆ.

ವೃಶ್ಚಿಕ: ಸರ್ಕಾರಿ ಸಂಬಂಧಿತವಾದ ವ್ಯವಹಾರಗಳಿಂದ ನೀವು ನಿರೀಕ್ಷೆಗೂ ಮೀರಿದ ಲಾಭವನ್ನೂ ಅನುಭವಿಸುತ್ತೀರಿ. ನಿಮ್ಮ ಸುತ್ತಲ ಪರಿಸರವು ಸಂತಸದಾಯಕವಾಗಿರುತ್ತದೆ.

ಧನು: ಈ ದಿನ ಕಠಿಣ ಸನ್ನಿವೇಶಗಳು ಸಹಜ ಸ್ಥಿತಿಗೆ ಮರಳಲಿವೆ. ಕಮಿಷನ್ ಏಜೆಂಟರುಗಳಿಗೆ ಮತ್ತು ರಿಯಲ್ ಎಸ್ಟೇಟ್ ವ್ಯಾಪಾರಿಗಳಿಗೆ ಅಧಿಕ ಲಾಭ ಸಿಗುವುದು. ಇಂದು ಅದೃಷ್ಟ ನಿಮ್ಮ ಪಾಲಿಗಿದೆ.

ಮಕರ: ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಲು ಸೂಕ್ತ ಸಮಯವಲ್ಲ. ಯಾವುದೇ ಕೆಲಸ ಮಾಡುವ ಮುನ್ನ ಸಂಪೂರ್ಣವಾಗಿ ವಾಸ್ತವಾಂಶ ಅರಿತುಕೊಳ್ಳಿರಿ.

ಕುಂಭ: ಚಾಲಕ ವೃತ್ತಿಯವರು ನಿಯಮ ಬದ್ಧವಾಗಿ ವಾಹನ ಚಾಲನೆ ಮಾಡುವುದು ಒಳ್ಳೆಯದು. ಉದ್ಯಮಿಗಳಿಗೆ ವಿದೇಶ ವ್ಯವಹಾರಗಳಿಂದ ಹೆಚ್ಚಿನ ಲಾಭವು ಪ್ರಾಪ್ತಿಯಾಗುವುದು.


ಮೀನ: ಪದೇ ಪದೇ ತೋರಿಬರುವ ಋಣಾತ್ಮಕ ಚಿಂತನೆಯು ಕಾರ್ಯ ಸಾಧನೆಗೆ ಅಡ್ಡಿ ಮಾಡುತ್ತದೆ. ಆದರೆ ನಿಮ್ಮ ಪ್ರಾಮಾಣಿಕತೆಗೆ ತಕ್ಕ ಪ್ರತಿಫಲ ದೊರೆಯುವ ಸಮಯ ಬರುವುದು.

ಪದಬಂಧ 5003

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಇದು ಹೋಲಿಕೆಗೆ ಮೀರಿದ್ದು (5)
4.ಕೊನೆಗೆ ಬೆಲೆಯಿಟ್ಟಾಗ ಕಾಣಿಸಿದ ಹೊಟ್ಟೆ! (3)
5.ಸುತನಿಗಾಗಿ ಈ ತಿನ್ನುವ ಪದಾರ್ಥ! (3)
9.ಉದ್ಯಾನದಲ್ಲಿ ಈ ರೀತಿ ಬಂದಿರುವ ಚಿಂತನೆ! (2)
10.ತುತ್ತೂರಿ ಊದುತ್ತಾ ನಡೆಸಿರುವ ಒಳಸಂಚು! (3)
11.ಹೊರಗೆ ಆವರಿಸಿರುವ ಧೂಮ! (2)
12.ಕೊನೆಗೆ ಮಗ ತಿರುಗಿದಾಗ ವೇದ ಕಾಣುವುದಲ್ಲಾ! (3)
15.ಗಮಾರನು ನೋಡುತ್ತಿರುವ ಷಹರು (3)
16.ರಜಾ ಬಂದಾಗ ಆಚರಿಸಿದ ಬೆಳ್ಳಿ ಹಬ್ಬ (5)

ಮೇಲಿಂದ ಕೆಳಕ್ಕೆ
1.ಮಾನಿನಿಯ ಬಗ್ಗೆ ಸಂದೇಹ! (3)
2.ಉರಗದ ಎದೆ (2)
3.ತರಗತಿಯಲ್ಲಿ ನೆರೆದಿರುವ ಗುಂಪು ಕಾಣುತ್ತಿದೆಯೇ? (2)
4.ಪದ್ಯಗಳನ್ನೆಲ್ಲಾ ಕಲಿಸಿರುವ ಶಿಕ್ಷಕಿ (5)
6.ಕೊಳ್ಳೆಹೊಡೆಯುವವ ಇಲ್ಲಿ ಬಂದಿದ್ದಾನಲ್ಲಾ? (5)
7.ಪಿತನ ಹತ್ತಿರವಿರುವ ಕ್ಷೌರಿಕ (3)
8.ಈ ಪರಿ ಕಾಣಿಸುತ್ತಿರುವ ಜಾತ್ರೆ (3)
13.ಮಧುರ ಫಲ ನೀಡುತ್ತಿರುವ ವೃಕ್ಷ (2)
14.ಆನಂದ ಹೀಗೆ ಬಂದಿದೆ (3)
15.ವನ ಹೊಸದಾಗಿ ಕಾಣುತ್ತಿದೆಯಲ್ಲಾ? (2)



5002ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಗೊನೆ 3.ಹರಾಮಿ 5.ಪುರುಷ 7.ನವಜಾತ 9.ಅಸಲು 10.ದಾಂಗುಡಿ 11.ಕರ್ನಾಟಕ 13.ಜಗತಿ 15.ರಿವಾಜು 16.ಟಕ್ಕ

ಮೇಲಿಂದ ಕೆಳಕ್ಕೆ: 2.ನೆನಪು 3.ಹರುಷ 4.ಮಿಥುನ 6.ರುಮಾಲು 8.ತಕ್ಕಡಿ 9.ಅಳ್ಳಕ 10.ದಾಂಡಿಗ 12.ಕಸ್ತೂರಿ 13.ಜಹಜು 14.ತಿಕ್ಕಾಟ

ಸುಡೊಕು 5389

9				5			4	3
	5		3		9			1
	4			1				
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5388 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಎಐಎಡಿಎಂಕೆ ಹಿಡಿತಕ್ಕಾಗಿ ನಿಲ್ಲದ ಹೋರಾಟ

ಚೆನ್ನೈ (ಪಿಟಿಐ): ತಮಿಳುನಾಡಿನ ಪ್ರಮುಖ ವಿರೋಧ ಪಕ್ಷ ಎಐಎಡಿಎಂಕೆಯಲ್ಲಿ ಪಕ್ಷದ ಮೇಲಿನ ಹಿಡಿತಕ್ಕಾಗಿ ಇಬ್ಬರು ನಾಯಕರ ನಡುವೆ ಆಂತರಿಕ ಕಚ್ಚಾಟ ಸುದೀರ್ಘಾವಧಿಗೆ ಮುಂದುವರಿಯುವ ಲಕ್ಷಣ ಕಾಣಿಸುತ್ತಿವೆ. ಪಕ್ಷದಲ್ಲಿ ಮೂಲೆ ಗುಂಪಾಗಿರುವ ನಾಯಕ ಒ. ಪನ್ನೀರ್‌ಸೆಲ್ವಂ (ಒಪಿಎಸ್) ಚುನಾವಣಾ ಆಯೋಗದ ಕದ ತಟ್ಟಿದ್ದು, ಮತ್ತೊಬ್ಬ ಪ್ರಭಾವಿ ನಾಯಕ ಎಡಪ್ಪಾಡಿ ಕೆ. ಪಳನಿಸ್ವಾಮಿ ಬಣವು ಪಕ್ಷದ ಹಿಡಿತ ಬಿಟ್ಟುಕೊಡದಿರಲು ಪಟ್ಟುಹಿಡಿದಿದೆ.

ಇದು ಮುಂದುವರಿದರೆ ಆಡಳಿತರೂಢ ಡಿಎಂಕೆ ಮತ್ತು ಅದರ ಮಿತ್ರ ಪಕ್ಷಗಳಿಗೆ ಹೆಚ್ಚು ಅನುಕೂಲವಾಗಿ ಪರಿಣಮಿಸಬಹುದು. ಹಾಗೆಯೇ ಎಐಎಡಿಎಂಕೆ ಪರವಿರುವ ಮತಗಳು ಮತ್ತು ಡಿಎಂಕೆ ವಿರುದ್ಧವಿರುವ ಮತಗಳು ವಿಘಟನೆಯಾಗುವ ಸಾಧ್ಯತೆಯೂ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ.

ವಿವಾದಾತ್ಮಕ ಪೋಸ್ಟ್ ಹಾಕಿದ್ದಕ್ಕೆ ಪ್ರತೀಕಾರ ಶಂಕೆ: ಹತ್ಯೆಯ ವಿಡಿಯೊ ಹರಿಬಿಟ್ಟ ಆರೋಪಿಗಳು

ಕತ್ತು ಸೀಳಿ ಹತ್ಯೆ: ಉದಯಪುರ ಉದ್ವಿಗ್ನ

ಜೈಪುರ (ಪಿಟಿಐ): ಸಾಮಾಜಿಕ ಮಾಧ್ಯಮಗಳಲ್ಲಿ ವಿವಾದಾತ್ಮಕ ಪೋಸ್ಟ್‌ವೊಂದನ್ನು ಹಾಕಿಕೊಂಡಿದ್ದರು ಎಂಬ ಕಾರಣಕ್ಕೆ ರಾಜಸ್ಥಾನದ ಉದಯಪುರದಲ್ಲಿ ಟೈಲರ್ ಕನ್ಹಯ್ಯ ಲಾಲ್ ಎಂಬುವವರನ್ನು ಇಬ್ಬರು ದುಷ್ಕರ್ಮಿಗಳು ಮಂಗಳವಾರ ಕತ್ತು ಸೀಳಿ ಹತ್ಯೆ ಮಾಡಿದ್ದಾರೆ. ಈ ಘಟನೆಯಿಂದ ರಾಜಸ್ಥಾನದ ಜತೆಗೆ ದೇಶದ ವಿವಿಧೆಡೆ ಪ್ರತಿಭಟನೆಗಳು ಆರಂಭವಾಗಿದೆ.



ಕನ್ಹಯ್ಯ ಲಾಲ್

ಘಟನೆ ಸಂಬಂಧ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಇವರಲ್ಲಿ ಒಬ್ಬನನ್ನು ರಿಯಾಜ್ ಎಂದು ಗುರುತಿಸಲಾಗಿದೆ.

ಆರೋಪಿ ರಿಯಾಜ್, ಕನ್ನಯ್ಯ ಲಾಲ್ ಅವರ ಕತ್ತನ್ನು ಕತ್ತರಿಸಿದ್ದು, ಮತ್ತೊಬ್ಬ ಆರೋಪಿ ಈ ದೃಶ್ಯವನ್ನು ತನ್ನ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದಾನೆ. ಈ ಕೊಲೆಯನ್ನು ತಾವೇ ಮಾಡಿದ್ದಾಗಿ ಹೇಳಿರುವ ವಿಡಿಯೊವೊಂದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದಾರೆ.

ಈ ಭೀಕರ ಘಟನೆಯ ದೃಶ್ಯಾವಳಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದಂತೆಯೇ ಉದಯಪುರದಲ್ಲಿ ಪ್ರತಿಭಟನೆ ಭುಗಿಲೆದ್ದಿತು. ನಗರದಲ್ಲಿ ಸದ್ಯ ಉದ್ವಿಗ್ನ ಪರಿಸ್ಥಿತಿ ನೆಲೆಸಿದೆ.

ಘಟನೆಯನ್ನು ಖಂಡಿಸಿರುವ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಶಾಂತಿ ಕಾಪಾಡಲು ಮನವಿ ಮಾಡಿದ್ದಾರೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.

'ರಾಜಸಮಂದ್ ಜಿಲ್ಲೆ ಭೀಮ್ ಪ್ರದೇಶದಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಮುಖದ ಗುರುತು ತಿಳಿಯದಂತೆ ಹೆಲ್ಮೆಟ್ ಧರಿಸಿ, ಬೈಕ್‌ನಲ್ಲಿ ಪರಾರಿಯಾಗಲು ಯತ್ನಿಸಿದ್ದರು. ಉಳಿದ ಆರೋಪಿಗಳ ಪತ್ತೆಗೆ 10 ತಂಡಗಳನ್ನು ನಿಯೋಜಿಸಲಾಗಿದೆ' ಎಂದು ರಾಜಸಮಂದ್ ಪೊಲೀಸ್ ವರಿಷ್ಠಾಧಿಕಾರಿ ಸುಧೀರ್ ಚೌದರಿ ಹೇಳಿದ್ದಾರೆ.

'ರಾಜ್ಯದಲ್ಲಿ ಟೈಲರ್ ಹತ್ಯೆಗೆ ಕಾಂಗ್ರೆಸ್ ಸರ್ಕಾರದ ಓಲೈಕೆ ನೀತಿ ಅನುಸರಿಸುತ್ತಿರುವುದೇ ಕಾರಣ' ಎಂದು ಆರೋಪಿಸಿರುವ ರಾಜಸ್ಥಾನ ಬಿಜೆಪಿ ಘಟಕದ ಮುಖ್ಯಸ್ಥ ಸತೀಶ್ ಪೂನಿಯಾ, 'ಪಿಎಫ್‌ಐ ಮತ್ತು ಇತರೆ ಉಗ್ರಗಾಮಿ ಸಂಘಟನೆಗಳಿಗೆ ರಾಜ್ಯ ಸರ್ಕಾರ ರಕ್ಷಣೆ ನೀಡುತ್ತಿದೆ. ಸೂಕ್ತ ತನಿಖೆ ನಡೆಸಿದರೆ ಉಗ್ರ ಸಂಘಟನೆ ಜತೆ ಸಂಪರ್ಕ ಹೊಂದಿರುವುದು ಗೊತ್ತಾಗುತ್ತದೆ' ಎಂದು ಹೇಳಿದ್ದಾರೆ.

'ಜೂನ್ 17ರಂದು ಆರೋಪಿಗಳು ಕನ್ಹಯ್ಯ ಲಾಲ್‌ಗೆ ಬೆದರಿಕೆ ಹಾಕಿದ್ದರು. ಈತ ಪೊಲೀಸ್ ಭದ್ರತೆ ಒದಗಿಸುವಂತೆ ಮನವಿ ಮಾಡಿದ್ದರೂ ನೀಡಿರಲಿಲ್ಲ. ಇದು ಸರ್ಕಾರದ ನಿರ್ಲಕ್ಷ್ಯ ತೋರಿಸುತ್ತದೆ. ರಾಜ್ಯದ ಹಲವೆಡೆ ಹಿಂದೂಗಳ ಮೇಲೆ ದಾಳಿ ನಡೆಸಿ ಹತ್ಯೆ ಮಾಡಲಾಗುತ್ತಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಉದ್ವಿಗ್ನ ವಾತಾವರಣ ಹಿನ್ನೆಲೆಯಲ್ಲಿ ಉದಯಪುರದಲ್ಲಿ ಮಂಗಳವಾರ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಯಿತು ಪಿಟಿಐ ಚಿತ್ರ

ಏಳು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕರ್ಫ್ಯೂ

ಟೈಲರ್ ಹತ್ಯೆ ಹಿನ್ನೆಲೆಯಲ್ಲಿ ಉದಯಪುರದ ಏಳು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಂಗಳವಾರ ರಾತ್ರಿ 8 ರಿಂದ ಮುಂದಿನ ಆದೇಶವರೆಗೆ ಕರ್ಫ್ಯೂ ಜಾರಿಗೊಳಿಸಲಾಗಿದೆ. ನಗರದಲ್ಲಿ ಮೊಬೈಲ್ ಇಂಟರ್‌ನೆಟ್ ಸ್ಥಗಿತಗೊಳಿಸಲಾಗಿದೆ.

'ಶಾಂತಿ ಕಾಪಾಡುವ ಉದ್ದೇಶದಿಂದ ಕರ್ಫ್ಯೂ ಜಾರಿಗೊಳಿಸಲಾಗಿದ್ದು, ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಮತ್ತು ಪರೀಕ್ಷಾ ಸಿಬ್ಬಂದಿ ಹಾಗೂ ಅಗತ್ಯ ಸೇವೆಗಳಿಗೆ ವಿನಾಯಿತಿ ನೀಡಲಾಗಿದೆ' ಎಂದು ಉದಯಪುರ ಕಲೆಕ್ಟರ್ ತಾರಚಂದ್ ಮೀನಾ ಆದೇಶದಲ್ಲಿ ತಿಳಿಸಿದ್ದಾರೆ.

'ರಾಜ್ಯಾದಾದ್ಯಂತ ಕಟ್ಟೆಚ್ಚರ ವಹಿಸುವಂತೆ ಐಜಿಪಿ ಮತ್ತು ಎಸ್‌ಪಿಗಳಿಗೆ ಸೂಚನೆ ನೀಡಲಾಗಿದ್ದು, ಮುನ್ನೆಚ್ಚರಿಕೆಯಾಗಿ ಗಸ್ತು ಪಡೆ ಹೆಚ್ಚಿಸಬೇಕು' ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿ ಹವಾ ಸಿಂಗ್ ಹೇಳಿದ್ದಾರೆ.

ಟೈಲರ್ ಹತ್ಯೆಯನ್ನು ಭಯೋತ್ಪಾದನಾ ಕೃತ್ಯ ಎಂದು ಕೇಂದ್ರ ಸರ್ಕಾರ ಪರಿಗಣಿಸಿದ್ದು, ತನಿಖೆಗೆ ಎನ್‌ಐಎ ತಂಡವನ್ನು ಉದಯ್‌ಪುರಕ್ಕೆ ಕಳುಹಿಸಿದೆ.



ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೆ.ಸಿ.ವೇಣುಗೋಪಾಲ್, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ರಣದೀಪ್ ಸುರ್ಜೇವಾಲ ಇದ್ದರು.

ಮುಸ್ಲಿಂ ಮತ 'ಕೈ' ತಪ್ಪುವ ಆತಂಕ

ನವದೆಹಲಿ: 2018ರ ವಿಧಾನಸಭೆ ಚುನಾವಣೆಯಲ್ಲಿ ಮುಸ್ಲಿಂ ಮತದಾರರು ಕಾಂಗ್ರೆಸ್ ಕೈ ಹಿಡಿದಿದ್ದರು. ಆದರೆ, ಕರ್ನಾಟಕದಲ್ಲಿ ಇತ್ತೀಚೆಗೆ ನಡೆದ ವಿದ್ಯಮಾನಗಳ ಬಗ್ಗೆ ಪಕ್ಷದ ಕೆಲವು ನಾಯಕರು ತಾಳಿರುವ ಮೌನದಿಂದಾಗಿ ಅಲ್ಪಸಂಖ್ಯಾತರು ದೂರವಾಗುತ್ತಿದ್ದಾರೆ ಎಂಬ ಆತಂಕವನ್ನು ಕಾಂಗ್ರೆಸ್ ಹೈಕಮಾಂಡ್ ವ್ಯಕ್ತಪಡಿಸಿದೆ.

ಕರ್ನಾಟಕ ವಿಧಾನಸಭೆ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವ ಸಲುವಾಗಿ ಮಂಗಳವಾರ ರಾಹುಲ್ ಗಾಂಧಿ ನಿವಾಸದಲ್ಲಿ ಸಭೆ ನಡೆಯಿತು. ಸುಮಾರು ಐದು ಗಂಟೆಗಳ ವರೆಗೆ ನಡೆದ ಸಭೆಯಲ್ಲಿ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಚುನಾವಣಾ ನೀತಿ ತಂತ್ರಜ್ಞ ಸುನೀಲ್ ಕನುಗೋಲು ಪಾಲ್ಗೊಂಡಿದ್ದರು.

ಈ ಸಭೆಯಲ್ಲಿ, ಕೆಪಿಸಿಸಿ ಸಾಮರ್ಥ್ಯ, ದೌರ್ಬಲ್ಯಗಳ ಜತೆಗೆ ನಾಯಕತ್ವದಲ್ಲಿನ ಒಡಕುಗಳ ಬಗ್ಗೆಯೂ ರಾಹುಲ್ ಪ್ರಸ್ತಾಪಿಸಿದರು.

'ಸಿದ್ದರಾಮಯ್ಯ ಗುಂಪು ಹಾಗೂ ಶಿವಕುಮಾರ್ ಗುಂಪು ಸಮನ್ವಯದಿಂದ ಕಾರ್ಯನಿರ್ವಹಿಸುತ್ತಿಲ್ಲ. ಮುಖ್ಯಮಂತ್ರಿ ಗಾದಿಗಾಗಿ ಇಬ್ಬರೂ ಜಿದ್ದಿಗೆ ಬಿದ್ದಿದ್ದಾರೆ' ಎಂದು ಬಿಜೆಪಿ ಬಿಂಬಿಸುತ್ತಿದೆ. ಇದು ಮತದಾರರ ಮೇಲೆ ಪರಿಣಾಮ ಬೀರುತ್ತಿದೆ. ಇದಕ್ಕೆ ಆಸ್ಪದ ನೀಡದಂತೆ ಇಬ್ಬರು ನಾಯಕರು ಸಮನ್ವಯದಿಂದ ಕಾರ್ಯನಿರ್ವಹಿಸಿ ಪಕ್ಷವನ್ನು ಅಧಿಕಾರಕ್ಕೆ ತರಬೇಕು' ಎಂಬುದಾಗಿ ರಾಹುಲ್ ಸೂಚಿಸಿದ್ದಾಗಿ ಮೂಲಗಳು ಹೇಳಿವೆ.

> **ರಾಜ್ಯ ರಾಜಕಾರಣದ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ. ಬಿಜೆಪಿಯ ತಂತ್ರಗಳಿಗೆ ಪ್ರತಿ ತಂತ್ರ ರೂಪಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ.**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಕರ್ನಾಟಕದ ರಾಜಕೀಯ ಸ್ಥಿತಿಗತಿ ಕುರಿತು ಎಐಸಿಸಿ ನಡೆಸಿದ ಸಮೀಕ್ಷೆಯಲ್ಲಿ ಪಕ್ಷದ ಪರ ಜನಾಭಿಪ್ರಾಯ ವ್ಯಕ್ತವಾಗಿದೆ. ಅದೇ ವೇಳೆಗೆ, ಮುಸ್ಲಿಂ ಸಮುದಾಯ ಪಕ್ಷದಿಂದ ದೂರ ಸರಿಯುತ್ತಿರುವ ಬಗ್ಗೆಯೂ ಸಮೀಕ್ಷೆ ಉಲ್ಲೇಖಿಸಿದೆ. ವರದಿಯನ್ನು ಸಭೆಯಲ್ಲಿ ಸುನೀಲ್ ಮಂಡಿಸಿದರು.

'ಶೇ 20ರಷ್ಟು ಮುಸ್ಲಿಂ ಮತಗಳು ಕಾಂಗ್ರೆಸ್‌ನ ಕೈ ತಪ್ಪಬಹುದು. ಹಿಜಾಬ್ ವಿವಾದ, ಜಾತ್ರೆಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧದಂತಹ ವಿಚಾರದಲ್ಲಿ ಅಲ್ಪಸಂಖ್ಯಾತರ ಪರವಾಗಿ ಗಟ್ಟಿ ಧ್ವನಿ ಎತ್ತಲಿಲ್ಲ. ಇದರಿಂದಾಗಿ, ಮುಸ್ಲಿಂ ಸಮುದಾಯದ ಒಲವು ಎಸ್‌ಡಿಪಿಐ ಹಾಗೂ ಎಐಎಂಐಎ ಪರ ವ್ಯಕ್ತವಾಗುತ್ತಿದೆ' ಎಂದು ಸಮೀಕ್ಷೆ ಹೇಳಿದೆ.

'ರಾಜ್ಯಸಭೆ ಚುನಾವಣೆಯಲ್ಲಿ ಜೈರಾಂ ರಮೇಶ್ ಅವರನ್ನು ಮೊದಲ ಅಭ್ಯರ್ಥಿಯಾಗಿಸುವ ಬದಲು ಮನ್ಸೂರ್ ಅಲಿಖಾನ್ ಅವರನ್ನು ಆದ್ಯತೆಯ ಅಭ್ಯರ್ಥಿಯಾಗಿ ಕಣಕ್ಕೆ ಇಳಿಸಬೇಕಿತ್ತು ಎಂಬ ಬಗ್ಗೆಯೂ ಚರ್ಚೆ ನಡೆಯಿತು' ಎಂದು ಮೂಲಗಳು ಹೇಳಿವೆ.

ರಾಜ್ಯಸಭೆ: ಶೇ 31 ಸದಸ್ಯರಿಗೆ ಕ್ರಿಮಿನಲ್ ಹಿನ್ನೆಲೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭೆಯ ಶೇ 31ರಷ್ಟು ಸದಸ್ಯರು ಕ್ರಿಮಿನಲ್ ಹಿನ್ನೆಲೆ ಹೊಂದಿದ್ದಾರೆ ಎಂಬುದು ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ (ಎಡಿಆರ್) ನಡೆಸಿದ ವಿಶ್ಲೇಷಣಾ ವರದಿಯಿಂದ ಗೊತ್ತಾಗಿದೆ.

ರಾಜ್ಯಸಭೆಯ 233 ಸದಸ್ಯರ ಪೈಕಿ 226 ಸದಸ್ಯರ ಅಪರಾಧ ಹಿನ್ನೆಲೆ, ಹಣಕಾಸು, ಶಿಕ್ಷಣ, ಲಿಂಗ ಹಾಗೂ ಇತರ ವಿಷಯಗಳ ಬಗ್ಗೆ ಎಡಿಆರ್ ಈ ವಿಶ್ಲೇಷಣೆ ನಡೆಸಿದೆ.

ಬಿಜೆಪಿಯ 20, ಕಾಂಗ್ರೆಸ್‌ನ 12, ಆರ್‌ಜೆಡಿಯ ಆರು ಸದಸ್ಯರ ಪೈಕಿ 5 ಸದಸ್ಯರು ಕ್ರಿಮಿನಲ್ ಹಿನ್ನೆಲೆ ಹೊಂದಿದ್ದಾರೆ. ಉತ್ತರ ಪ್ರದೇಶದಿಂದ ಆಯ್ಕೆಯಾದ 7, ಮಹಾರಾಷ್ಟ್ರದಿಂದ ಆಯ್ಕೆಯಾದ 12, ತಮಿಳುನಾಡಿನಿಂದ ಆಯ್ಕೆಯಾದ 6, ಕೇರಳದ ಆರು ಸದಸ್ಯರು, ಬಿಹಾರದ 10 ಸದಸ್ಯರು ಇದರಲ್ಲಿ ಸೇರಿದ್ದಾರೆ.

ಇಬ್ಬರು ಸದಸ್ಯರು ಕೊಲೆ ಪ್ರಕರಣಗಳಲ್ಲಿ, ನಾಲ್ವರು ಕೊಲೆ ಯತ್ನ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ರಾಜಸ್ಥಾನದಿಂದ ಆಯ್ಕೆಯಾಗಿರುವ ಕಾಂಗ್ರೆಸ್‌ನ ಕೆ.ಸಿ. ವೇಣುಗೋಪಾಲ್ ಅತ್ಯಾಚಾರ ಪ್ರಕರಣದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

86 ಸದಸ್ಯರು ₹ 10 ಕೋಟಿಗಿಂತ ಹೆಚ್ಚು ಆಸ್ತಿ ಹೊಂದಿದ್ದಾರೆ. 34 ಸದಸ್ಯರು ₹5 ಕೋಟಿಗಿಂತ, 77 ಸದಸ್ಯರು ₹1 ಕೋಟಿಗಿಂತ ಹೆಚ್ಚು ಆಸ್ತಿ ಹೊಂದಿದ್ದಾರೆ. ಕೋಟಿ ವೀರರ ಪೈಕಿ 74 ಸದಸ್ಯರು ಬಿಜೆಪಿಗೆ ಸೇರಿದವರು. 29 ಸದಸ್ಯರು ಕಾಂಗ್ರೆಸ್‌ನವರು.

ಟಿಆರ್‌ಎಸ್ ಪಕ್ಷದ ಏಳು ಸದಸ್ಯರ ಸರಾಸರಿ ಆಸ್ತಿ ₹799 ಕೋಟಿ. ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಸದಸ್ಯರ 9 ಸದಸ್ಯರ ಸರಾಸರಿ ಆಸ್ತಿ ₹395 ಕೋಟಿ ಇದೆ. ಎನ್‌ಸಿಪಿಯ ನಾಲ್ವರು ಸದಸ್ಯರ ಸರಾಸರಿ ಆಸ್ತಿ ₹118 ಕೋಟಿ. ಕಾಂಗ್ರೆಸ್ ಸದಸ್ಯರ ಸರಾಸರಿ ಆಸ್ತಿ ₹50 ಕೋಟಿ ಇದ್ದರೆ, ಬಿಜೆಪಿ ಸದಸ್ಯರದ್ದು ₹27 ಕೋಟಿ ಇದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಅಂಕಿ-ಅಂಶಗಳು

71
ಸದಸ್ಯರಿಗೆ ಕ್ರಿಮಿನಲ್ ಹಿನ್ನೆಲೆ

37 (ಶೇ 16)
ಸದಸ್ಯರ ವಿರುದ್ಧ ಗಂಭೀರವಾದ ಕ್ರಿಮಿನಲ್ ಪ್ರಕರಣಗಳು ಇವೆ

197 (ಶೇ 87)
ಸದಸ್ಯರು ಕೋಟಿ ವೀರರು

₹79.54 ಕೋಟಿ
ಪ್ರತಿ ಸದಸ್ಯರ ಸರಾಸರಿ ಆಸ್ತಿ

ಜುಬೈರ್ 4 ದಿನ ಪೊಲೀಸ್ ವಶಕ್ಕೆ

ನವದೆಹಲಿ (ಪಿಟಿಐ): ಹಿಂದೂ ದೇವರ ವಿರುದ್ಧ 2018ರಲ್ಲಿ ಆಕ್ಷೇಪಾರ್ಹ ಟ್ವೀಟ್ ಮಾಡಿ, ಧಾರ್ಮಿಕ ಭಾವನೆಗಳಿಗೆ ಚ್ಯುತಿ ತಂದ ಪ್ರಕರಣದಲ್ಲಿ ಬಂಧಿಸಲಾಗಿರುವ ಆಲ್ಟ್ ನ್ಯೂಸ್ ಸಹ ಸಂಸ್ಥಾಪಕ, ಪತ್ರಕರ್ತ ಮಹಮ್ಮದ್ ಜುಬೈರ್ ಅವರನ್ನು ಹೆಚ್ಚಿನ ವಿಚಾರಣೆಗಾಗಿ ನಾಲ್ಕು ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ನೀಡಿ ಚೀಫ್ ಮೆಟ್ರೊಪಾಲಿಟನ್ ನ್ಯಾಯಾಲಯ ಮಂಗಳವಾರ ಆದೇಶ ಹೊರಡಿಸಿದೆ.

ದೆಹಲಿ ವಿಶೇಷ ಘಟಕದ ಪೊಲೀಸರು ಜುಬೈರ್ ಅವರನ್ನು ಸೋಮವಾರ ಬಂಧಿಸಿದ್ದರು. ಒಂದು ದಿನದ ಕಸ್ಟಡಿ ವಿಚಾರಣೆ ಅವಧಿ ಮುಗಿದ ಹಿನ್ನೆಲೆಯಲ್ಲಿ ಚೀಫ್ ಮೆಟ್ರೊಪಾಲಿಟನ್ ನ್ಯಾಯಾಲಯದ ನ್ಯಾಯಾಧೀಶರಾದ ಸ್ನಿಗ್ಧ ಸರ್ವಾರಿಯಾ ಅವರ ಎದುರು ಮಂಗಳವಾರ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಐದು ದಿನಗಳ ಕಾಲ ಕಸ್ಟಡಿಗೆ ನೀಡುವಂತೆ ಪೊಲೀಸರು ಮನವಿ ಮಾಡಿದ್ದರು.

ನಾಲ್ಕು ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿ ಹೊರಡಿಸಿರುವ ಆದೇಶವನ್ನು ಬುಧವಾರ ನ್ಯಾಯಾಲಯದಲ್ಲಿ ಪ್ರಶ್ನಿಸುವುದಾಗಿ ಜುಬೈರ್ ಪರ ವಕೀಲರು ತಿಳಿಸಿದ್ದಾರೆ.

ಸಂಪಾದಕರ ಒಕ್ಕೂಟ ಖಂಡನೆ: ಆಲ್ಟ್ ನ್ಯೂಸ್ ಸಹ ಸಂಸ್ಥಾಪಕ, ಪತ್ರಕರ್ತ ಮಹಮ್ಮದ್ ಜುಬೈರ್ ಅವರನ್ನು ದೆಹಲಿ ಪೊಲೀಸರು ಬಂಧಿಸಿರುವುದನ್ನು ಭಾರತೀಯ ಸಂಪಾದಕರ ಒಕ್ಕೂಟ ಮಂಗಳವಾರ ತೀವ್ರವಾಗಿ ಖಂಡಿಸಿದೆ.



ಮುಂಬೈನ ಕುರ್ಲಾ ಪ್ರದೇಶದಲ್ಲಿ ಕಟ್ಟಡ ಕುಸಿದುಬಿದ್ದ ಸ್ಥಳದಲ್ಲಿ ಮಂಗಳವಾರ ಎನ್‌ಡಿಆರ್‌ಎಫ್ ತಂಡದಿಂದ ರಕ್ಷಣಾ ಕಾರ್ಯಾಚರಣೆ ನಡೆಯಿತು –ಪಿಟಿಐ ಚಿತ್ರ

ಕುರ್ಲಾದಲ್ಲಿ ಕಟ್ಟಡ ಕುಸಿತ: 18 ಸಾವು

ಮುಂಬೈ (ಪಿಟಿಐ): ಕುರ್ಲಾ ಪ್ರದೇಶದ ನಾಲ್ಕು ಮಹಡಿಯ ಜನವಸತಿ ಕಟ್ಟಡ ಕುಸಿದ ಪರಿಣಾಮ 18 ಜನರು ಮೃತಪಟ್ಟು, 14 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಾಯ್ಕ್ ನಗರ ಸೊಸೈಟಿಯಲ್ಲಿರುವ ಕಟ್ಟಡದ ಒಂದು ಭಾಗ ಮಧ್ಯರಾತ್ರಿ ಕುಸಿದಿದೆ. ಇದಕ್ಕೆ ಹೊಂದಿಕೊಂಡಿರುವ ಮತ್ತೊಂದು ಕಟ್ಟಡ ಶಿಥಿಲಗೊಂಡಿರುವ ಕಾರಣ ಅಲ್ಲಿನ ನಿವಾಸಿಗಳನ್ನು ತೆರವು ಮಾಡಲಾಗಿದೆ. ಗಾಯಾಳುಗಳನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ಅವಶೇಷಗಳ ಅಡಿ ಸಿಲುಕಿದವರ ರಕ್ಷಣೆಗೆ ಕಾರ್ಯಾಚರಣೆ ನಡೆಯುತ್ತಿದ್ದು, 32 ಮಂದಿಯನ್ನು ರಕ್ಷಿಸಲಾಗಿದೆ. 'ಶಿಥಿಲಗೊಂಡ ಕಟ್ಟಡದ ಬಗ್ಗೆ ಹಲವು ಬಾರಿ ಎಚ್ಚರಿಕೆ ನೀಡಿದರೂ ಜನರು ನಿರ್ಲಕ್ಷಿಸಿದ್ದರು. ಹಲವರು ಜೀವಂತವಿರುವ ಸಾಧ್ಯತೆ ಇರುವುದರಿಂದ ಎಚ್ಚರಿಕೆಯಿಂದ ಕಾರ್ಯಾಚರಣೆ ನಡೆಸುವಂತೆ ಸೂಚಿಸಲಾಗಿದೆ' ಎಂದು ಬಿಎಂಸಿ ಆಯುಕ್ತ ಇಕ್ಬಾಲ್ ಸಿಂಗ್ ಚಾಹಲ್‌ಳಿಸಿದರು.

ಸಮುದ್ರದಲ್ಲಿ ಹೆಲಿಕಾಪ್ಟರ್ ಪತನ: ನಾಲ್ಕು ಮಂದಿ ಸಾವು

ಮುಂಬೈ (ಪಿಟಿಐ): ಇಬ್ಬರು ಪೈಲಟ್ ಸೇರಿದಂತೆ ಒಂಬತ್ತು ಜನರ ಪ್ರಯಾಣಿಸುತ್ತಿದ್ದ ಪವನ್ ಹನ್ಸ್ ಸಂಸ್ಥೆಯ ಹೆಲಿಕಾಪ್ಟರ್ ಇಲ್ಲಿನ ಕರಾವಳಿ ಭಾಗದ ಅರಬ್ಬಿ ಸಮುದ್ರದಲ್ಲಿ ಮಂಗಳವಾರ ಪತನಗೊಂಡಿದ್ದು, ಮೂವರು ಒಎನ್‌ಜಿಸಿ ಸಿಬ್ಬಂದಿ ಸೇರಿ ನಾಲ್ವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈ ಕರಾವಳಿಯಿಂದ 50 ನಾಟಿಕಲ್ ಮೈಲಿ ದೂರದಲ್ಲಿರುವ ರಿಗ್‌ನಲ್ಲಿ ಇಳಿಸಲು ಪ್ರಯತ್ನಿಸುತ್ತಿದ್ದಾಗ ದುರಂತ ಸಂಭವಿಸಿದೆ.ಭಾರತೀಯ ನೌಕಪಡೆ ಮತ್ತು ಕರಾವಳಿ ಕಾವಲು ಪಡೆ ಕಾರ್ಯಾಚರಣೆ ನಡೆಸಿ ಎಲ್ಲಾ 9 ಮಂದಿಯನ್ನೂ ಹೊರ ತೆಗೆದಿದ್ದರು. ಪ್ರಜ್ಞಾಹೀನರಾಗಿದ್ದ ನಾಲ್ವರನ್ನು ನೌಕಪಡೆ ಹೆಲಿಕಾಪ್ಟರ್ ಮೂಲಕ ಒಎನ್‌ಜಿಸಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಅವರು ಬದುಕುಳಿಯಲಿಲ್ಲ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಟ್ರಕ್‌ನಲ್ಲಿ ತುಂಬಿದ್ದ 46 ವಲಸಿಗರು ಉಸಿರುಗಟ್ಟಿ ಸಾವು

ಸ್ಯಾನ್ ಆಂಟೊನಿಯೊ (ಎಪಿ): ಮೆಕ್ಸಿಕೊ ಗಡಿಭಾಗದಲ್ಲಿ ಸ್ಯಾನ್ ಆಂಟೊನಿಯೊ ಬಳಿ ನಿರ್ಜನ ಪ್ರದೇಶದಲ್ಲಿ ನಿಲ್ಲಿಸಿದ್ದ ಟ್ರಕ್‌ನಲ್ಲಿ 46 ಮಂದಿ ಜನರ ಶವ ಪತ್ತೆಯಾಗಿದೆ. ನಾಲ್ವರು ಮಕ್ಕಳು ಸೇರಿ 16 ಮಂದಿ ಅಸ್ವಸ್ತಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೆಕ್ಸಿಕೊದಿಂದ ಅಮೆರಿಕಕ್ಕೆ ಟ್ರಕ್ ಮೂಲಕ ವಲಸಿಗರನ್ನು ಅಕ್ರಮವಾಗಿ ಕರೆದೊಯ್ಯುವುದು ಸಾಮಾನ್ಯವಾಗಿದೆ. ಈ ಸಂಬಂಧ ಮೂವರನ್ನು ಬಂಧಿಸಿದ್ದು ಮಾನವ ಕಳ್ಳಸಾಗಣೆ ಎಂಬುದರ ಕುರಿತು ತನಿಖೆ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದರು.

ಉಸಿರಾಟದ ತೊಂದರೆಯಿಂದ ಸಂತ್ರಸ್ತರ ಕಿರುಚಾಟ ಆಲಿಸಿದ ಕೆಲಸಗಾರರೊಬ್ಬರು ಗಮನಿಸಿದಾಗ ಈ ಕೃತ್ಯ ಬೆಳಕಿಗೆ ಬಂದಿದೆ. ಟ್ರಕ್‌ನಲ್ಲಿ ಹವಾನಿಯಂತ್ರಿತ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿರಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಹಾರ ಭದ್ರತೆಗಾಗಿ ಸಹಜಕೃಷಿ, ಸಿರಿಧಾನ್ಯ:ಮೋದಿ

ಎಲ್ಮೌ, ಜರ್ಮನಿ (ಪಿಟಿಐ): 'ಆಹಾರ ಭದ್ರತೆಯನ್ನು ಒದಗಿಸುವ ನಿಟ್ಟಿನಲ್ಲಿ ಪೌಷ್ಟಿಕಾಂಶಕ್ಕೆ ಪರ್ಯಾಯವಾಗಿ ಸಿರಿಧಾನ್ಯಗಳ ಬಳಕೆ, ಸಹಜ ಕೃಷಿಗೆ ಪ್ರಾತಿನಿಧ್ಯ ನೀಡುವ ಚಿಂತನೆ ನಡೆಯಬೇಕಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ಜಿ–7 ಶೃಂಗಸಭೆಯಲ್ಲಿ 'ಒಗ್ಗಟ್ಟಿನಲ್ಲಿ ಬಲ: ಆಹಾರ ಭದ್ರತೆ ಮತ್ತು ಲಿಂಗ ಸಮಾನತೆಗೆ ಪರಿಹಾರ ಕ್ರಮಗಳು' ವಿಷಯ ಕುರಿತು ಮಾತನಾಡಿದ ಅವರು, ಸವಾಲಿನ ಸ್ಥಿತಿಯಲ್ಲೂ ಭಾರತ ವಿವಿಧ ರಾಷ್ಟ್ರಗಳಿಗೆ ಆಹಾರಧಾನ್ಯ ನೆರವು ನೀಡಿದೆ ಎಂದರು.

ಮುಂದಿನ ವರ್ಷವನ್ನು 'ಅಂತರ ರಾಷ್ಟ್ರೀಯ ಸಿರಿಧಾನ್ಯ ವರ್ಷ'ವಾಗಿ ಆಚರಿಸಲಾಗುತ್ತಿದೆ. ಆಗ ಪೌಷ್ಟಿಕಾಂಶಕ್ಕೆ ಸಿರಿಧಾನ್ಯವೇ ಪರ್ಯಾಯ ಎಂಬ ಅಭಿಯಾನ ನಡೆಸಬೇಕಿದೆ. ಭಾರತದಲ್ಲಿ ಪ್ರಸ್ತುತ ಸಹಜ ಕೃಷಿ ಕುರಿತು ದೊಡ್ಡ ಕ್ರಾಂತಿಯೇ ನಡೆಯುತ್ತಿದೆ. ಸದಸ್ಯ ರಾಷ್ಟ್ರಗಳ ಪರಿಣತರು ಈ ಕುರಿತಂತೆ ಅಧ್ಯಯನ ನಡೆಸಬಹುದು ಎಂದರು.



ರಷ್ಯಾ ನಡೆಸಿದ ಕ್ಷಿಪಣಿ ದಾಳಿಯಿಂದಾಗಿ ಕ್ರೆಮೆಂಚುಕ್ ನಗರದ ಶಾಪಿಂಗ್ ಮಾಲ್‌ನಲ್ಲಿ ಬೆಂಕಿ ಮತ್ತು ದಟ್ಟ ಹೊಗೆ ಆವರಿಸಿರುವುದು –ಎಪಿ ಚಿತ್ರ

ಶಾಪಿಂಗ್ ಮಾಲ್ ಮೇಲೆ ದಾಳಿ: 18 ಸಾವು

ಕ್ರೆಮೆಂಚುಕ್ (ಎಪಿ): ಉಕ್ರೇನ್‌ನ ಕ್ರೆಮೆಂಚುಕ್ ನಗರದ ಶಾಪಿಂಗ್ ಮಾಲ್ ಮೇಲೆ ರಷ್ಯಾದ ಸೇನೆ ಕ್ಷಿಪಣಿ ದಾಳಿ ನಡೆಸಿದ್ದು, 18 ಮಂದಿ ಮೃತಪಟ್ಟಿದ್ದಾರೆ. ಮೃತರ ಸಂಖ್ಯೆ ಏರುವ ಸಂಭವವಿದೆ.

'59 ಜನರು ಗಾಯಗೊಂಡಿದ್ದು, 25 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಕ್ರೆಮೆಂಚುಕ್ ಗವರ್ನರ್ ಡಿಮಿಟ್ರೊ ಲುನಿನ್ ತಿಳಿಸಿದ್ದಾರೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು, 'ಇದು,ಭಯಾನಕ ಭಯೋತ್ಪಾದಕ ದಾಳಿ. ದಾಳಿ ಬಳಿಕ ಶಾಪಿಂಗ್ ಮಾಲ್‌ನಲ್ಲಿ ದಟ್ಟ ಕಪ್ಪು ಹೊಗೆ ಆವರಿಸಿತ್ತು. ದಾಳಿ ವೇಳೆ ಮಾಲ್‌ನಲ್ಲಿ 1000ಕ್ಕೂ ಅಧಿಕ ಮಂದಿ ಇದ್ದರು' ಎಂದಿದ್ದಾರೆ.

ದಾಳಿ ಕೃತ್ಯದ ಕುರಿತು ಚರ್ಚಿಸಲು ತುರ್ತಾಗಿ ಸಭೆ ನಿಗದಿಪಡಿಸಬೇಕು ಎಂಬ ಉಕ್ರೇನ್ ಮನವಿಗೆ ಸ್ಪಂದಿಸಿರುವ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯನ್ನು ನಿಗದಿಪಡಿಸಿದೆ.


ವಿಷಾನಿಲ ಸೋರಿಕೆ: 13 ಸಾವು

ಅಮ್ಮಾನ್, ಜೋರ್ಡಾನ್ (ಎಪಿ): ಇಲ್ಲಿನ ಬಂದರು ನಗರ ಅಕ್ವಾಬಾದಲ್ಲಿ ವಿಷಾನಿಲ ಸೋರಿಕೆಯಿಂದಾಗಿ ಸೋಮವಾರ 13 ಮಂದಿ ಮೃತಪಟ್ಟಿದ್ದು, ಇತರ 250 ಮಂದಿ ಗಾಯಗೊಂಡಿದ್ದಾರೆ.

ಬೃಹತ್ ಪ್ರಮಾಣದ ಟ್ಯಾಂಕರ್ ಅನ್ನು ಟ್ರಕ್‌ನಿಂದ ಕ್ರೇನ್ ಮೂಲಕ ಇಳಿಸುವಾಗ ಅದು ಹಡಗಿಗೆ ಬಿದ್ದಿದೆ. ಹಿಂದೆಯೇ ಸ್ಫೋಟ ಸಂಭವಿಸಿದ್ದು, ಹಳದಿ ಬಣ್ಣದ ಹೊಗೆ ವಾತಾವರಣವನ್ನು ಆವರಿಸಿದೆ. ಕಾರ್ಮಿಕರು ರಕ್ಷಣೆಗಾಗಿ ದಿಕ್ಕಾಪಾಲಾಗಿ ಓಡಿದ್ದಾರೆ.

ಟ್ಯಾಂಕರ್ ಸಾಗಣೆ ವೇಳೆ ಅವಘಡ ಸಂಭವಿಸಿದೆ. ಟ್ಯಾಂಕರ್‌ನಲ್ಲಿದ್ದ ಅನಿಲ ಯಾವುದು ಎಂದು ಗೊತ್ತಾಗಿಲ್ಲ. ಸ್ಥಳವನ್ನು ಸುತ್ತುವರಿದಿದ್ದು, ಗಾಯಾಳುಗಳಿಗೆ ವೈದ್ಯಕೀಯ ಚಿಕಿತ್ಸೆ ಒದಗಿಸಲು ಕ್ರಮವಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15832
ಇಂದಿನ ಅಂತ್ಯ	15850
▼	18
ದಿನದ ಕನಿಷ್ಠ	15892

ವಿನಿಮಯ ದರ

$ ಡಾಲರ್	78.87
£ ಪೌಂಡ್	96.69
€ ಯುರೊ	83.04
¥ ಯೆನ್ (100ಕ್ಕೆ)	57.99

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹560
12 ಮೊಟ್ಟೆಗೆ	₹72

ಮೈಸೂರು

100 ಮೊಟ್ಟೆಗೆ	₹560

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1570)
ಸೋಯಾ (ರಿಫೈನ್ಡ್)	₹1355 (1345)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1277 (1270)

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು

1ನೇ ದರ್ಜೆ ₹16000-20000

2ನೇ ದರ್ಜೆ ₹12000-15000

ಕೊಬ್ಬರಿ ಧಾರಣೆ



ಗುಬ್ಬಿ	₹14000-14366
ಪುತ್ತೂರು	₹4000-9000

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹174.50
ಆರ್‌ಎಸ್‌ಎಸ್-5	₹165.00
ಗುಡ್ ಲಾಟ್	₹157.00

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಭದ್ರಾವತಿ	
ರಾಶಿ	43599-49509
ಚಿತ್ರದುರ್ಗ	
ಆಪಿ	49419-49829
ಬೆಟ್ಟೆ	38849-39299
ಕೆಂಪುಗೋಟು	28809-29210
ರಾಶಿ	48939-49369
ಕಾರ್ಕಳ	
ಹೊಸತು	40000-45000
ಕುಂದಾಪುರ	
ಹೊಸಚಾಲಿ	39000-41500
ಪುತ್ತೂರು	
ಕೋಕ	11000-26000
ಹೊಸತು	30500-43000
ಸಾಗರ	
ಬಿಳಿಗೋಟು	25219-29109
ಚಾಲಿ	35109-37629
ಕೋಕ	22500-33129
ಕೆಂಪುಗೋಟು	33129-34699
ರಾಶಿ	40899-48889
ಸಿಪ್ಪೆಗೋಟು	20033-21090
ಶಿವಮೊಗ್ಗ	
ಗೊರಬಲು	17009-37899
ರಾಶಿ	47509-49519
ಸಿದ್ದಾಪುರ	
ಬಿಳಿಗೋಟು	22399-31390
ಚಾಲಿ	34000-38999
ಕೋಕ	23399-32119
ಕೆಂಪುಗೋಟು	26119-31699
ರಾಶಿ	46509-48699
ತಟ್ಟಿಬೆಟ್ಟೆ	33199-45699
ಶಿರಸಿ	
ಬೆಟ್ಟೆ	36521-43699
ಬಿಳಿಗೋಟು	23099-31969
ಚಾಲಿ	30711-40552
ರಾಶಿ	40399-49699
ತುಮಕೂರು	
ರಾಶಿ	48100-49600
ಯಲ್ಲಾಪುರ	
ಬಿಳಿಗೋಟು	26899-32831
ಚಾಲಿ	35466-39899
ಕೋಕ	18899-29600
ಕೆಂಪುಗೋಟು	29499-34199
ರಾಶಿ	46690-54300
ತಟ್ಟಿಬೆಟ್ಟೆ	37406-45679

ರೇಷ್ಮೆಗೂಡು ಮಾರುಕಟ್ಟೆ

ರಾಮನಗರ

ಮಿಶ್ರ ತಳಿ:	222-595
ದ್ವಿತಳಿ:	470-769

ಮೂಡಿಗೆರೆ ಕಾಫಿ (50 ಕೆ.ಜಿಗೆ)

	ಮುದ್ರೆಮನೆ
ಎಪಿ	15900
ಎಸಿ	8960
ಆರ್‌ಪಿ	9600
ಆರ್‌ಸಿ	4735

ಜಿಎಸ್‌ಟಿ ಪರಿಹಾರ ಮುಂದುವರಿಕೆಗೆ ಒತ್ತಾಯ

ಚಂಡೀಗಡ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಕಾರಣದಿಂದ ಆಗುವ ವರಮಾನ ನಷ್ಟಕ್ಕೆ ಪರಿಹಾರ ಕೊಡುವುದನ್ನು ಮುಂದುವರಿಸಬೇಕು ಅಥವಾ ಜಿಎಸ್‌ಟಿ ವರಮಾನವನ್ನು ಕೇಂದ್ರ–ರಾಜ್ಯಗಳ ನಡುವೆ ಹಂಚಿಕೊಳ್ಳುವ ವ್ಯವಸ್ಥೆ ಬದಲಾಗಬೇಕು ಎಂದು ಬಿಜೆಪಿ ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳು ಒತ್ತಾಯಿಸಿವೆ.

ಜಿಎಸ್‌ಟಿ ವ್ಯವಸ್ಥೆಯಿಂದ ರಾಜ್ಯಗಳಿಗೆ ಆಗುವ ವರಮಾನ ನಷ್ಟವನ್ನು ಭರ್ತಿ ವ್ಯವಸ್ಥೆಯು ಜೂನ್ 30ಕ್ಕೆ ಕೊನೆಗೊಳ್ಳಲಿದೆ. ಜಿಎಸ್‌ಟಿ ಮಂಡಳಿ ಸಭೆಯು ಮಂಗಳವಾರ ಇಲ್ಲಿ ಆರಂಭವಾಗಿದೆ. ತಮ್ಮ ನಿಲುವನ್ನು ಬಲವಾಗಿ ಪ್ರತಿಪಾದಿಸಲು ಕೆಲವು ರಾಜ್ಯಗಳು, 'ಜಿಎಸ್‌ಟಿ ಮಂಡಳಿ ಕೈಗೊಳ್ಳುವ ತೀರ್ಮಾನವನ್ನು ನಾವು ಪಾಲಿಸಬೇಕು ಎಂದೇನೂ ಇಲ್ಲ. ಸಹಮತ ಇಲ್ಲದಿದ್ದರೂ ನಿರ್ಧಾರ ಕೈಗೊಂಡರೆ, ಮೈಲಿಗಲ್ಲು ಎಂದು ಕರೆಯಲಾಗಿರುವ ಆರ್ಥಿಕ ಸುಧಾರಣೆಯು (ಜಿಎಸ್‌ಟಿ ಕಾನೂನು) ವ್ಯರ್ಥವಾಗಿಬಿಡಬಹುದು' ಎಂಬ ಮಾತನ್ನು ಸುಪ್ರೀಂ ಕೋರ್ಟ್‌ನ ಈಚೆಗಿನ ತೀರ್ಪೊಂದನ್ನು ಉಲ್ಲೇಖಿಸಿ ಹೇಳಿವೆ.

ಜಿಎಸ್‌ಟಿ ಅಡಿ ಸಂಗ್ರಹವಾಗುವ ವರಮಾನದಲ್ಲಿ ಶೇಕಡ 70ರಿಂದ ಶೇ 80ರಷ್ಟನ್ನು ರಾಜ್ಯಗಳಿಗೆ ಹಂಚಿಕೆ ಮಾಡಬೇಕು. ಇನ್ನುಳಿದ ಮೊತ್ತವನ್ನು ಕೇಂದ್ರವು ಬಳಸಿಕೊಳ್ಳಬೇಕು ಎಂದು ಚತ್ತೀಸಗಡದ ಹಣಕಾಸು ಸಚಿವ ಟಿ.ಎಸ್. ಸಿಂಗ್ ದೇವ್ ಹೇಳಿದ್ದಾರೆ. ಈಗಿನ ವ್ಯವಸ್ಥೆಯಲ್ಲಿ ರಾಜ್ಯ–ಕೇಂದ್ರ ಸರ್ಕಾರಗಳು ವರಮಾನವನ್ನು ಸಮಾನವಾಗಿ ಹಂಚಿಕೊಳ್ಳುತ್ತಿವೆ.

ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ನೀಡುವುದನ್ನು ವಿಸ್ತರಿಸಬೇಕು ಎಂದು ಕೇರಳ ವಿತ್ತ ಸಚಿವ ಕೆ.ಎನ್. ಬಾಲಗೋಪಾಲ್ ಒತ್ತಾಯಿಸಿದ್ದಾರೆ. 'ಬಹುತೇಕ ಎಲ್ಲ ರಾಜ್ಯಗಳೂ ಪರಿಹಾರ ಅವಧಿ ವಿಸ್ತರಿಸುವಂತೆ ಕೇಳಿವೆ' ಎಂದರು.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವೆಂಕಟೇಶ್ ಕೆ.ವಿ., ಬೆಂಗಳೂರು

- **ಪ್ರಶ್ನೆ:** ನಾನು ಸಣ್ಣ ಗುತ್ತಿಗೆದಾರ. ನನಗೆ ಬರುವ ವಾರ್ಷಿಕ ಆದಾಯ ₹ 15–20 ಲಕ್ಷ. ಇದರ ಶೇಕಡ 50ರಿಂದ ಶೇ 60ರಷ್ಟು ಖರ್ಚು ಇದೆ. ನನಗೆ ಹಣ ಪಾವತಿಸುವ ಬಹುತೇಕ ಕಂಪನಿಗಳು ಸ್ಥಳೀಯವಾಗಿ ಕಟ್ಟಡ ನಿರ್ಮಾಣದಲ್ಲಿ ತೊಡಗಿಸಿಕೊಂಡಿವೆ. ಇವರು ತೆರಿಗೆ ಮುರಿದು ಉಳಿದ ಹಣ ನನಗೆ ಪಾವತಿಸುತ್ತಾರೆ. ಆದರೆ ಸರಿಯಾದ ಫಾರಂ 16ಅನ್ನು ಹಾಗೂ ದಾಖಲೆಗಳನ್ನು ಕೊಡುತ್ತಿಲ್ಲ. ನಾನು ಏನು ಮಾಡಬಹುದು? ಇದರಿಂದ ಮುಂದೆ ನನಗೇನು ತೊಂದರೆ ಇದೆ?

ಉತ್ತರ: ತೆರಿಗೆ ಕಡಿತಗೊಳಿಸಿ ಉಳಿದ ಮೊತ್ತವನ್ನು ಪಾವತಿಸುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆ, ಅವರು ಪ್ರತಿ ತ್ರೈಮಾಸಿಕ ಅವಧಿ ಮುಗಿದ ಒಂದು ತಿಂಗಳೊಳಗೆ ಕಡಿತಗೊಳಿಸಿದ ತೆರಿಗೆಯ ಬಗೆಗಿನ ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಬೇಕಾಗಿರುತ್ತದೆ. ಆದಾಯ ತೆರಿಗೆ ಇಲಾಖೆಯ ಟ್ರೇಸಸ್ ಎಂಬ ಜಾಲತಾಣದ ಮೂಲಕ ಫಾರಂ 16/16ಎ ಅನ್ನು ತೆರಿಗೆ ಕಡಿತಗೊಳಿಸಲಾದ ವ್ಯಕ್ತಿಗೆ ನೀಡಲು ನಂತರದ 15 ದಿನಗಳೊಳಗೆ ಕ್ರಮ ಕೈಗೊಳ್ಳಬೇಕು. ಟಿಡಿಎಸ್ ಪ್ರಮಾಣಪತ್ರಗಳನ್ನು ನೀಡುವುದು ಈಗ ಕಡ್ಡಾಯ.

ಒಂದು ವೇಳೆ ಟಿಡಿಎಸ್ ಪ್ರಮಾಣಪತ್ರಗಳನ್ನು ಸಕಾಲದಲ್ಲಿ ಒದಗಿಸದಿದ್ದರೆ, ಅಂತಹ ಕಂಪನಿಯ ನಿರ್ದೇಶಕರಿಗೆ ಲಿಖಿತ ರೂಪದಲ್ಲಿ ನಿಮ್ಮ ಸಮಸ್ಯೆ ಹಾಗೂ ನಿಮ್ಮ ಮುಂದಿನ ಕ್ರಮದ ಬಗ್ಗೆ ಎಚ್ಚರಿಕೆ ಪತ್ರ ಬರೆಯುವುದು ಸಮಂಜಸ. ಒಂದು ವೇಳೆ ಅದಕ್ಕೆ ಪ್ರತಿಕ್ರಿಯೆ ಬರದಿದ್ದಲ್ಲಿ, ಸ್ಥಳೀಯ ಆದಾಯ ತೆರಿಗೆ ಇಲಾಖೆಯ (ಟಿಡಿಎಸ್) ವಿಭಾಗದಲ್ಲಿ ದೂರು ದಾಖಲಿಸಬಹುದು ಅಥವಾ ಆನ್ಲೈನ್ ಮೂಲಕವೂ ದೂರು ದಾಖಲಿಸಬಹುದು. ಇಂತಹ ಪ್ರಕರಣಗಳು ತಪ್ಪಿತಸ್ಥ ಸಂಸ್ಥೆಗಳ ಮೇಲೆ ಸೂಕ್ತ ಕಾನೂನು ಕ್ರಮ ಹಾಗೂ ದಂಡ ವಿಧಿಸಲು ನೆರವಾಗುತ್ತವೆ.

ಒಂದು ವೇಳೆ, ಕಡಿತಗೊಳಿಸಲಾದ ತೆರಿಗೆ ವಿವರ ನಿಮ್ಮ ಆದಾಯ ತೆರಿಗೆಯ '26 ಎ ಎಸ್' ಫಾರಂನಲ್ಲಿ ಕಂಡುಬರದಿದ್ದಲ್ಲಿ, ಅಷ್ಟು ತೆರಿಗೆ ಮೊತ್ತ ನಿಮಗೆ ಕೊರತೆಯಾಗುತ್ತದೆ. ಇದರ ಪರಿಣಾಮ ನಿಮಗೆ ಹೆಚ್ಚುವರಿ ತೆರಿಗೆ ಕಟ್ಟಬೇಕಾಗಿ ಬರಬಹುದು ಅಥವಾ ತೆರಿಗೆ ಮರಳಿ ಸಿಗುವುದು ಇದ್ದಲ್ಲಿ ನಿಮಗೆ ಅಷ್ಟು ಮೊತ್ತ ಕಡಿಮೆ ಬರಬಹುದು.

ರವಿಕುಮಾರ, ಶಿವಮೊಗ್ಗ

- **ಪ್ರಶ್ನೆ:** ನನ್ನ ಬಳಿ ₹ 1 ಲಕ್ಷ ಇದೆ. ಈ ಹಣವನ್ನು ಒಂದು ವರ್ಷದ ಅವಧಿಗೆ ಹೂಡಿಕೆ ಮಾಡಲು ಬಯಸಿದ್ದೇನೆ. ಇದನ್ನು ಎಲ್ಲಿ ಹೂಡಿಕೆ ಮಾಡಿದರೆ ಹೆಚ್ಚು ಲಾಭ ಸಿಗುತ್ತದೆ? ಯಾವುದು ಸುರಕ್ಷಿತ?

ಉತ್ತರ: ಬಹುತೇಕ ಸಂದರ್ಭಗಳಲ್ಲಿ 'ರಿಸ್ಕ್ ಮತ್ತು ರಿಟರ್ನ್ಸ್' ಸಮಾನಾಂತರವಾಗಿ ಚಲಿಸುತ್ತವೆ. ಇವೆರಡೂ ಒಂದನ್ನೊಂದು ಬಿಡದೆ ಒಂದೇ ದಿಕ್ಕಿನಲ್ಲಿ ಚಲಿಸುವ ವಿಚಾರಗಳು. ಅಂದರೆ ಅಧಿಕ ರಿಸ್ಕ್ ಇರುವಲ್ಲಿ ಅಧಿಕ ರಿಟರ್ನ್ಸ್ ಇರುತ್ತದೆ, ಕಡಿಮೆ ರಿಸ್ಕ್ ತೆಗೆದುಕೊಳ್ಳುವವರು ಕಡಿಮೆ ರಿಟರ್ನ್ಸ್ ಪಡೆಯುತ್ತಾರೆ ಎನ್ನುವುದೇ ಇದರ ಅರ್ಥ. ಇರುವ ಹಣವನ್ನು ಎಲ್ಲ ರೀತಿಯಲ್ಲಿ ಸಂರಕ್ಷಿಸಲು ಹಾಗೂ ವೃದ್ಧಿಗೊಳಿಸಲು, ಸರಿಯಾದ ಸಮಯದಲ್ಲಿ ಸರಿಯಾದ ಹೂಡಿಕೆ ಉತ್ಪನ್ನಗಳಲ್ಲಿ, ತಾಳ್ಮೆಯಿಂದ ತೊಡಗಿಸಬೇಕು. ಸಾಂಪ್ರದಾಯಿಕ ಹೂಡಿಕೆಗಳಾದ ಬ್ಯಾಂಕ್ ಠೇವಣಿ, ಅಂಚೆ ಕಚೇರಿ ಹೂಡಿಕೆ ಇತ್ಯಾದಿಗಳಿಗೆ ಹೋಲಿಸಿದರೆ, ಷೇರು ಮಾರುಕಟ್ಟೆ ಹಾಗೂ ಮ್ಯೂಚುವಲ್ ಫಂಡ್ ಹೂಡಿಕೆಗಳಿಂದ ಹೆಚ್ಚು ಲಾಭ ಗಳಿಸಲು ಅವಕಾಶ ಇರುತ್ತದೆ. ಆದರೆ, ಇದಕ್ಕೆ ಪರಿಶ್ರಮ ಹಾಗೂ ಹೆಚ್ಚಿನ ತಿಳಿವಳಿಕೆ ಅಗತ್ಯ. ಅನ್ಯರ ಮಾರ್ಗದರ್ಶನ ಎಷ್ಟೇ ಇದ್ದರೂ, ನಮ್ಮ ಹಣ ಹಾಗೂ ನಿರ್ಧಾರಗಳಿಗೆ ನಾವೇ ಜವಾಬ್ದಾರರು.

ನಿಮಗೆ ಮೇಲೆ ಉಲ್ಲೇಖಿಸಿರುವ ವಿಚಾರಗಳಲ್ಲಿ ಆಸಕ್ತಿ ಇದ್ದರೆ, ಉತ್ತಮ ಕಂಪನಿಯ ಷೇರುಗಳಲ್ಲಿ ಮ್ಯೂಚುವಲ್ ಫಂಡ್‌ಗಳ ಮೂಲಕ ವ್ಯವಸ್ಥಿತವಾಗಿ ಹೂಡಿಕೆ (ಎಸ್‌ಐಪಿ) ಮಾಡಬಹುದು. ಮಾರುಕಟ್ಟೆ ಕುಸಿತದ ಅಪಾಯದಿಂದ ನಿಮ್ಮ ಹಣವನ್ನು ರಕ್ಷಿಸಲು ಇದು ಪರಿಣಾಮಕಾರಿ. ನಿಮ್ಮ ಒಟ್ಟು ಹೂಡಿಕೆಯ ಮೊತ್ತ ಹಾಗೂ ಅವಧಿಯನ್ನು ಈಗಾಗಲೇ ಖಚಿತಪಡಿಸಿಕೊಂಡಿದ್ದೀರಿ. ನೀವು ನಿಮ್ಮ ಹಣವನ್ನು ಮೊದಲ ಹಂತದಲ್ಲಿ ಲಿಕ್ವಿಡ್ ಅಥವಾ ಡೆಟ್ ಫಂಡ್‌ಗಳಲ್ಲಿ ತೊಡಗಿಸಬಹುದು. ಇದು ನಿಮಗೆ ಅಲ್ಪ ಮೊತ್ತದ ಲಾಭ ಕೊಡುತ್ತಿರುತ್ತದೆ. ತದನಂತರ, ನಿಮ್ಮ ನಿರ್ಧಾರದಂತೆ ನಿಮ್ಮ ಷೇರು ಬ್ರೋಕರ್ ಜೊತೆ ಮಾತುಕತೆ ನಡೆಸಿ, ವಾರದ ನಿಶ್ಚಿತ ದಿನ ಅಥವಾ ಮಾಸಿಕವಾಗಿ ಒಂದು ನಿಗದಿತ ದಿನ ನಿರ್ದಿಷ್ಟ ಕಂಪನಿಗಳ ಷೇರು ಖರೀದಿಸುವ ನಿರ್ದೇಶನ ನೀಡಬಹುದು. ಇದು ಕೂಡ ವ್ಯವಸ್ಥಿತ ಹೂಡಿಕೆಗೆ ನೆರವಾಗುತ್ತದೆ. ನಿಮ್ಮ ಹೂಡಿಕೆಯ ಅರ್ಧದಷ್ಟು ಮೊತ್ತವನ್ನು ಎರಡು ಅಥವಾ ಮೂರು ಉತ್ತಮವಾದ ಈಕ್ವಿಟಿ, ಇಂಡೆಕ್ಸ್ ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಬಹುದು. ಇನ್ನುಳಿದ ಮೊತ್ತವನ್ನು ವಿವಿಧ ವರ್ಗಗಳ ನಾಲ್ಕೈದು ಉತ್ತಮ ಕಂಪನಿಗಳ ಷೇರುಗಳಲ್ಲಿ ಸಮಾನವಾಗಿ ತೊಡಗಿಸಿ. ಇದಕ್ಕೆ ಅಗತ್ಯವಾದ ಮೊತ್ತವನ್ನು (ಮೊದಲೇ ಹೂಡಿಕೆ ಮಾಡಿದ್ದ) ಲಿಕ್ವಿಡ್ ಅಥವಾ ಡೆಟ್ ಫಂಡ್‌ಗಳಿಂದ ಹಿಂಪಡೆಯುತ್ತಿರಿ.

ಯಾವುದೇ ಸಂದರ್ಭದಲ್ಲೂ ಒಂದೇ ಹಂತದಲ್ಲಿ ನಿಮ್ಮ ಎಲ್ಲ ಹಣವನ್ನು ಒಂದೇ ಕಡೆ, ಒಂದೇ ಬಾರಿಗೆ ತೊಡಗಿಸದಿರಿ. ನಷ್ಟ ಕಾಣುತ್ತಿರುವ ಕಂಪನಿಗಳಲ್ಲಿ ಹೂಡಿಕೆ ಯಾವತ್ತೂ ಬೇಡ. ಲಾಭಾಂಶ ಹಾಗೂ ವಹಿವಾಟು ಉತ್ತಮವಿರುವ ಹಾಗೂ ಭವಿಷ್ಯದಲ್ಲಿ ಉತ್ತಮ ನಿರೀಕ್ಷೆ ಇರುವ ವ್ಯವಹಾರದಲ್ಲಿ ಹಣ ತೊಡಗಿಸಿ, (ಉ.ದಾ. ಮಾಹಿತಿ ತಂತ್ರಜ್ಞಾನ, ಬ್ಯಾಂಕಿಂಗ್, ಇಂಧನ ಇತ್ಯಾದಿ ಕ್ಷೇತ್ರಗಳು). ಅಗ್ಗವಾಗಿ ತೋರುವ 'ಪೆನ್ನಿ ಷೇರು'ಗಳಲ್ಲಿ ಹಣ ತೊಡಗಿಸುವಾಗ ಎಚ್ಚರಿಕೆಯಿಂದ ಇರಿ. ಅಪರೂಪಕ್ಕೊಮ್ಮೆ ಮಾತ್ರ ಬಿಕರಿಯಾಗುವ ಷೇರುಗಳಲ್ಲಿ ಹಣ ತೊಡಗಿಸುವಾಗಲೂ ಎಚ್ಚರಿಕೆ ಇರಲಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001
ಇ-ಮೇಲ್: businessdesk@prajavani.co.in

ಸಹಕಾರ ಬ್ಯಾಂಕ್‌ಗಳಿಂದಲೂ ನೇರ ನಗದು ವರ್ಗಾವಣೆ: ಶಾ

ಅಹಮದಾಬಾದ್ (ಪಿಟಿಐ): ಗ್ರಾಹಕರ ಜನಧನ್ ಖಾತೆ, ಆಧಾರ್ ಮತ್ತು ಮೊಬೈಲ್ ಸಂಖ್ಯೆಯನ್ನು ಆಧಾರವಾಗಿ ಇರಿಸಿಕೊಂಡು, ಕೇಂದ್ರದ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ನೀಡುವ ಹಣಕಾಸಿನ ನೆರವನ್ನು ನೇರವಾಗಿ ಗ್ರಾಹಕರ ಖಾತೆಗೆ ವರ್ಗಾವಣೆ ಮಾಡುವ ಅವಕಾಶವನ್ನು ಸಹಕಾರ ಬ್ಯಾಂಕ್‌ಗಳಿಗೂ ನೀಡಲಾಗುವುದು ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ.

ಈಗ ಒಟ್ಟು 52 ಸಚಿವಾಲಯಗಳು ಜನಧನ್ ಖಾತೆ, ಆಧಾರ್ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆಯನ್ನು ಬಳಸಿಕೊಂಡು ಫಲಾನುಭವಿಗಳ ಖಾತೆಗೆ ಹಣವನ್ನು ನೇರವಾಗಿ ವರ್ಗಾವಣೆ ಮಾಡುತ್ತಿವೆ ಎಂದು ಶಾ ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. 'ಸಹಕಾರ ಬ್ಯಾಂಕ್‌ಗಳೂ ಈ ಸೇವೆಗಳನ್ನು ನೀಡುವುದು ಶೀಘ್ರದಲ್ಲಿಯೇ ಶುರುವಾಗಲಿದೆ. ಇದರಿಂದಾಗಿ ಜನಸಾಮಾನ್ಯರ ಜೊತೆ ನಾವು ಹೊಂದಿರುವ ಸಂಪರ್ಕವು ಇನ್ನಷ್ಟು ಹೆಚ್ಚಲಿದೆ' ಎಂದು ಅವರು ಹೇಳಿದ್ದಾರೆ.

ಐ.ಎಫ್.ಎಸ್ ಪರೀಕ್ಷೆಯಲ್ಲಿ ಎರಡನೇ ರ‍್ಯಾಂಕ್

ಪ್ರಜಾವಾಣಿ ವಾರ್ತೆ



ವರದರಾಜ ಗಾಂವಕರ್


ಗೋಕರ್ಣ(ಉತ್ತರ ಕನ್ನಡ ಜಿಲ್ಲೆ): ಸಮೀಪದ ತೊರ್ಕೆಯ ನಿವಾಸಿ, ವರದರಾಜ ದೇವರಾಜ ಗಾಂವಕರ್, ಯುಪಿಎಸ್‌ಸಿ ನಡೆಸಿದ ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಪರೀಕ್ಷೆಯಲ್ಲಿ ದೇಶಕ್ಕೆ ಎರಡನೇ ರ‍್ಯಾಂಕ್ ಪಡೆದುಕೊಂಡಿದ್ದಾರೆ.

ಫಲಿತಾಂಶ ಮಂಗಳವಾರ ಪ್ರಕಟವಾಗಿದೆ. 'ಮೂರನೇ ಪ್ರಯತ್ನದಲ್ಲಿ ಯಶಸ್ಸು ಲಭಿಸಿದೆ. ಸತತ ಓದಿನ ಪರಿಶ್ರಮ ಇದಕ್ಕೆ ಕಾರಣ' ಎಂದು ವರದರಾಜ 'ಪ್ರಜಾವಾಣಿ' ಜೊತೆ ಸಂತಸ ಹಂಚಿಕೊಂಡರು.

ಸದ್ಯ ಮಂಗಳೂರಿನಲ್ಲಿ ವಾಸವಿದ್ದಾರೆ. ತಂದೆ ದೇವರಾಜ ಗಾಂವಕರ್, ವಾಣಿಜ್ಯ ತೆರಿಗೆ ಆಯುಕ್ತರಾಗಿ ನಿವೃತ್ತಿ ಹೊಂದಿದ್ದಾರೆ.

ಯುಪಿಎಸ್‌ಸಿ ಮೈನ್ಸ್ ಫಲಿತಾಂಶವನ್ನು ಏ.14ರಂದು ಪ್ರಕಟಿಸಿತ್ತು. 108 ಅಭ್ಯರ್ಥಿಗಳನ್ನು ದೈಹಿಕ ಸಾಮರ್ಥ್ಯ ಪರೀಕ್ಷೆಯ ಬಳಿಕ ತರಬೇತಿಗೆ ಆಯ್ಕೆ ಮಾಡಲಾಗಿದೆ.

ಉದ್ಯಮಿ ಪಾಲೋನಜಿ ಮಿಸ್ತ್ರಿ ನಿಧನ



ಮುಂಬೈ (ಪಿಟಿಐ): ಶಾಪೂರ್ಜಿ ಪಾಲೋನಜಿ ಗ್ರೂಪ್ ಮುಖ್ಯಸ್ಥ ಪಾಲೋನಜಿ ಮಿಸ್ತ್ರಿ (93) ತಮ್ಮ ನಿವಾಸದಲ್ಲಿ ಸೋಮವಾರ ರಾತ್ರಿ ನಿಧನರಾದರು.

ಮಿಸ್ತ್ರಿ ಅವರು ಟಾಟಾ ಗ್ರೂಪ್‌ನಲ್ಲಿ ಅತಿ ಹೆಚ್ಚು ಶೇ 18.4 ಪಾಲು ಹೊಂದಿದ್ದರು ಎಂದು ಕಂಪನಿ ಅಧಿಕಾರಿಗಳು ತಿಳಿಸಿದ್ದಾರೆ.

150 ವರ್ಷಗಳ ಇತಿಹಾಸವಿರುವ ಶಾಪೂರ್ಜಿ ಪಾಲೋನಜಿ ಸಮೂಹದ ಮುಖ್ಯಸ್ಥರಾಗಿದ್ದ ಅವರು ಕಂಪನಿಗಳ ಬೆಳವಣಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕೈಗಾರಿಕೋದ್ಯಮಿಯಾಗಿ ಅವರ ಕೊಡುಗೆಗಳನ್ನು ಪರಿಗಣಿಸಿ ಭಾರತ ಸರ್ಕಾರವು 2016ರಲ್ಲಿ ಪಾಲೋನಜಿ ಮಿಸ್ತ್ರಿ ಅವರಿಗೆ 'ಪದ್ಮ ಭೂಷಣ' ನೀಡಿ ಗೌರವಿಸಿದೆ. ದೇಶದ ಹಿರಿಯ ಸಿರಿವಂತ ವ್ಯಕ್ತಿಯಾಗಿಯೂ ಪಾಲೋನಜಿ ಹೆಸರಾಗಿದ್ದರು.

ಫೋರ್ಬ್ಸ್ ಇತ್ತೀಚಿನ ಮಾಹಿತಿಯ ಪ್ರಕಾರ, ಪಾಲೋನಜಿ ಅವರ ಒಟ್ಟು ಸಂಪತ್ತು ₹1 ಲಕ್ಷ ಕೋಟಿಗೂ ಅಧಿಕ. ಅವರು ಜಾಗತಿಕ ಸಿರಿವಂತರ ಪಟ್ಟಿಯಲ್ಲಿ 125ನೇ ಸ್ಥಾನದಲ್ಲಿದ್ದಾರೆ. 1865ರಲ್ಲಿ ಸ್ಥಾಪನೆಯಾದ ಶಾಪೂರ್ಜಿ ಪಾಲೋನಜಿ ಸಮೂಹವು ಎಂಜಿನಿಯರಿಂಗ್ ಮತ್ತು ನಿರ್ಮಾಣ, ಮೂಲಸೌಕರ್ಯ, ರಿಯಲ್ ಎಸ್ಟೇಟ್, ಜಲ, ಇಂಧನ ಹಾಗೂ ಹಣಕಾಸು ಸೇವೆಗಳನ್ನು ನೀಡುತ್ತಿದೆ. 50 ರಾಷ್ಟ್ರಗಳಲ್ಲಿ ಕಾರ್ಯಾಚರಣೆ ನಡೆಸುತ್ತಿದೆ.

ಅವರದು ಗುಜರಾತ್‌ನ ಪಾರ್ಸಿ ಕುಟುಂಬ. ಪ್ರಸ್ತುತ ಶಾಪೂರ್ಜಿ ಪಾಲೋನಜಿ ಸಮೂಹದ ಕಂಪನಿಗಳಿಗೆ ಪಾಲೋನಜಿ ಅವರ ಹಿರಿಯ ಮಗ ಶಾಪೂರ್ಜಿ ಮಿಸ್ತ್ರಿ ಅಧ್ಯಕ್ಷರಾಗಿದ್ದಾರೆ. ಅವರ ಕಿರಿಯ ಮಗ ಸೈರಸ್ ಮಿಸ್ತ್ರಿ ಅವರು 2012ರಿಂದ 2016ರವರೆಗೂ ಟಾಟಾ ಸನ್ಸ್‌ನ ಅಧ್ಯಕ್ಷರಾಗಿದ್ದರು. 4 ವರ್ಷಗಳ ಬಳಿಕ ಆ ಸ್ಥಾನದಿಂದ ಅವರನ್ನು ಪದಚ್ಯುತಗೊಳಿಸಲಾಯಿತು.

ಮುಂಬೈ ಧಾರಣೆ

ಶೇಂಗಾ

28-6-2022

ಜಾವಾ 70/80(ಹೊಸ)	10800-10850
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10850-10950

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1580)
ಒಂದು ವಾರದ ಡೆಲಿವರಿ	1595 (1575)
ಸೋಯಾ ಕಚ್ಚಾ	1300 (1282)
ಪಾಮ್ ವಾರದ ಡೆಲಿವರಿ	1275 (1268)
ಸೂರ್ಯಕಾಂತಿ ಎಣ್ಣೆ ಕಚ್ಚಾ	1630 (1630)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,750 (50,800)
ಬೆಳ್ಳಿ ಕೆ.ಜಿ 60,500 (60,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಬಿಜೆಪಿ–ಜೆಡಿಯು ನಡುವಿನ ಭಿನ್ನಾಭಿಪ್ರಾಯ ಮತ್ತೆ ಸ್ಫೋಟ?'

ಪಟ್ನಾ (ಪಿಟಿಐ): ಶಾಸಕರ ಹಾಜರಾತಿ ಕಡಿಮೆ ಇದೆ ಎಂಬ ಕಾರಣ ನೀಡಿ ಬಿಹಾರ ವಿಧಾನಸಭೆಯ ಕಲಾಪವನ್ನು ಮಂಗಳವಾರ ಮುಂದೂಡಲಾಯಿತು. ಈ ಬೆಳವಣಿಗೆ, ಆಡಳಿತಾರೂಢ ಪಕ್ಷವಾದ ಬಿಜೆಪಿಯನ್ನು ಕೆರಳಿಸಿತು.

ಈ ವಿದ್ಯಮಾನವು ಆಡಳಿತಾರೂಢ ಪಕ್ಷಗಳಾದ ಬಿಜೆಪಿ ಹಾಗೂ ಜೆಡಿಯು ನಡುವಿನ ಭಿನ್ನಾಭಿಪ್ರಾಯವನ್ನು ಮತ್ತೊಮ್ಮೆ ಬಹಿರಂಗಗೊಳಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಅಲ್ಲದೇ, ಅಗ್ನಿಪಥ ಯೋಜನೆಯನ್ನು ಮುಂದಿಟ್ಟುಕೊಂಡು ಆರ್‌ಜೆಡಿ ನೇತೃತ್ವದ ವಿರೋಧ ಪಕ್ಷಗಳು ವಿಧಾನಸಭೆ ಕಲಾಪಕ್ಕೆ ಪದೇಪದೇ ಅಡ್ಡಿಯನ್ನುಂಟು ಮಾಡುತ್ತಿವೆ. ವಿರೋಧ ಪಕ್ಷಗಳ ಈ ನಡೆಗೆ ಆಡಳಿತಾರೂಢ ಪಕ್ಷವಾದ ಜೆಡಿಯುನ ಬೆಂಬಲ ಇದೆ ಎಂಬುದಾಗಿ ಅರ್ಥೈಸಬಹುದು ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ.

ಆದರೆ, ಕಲಾಪಕ್ಕೆ ಅಡ್ಡಿಯನ್ನುಂಟು ಮಾಡುತ್ತಿರುವ ವಿರೋಧ ಪಕ್ಷಗಳಿಗೆ ಪಕ್ಷವು ಪ್ರಚೋದನೆ ನೀಡುತ್ತಿದೆ ಎಂಬ ಆರೋಪಗಳನ್ನು ಜೆಡಿಯು ನಾಯಕರು ಸಾರಾಸಗಟಾಗಿ ತಳ್ಳಿ ಹಾಕಿದ್ದಾರೆ.

ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್ ನಿಖತ್ ಜರೀನ್ ಮನದ ಮಾತು

ಹುಡುಗರಿಂದ ತಿಂದ ಪೆಟ್ಟುಗಳೇ ಯಶಸ್ಸಿನ ಮೆಟ್ಟಿಲುಗಳು

ಪ್ರಜಾವಾಣಿ ವಾರ್ತೆ



ಅಭಿಮಾನಿಗಳೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡ ನಿಖತ್ ಜರೀನ್ (ಎಡದಿಂದ ಮೂರನೆಯವರು) –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಐದು ವರ್ಷಗಳ ಹಿಂದೆ ಭುಜದ ಗಾಯಕ್ಕೆ ಶಸ್ತ್ರಚಿಕಿತ್ಸೆಯಾದಾಗ ಬಹಳಷ್ಟು ಜನರು ಬಾಕ್ಸಿಂಗ್ ಬಿಟ್ಟುಬಿಡುವಂತೆ ಹೇಳಿದ್ದರು. ಮುಂದೆ ನಾನು ಬಾಕ್ಸಿಂಗ್ ಕ್ರೀಡೆಗೆ ಅರ್ಹಳಲ್ಲ ಎಂದೇ ಇನ್ನೂ ಕೆಲವರು ನಿರ್ಧರಿಸಿಬಿಟ್ಟಿದ್ದರು. ಗೆದ್ದರೂ, ಬಿದ್ದರೂ ಜನ ಮಾತನಾಡುತ್ತಾರೆ. ಆದ್ದರಿಂದ ಅವರ ಬಗ್ಗೆ ಹೆಚ್ಚು ಗಮನ ಕೊಡದೇ ಮುಂದುವರಿದೆ. ಇವತ್ತು ಫಲ ಸಿಕ್ಕಿದೆ'–

ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್ ನಿಖತ್ ಜರೀನ್ ಅವರ ನುಡಿಗಳಿವು. ಆದರೆ 2017ರಲ್ಲಿ ಭುಜದ ಮೂಳೆ ಮುರಿದು ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ಆದರೆ ಛಲ ಬಿಡದ ಅವರು ಬಾಕ್ಸಿಂಗ್ ರಿಂಗ್‌ಗೆ ಮರಳಿದ್ದರು. ಕಳೆದ ಮೇ ತಿಂಗಳಲ್ಲಿ ಟರ್ಕಿಯಲ್ಲಿ ನಡೆದಿದ್ದ ಐಬಿಎ ವಿಶ್ವ ಮಹಿಳಾ ಬಾಕ್ಸಿಂಗ್ ಫ್ಲೈವೇಟ್ ವಿಭಾಗದಲ್ಲಿ ಚಿನ್ನ ಗಳಿಸಿದ್ದರು.`ಮಂಗಳವಾರ ಆಡಿಡಾಸ್ ಕಂಪನಿಯು ಬ್ರಿಗೇಡ್ ರಸ್ತೆಯಲ್ಲಿ ಆರಂಭಿಸಿದ ನವೀಕೃತ ಮಳಿಗೆಯನ್ನು ಉದ್ಘಾಟಿಸಿದ ಅವರು 'ಪ್ರಜಾವಾಣಿ'ಯೊಂದಿಗೆ ತಮ್ಮ ಕ್ರೀಡಾಪಯಣದ ಅನುಭವವನ್ನು ಹಂಚಿಕೊಂಡರು.

'ಬಾಲ್ಯದಿಂದಲೇ ಹಟಮಾರಿ ನಾನು. ತರಬೇತಿ ಸಂದರ್ಭದಲ್ಲಿಯೂ ಹುಡುಗರಿಂದ ಬೀಳುತ್ತಿದ್ದ ಪೆಟ್ಟುಗಳಿಗೆ ಯಾವತ್ತೂ ಬೆನ್ನು ತೋರಿಸಲಿಲ್ಲ. ಇವತ್ತು ಅವರು ಹೊಡೆದಿದ್ದಾರೆ, ನಾಳೆ ನಾನು ತಿರುಗಿ ಹೊಡಿತೀನಿ ಎಂಬ ಛಲದಿಂದ ಮುಂದುವರಿದೆ. ಆರಂಭದಲ್ಲಿ ಕಷ್ಟವಾದರೂ ಈಗ ಸಿಹಿಫಲ ಸಿಗುತ್ತಿದೆ. ಆ ಪೆಟ್ಟುಗಳೇ ಯಶಸ್ಸಿಗೆ ಮೆಟ್ಟಿಲುಗಳಾದವು' ಎಂದರು.

'ಮೇರಿ ಕೋಮ್ ಅವರ ಸಾಧನೆಗಳು ಅತ್ಯದ್ಭುತ. ಆ ಮಟ್ಟಕ್ಕೇರುವುದು ಬಲುಕಷ್ಟ. ಅಸಾಧ್ಯವಲ್ಲ ನಿಜ. ಆದರೆ, ಮೊದಲಿನಂತೆ ಈಗ ಪ್ರತಿವರ್ಷ ವಿಶ್ವ ಚಾಂಪಿಯನ್‌ಷಿಪ್ ನಡೆಯುವುದಿಲ್ಲ. ಎರಡು ವರ್ಷಕ್ಕೊಮ್ಮೆ ಜರುಗುತ್ತದೆ. ಅವರು ಗೆದ್ದಷ್ಟು ಪದಕಗಳನ್ನು ಗಳಿಸುವುದು ನನಗೆ ಸಾಧ್ಯವಾಗದಿರಬಹುದು. ಆದರೆ, ಒಲಿಂಪಿಕ್ಸ್‌ನಲ್ಲಿ ಭಾರತದ ಬಾಕ್ಸಿಂಗ್ ಪಟುಗಳು ಇದುವರೆಗೆ ಕಂಚಿನ ಪದಕ ಗೆದ್ದಿದ್ದಾರೆ. ನಾನು ಅದಕ್ಕಿಂತ ಉನ್ನತ ಪದಕಗಳನ್ನು ಜಯಿಸುವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಕಾಮನ್‌ವೆಲ್ತ್ ಕೂಟಕ್ಕಾಗಿ ಸಿದ್ಧತೆ ಉತ್ತಮವಾಗಿದೆ. ಲವ್ಲಿನಾ ಬೋರ್ಗೊಹೈನ್ ಮತ್ತಿತರರೊಂದಿಗೆ ನವದೆಹಲಿಯಲ್ಲಿ ಶಿಬಿರದಲ್ಲಿ ಅಭ್ಯಾಸ ಮಾಡಿದೆ. ಮುಂದಿನ ತಿಂಗಳು ಐರ್ಲೆಂಡ್‌ಗೆ ತೆರಳುತ್ತಿದ್ದು, ಅಲ್ಲಿ ಕೆಲವು ದಿನ ಅಭ್ಯಾಸ ನಡೆಸಿ ಬರ್ಮಿಂಗ್‌ಹ್ಯಾಮ್‌ಗೆ ಕಾಮನ್‌ವೆಲ್ತ್ ಕೂಟಕ್ಕೆ ಹೋಗುತ್ತೇವೆ' ಎಂದು 26 ವರ್ಷದ ನಿಖತ್ ವಿವರಿಸಿದರು.

'ಬೆಂಗಳೂರು ನನಗೆ ಇಷ್ಟದ ಊರು. 2017ರಲ್ಲಿ ಶಸ್ತ್ರಚಿಕಿತ್ಸೆಯ ನಂತರ ಪುನಶ್ಚೇತನ ಮತ್ತು ಆರೈಕೆಗೆ ಇಲ್ಲಿಯೇ ಇದ್ದೆ. ಸುಮಾರು ಒಂದು ತಿಂಗಳ ವಾಸ್ತವ್ಯ ಇತ್ತು. ಹಲವು ಬಾರಿ ಸಂಜೆ ಹೊತ್ತಿನಲ್ಲಿ ಬ್ರಿಗೇಡ್ ರಸ್ತೆ, ಎಂ.ಜಿ. ರಸ್ತೆಗಳಲ್ಲಿ ಜಾಗಿಂಗ್ ಮತ್ತು ವಾಕಿಂಗ್ ಮಾಡಲು ಬರುತ್ತಿದ್ದೆವು. ಇಲ್ಲಿಯ ವಾತಾವರಣ, ತಿನಿಸುಗಳು ಬಹಳ ಇಷ್ಟ' ಎಂದರು.



ಗಾಜಿನ ಪರದೆ ಪುಡಿಯಾದಾಗ ಮುಖ ಮುಚ್ಚಿಕೊಂಡ ನಿಖತ್ ಜರೀನ್

ಗಾಜಿನ 'ಗಿಮಿಕ್' ಮೂಡಿಸಿದ ಆತಂಕ

ನಿಖತ್ ಜರೀನ್ ಅವರು ಕಾರ್ಯಕ್ರಮಕ್ಕೆ ಪ್ರವೇಶಿಸುವುದನ್ನು ನಾಟಕೀಯವಾಗಿಸಲು ಮಾಡಿದ ಯೋಜನೆಯು ಕೆಲಕ್ಷಣ ಆತಂಕ ಮೂಡಿಸಿತು.

ಬಾಕ್ಸಿಂಗ್ ಗ್ಲೌಸ್ ಧರಿಸಿದ್ದ ನಿಖತ್ ಕಾರ್ಯಕ್ರಮದ ಅಂಗಣದೊಳಗೆ ಕಾಲಿಡುವ ಮುನ್ನ ಸುಮಾರು ಆರಡಿ ಎತ್ತರದ ಗಾಜಿನ ಪರದೆಯನ್ನು ಪುಡಿಗಟ್ಟುವ (ಸಿನಿಮಾ ಸ್ಟಂಟ್ ಮಾದರಿ) ವ್ಯವಸ್ಥೆ ಮಾಡಲಾಗಿತ್ತು. ಆಯೋಜಕರ ಯೋಜನೆಯಂತೆ ಗಾಜು ಪುಡಿಯಾಯಿತು. ಆದರೆ ಅಲ್ಲಿ ಸೇರಿದ್ದ ಕೆಲವು ಜನರು, ಮಾಧ್ಯಮದವರು ಮತ್ತು ನಿಖತ್ ಅವರು ಕೆಲಕ್ಷಣ ದಂಗಾದರು.

ಸುದ್ದಿಗಾರರಿಗೆ ಈ ಕುರಿತು ಆಯೋಜಕರ ಪರವಾಗಿ ಸ್ಪಷ್ಟನೆ ನೀಡಿದ ವಕ್ತಾರರು, 'ಜನರು ಮತ್ತು ನಿಖತ್ ಅವರ ಸುರಕ್ಷತೆಗೆ ಎಲ್ಲ ವ್ಯವಸ್ಥೆ ಮಾಡಿಕೊಂಡೇ ಈ ಸ್ಟಂಟ್ ಏರ್ಪಡಿಸಲಾಗಿತ್ತು. ಅಷ್ಟಕ್ಕೂ ಇದು ಗಿಮಿಕ್ (ಶುಗರ್ ಕೋಟೆಡ್) ಗ್ಲಾಸ್. ಇದು ಪುಡಿಯಾಗಿ ಸಿಡಿದರೂ ಯಾವುದೇ ಹಾನಿ ಮಾಡದು. ಆತಂಕ ಪಡುವ ಅವಶ್ಯಕತೆ ಇಲ್ಲ' ಎಂದರು.

ಕ್ರಿಕೆಟ್: ವಿಶ್ವಕಪ್ ಬಳಿಕ ನ್ಯೂಜಿಲೆಂಡ್‌ಗೆ ಭಾರತ ತಂಡ

ವೆಲ್ಲಿಂಗ್ಟನ್ (ಪಿಟಿಐ): ಈ ವರ್ಷ ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿ ಮುಕ್ತಾಯದ ಬಳಿಕ ಭಾರತ ತಂಡವು ನ್ಯೂಜಿಲೆಂಡ್ ಪ್ರವಾಸ ಕೈಗೊಳ್ಳಲಿದೆ. ಆತಿಥೇಯ ತಂಡವು ಭಾರತದ ವಿರುದ್ಧ ತಲಾ ಮೂರು ಪಂದ್ಯಗಳ ಏಕದಿನ ಹಾಗೂ ಚುಟುಕು ಕ್ರಿಕೆಟ್ ಸರಣಿಯಲ್ಲಿ ಕಣಕ್ಕಿಳಿಯಲಿದೆ ಎಂದು 'ನ್ಯೂಜಿಲೆಂಡ್ ಕ್ರಿಕೆಟ್' ಮಂಗಳವಾರ ತಿಳಿಸಿದೆ.

ಭಾರತ, ನವೆಂಬರ್ 18ರಿಂದ 30ರವರೆಗೆ ನ್ಯೂಜಿಲೆಂಡ್ ಪ್ರವಾಸ ಕೈಗೊಳ್ಳಲಿದೆ. ನ್ಯೂಜಿಲೆಂಡ್ ತಂಡವು ಮುಂದಿನ ವರ್ಷ ಜನವರಿಯಲ್ಲಿ ಭಾರತಕ್ಕೆ ಬರಲಿದೆ ಎಂದು ಹೇಳಿದೆ.

ಭಾರತ ತಂಡ ಸದ್ಯ ಇಂಗ್ಲೆಂಡ್ ಪ್ರವಾಸದಲ್ಲಿದೆ. ಉಭಯ ತಂಡಗಳು ತಲಾ ಒಂದು ಟೆಸ್ಟ್, ಏಕದಿನ ಹಾಗೂ ಟಿ20 ಪಂದ್ಯಗಳನ್ನು ಆಡಲಿವೆ. ಭಾರತ ಹಾಗೂ ಇಂಗ್ಲೆಂಡ್, ಕಳೆದ ವರ್ಷ ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಮುಖಾಮುಖಿಯಾಗಿದ್ದವು. ಆದರೆ, ಕೋವಿಡ್‌ನಿಂದಾಗಿ ಕೊನೇ ಪಂದ್ಯ ಮುಂದೂಡಲಾಗಿತ್ತು. ಆ ಪಂದ್ಯವನ್ನು ಮರುನಿಗದಿ ಮಾಡಲಾಗಿದ್ದು, ಜುಲೈ 1 ರಂದು ಆರಂಭವಾಗಲಿದೆ. ನಂತರ ಟಿ20 (ಜುಲೈ 7–10) ಹಾಗೂ ಏಕದಿನ (ಜುಲೈ 12–17) ಸರಣಿ ನಡೆಯಲಿವೆ.

ಇದಾದ ಬಳಿಕ ಭಾರತ ತಂಡ ವೆಸ್ಟ್ ಇಂಡೀಸ್‌ಗೆ ತೆರಳಲಿದ್ದು, ಜುಲೈ 22ರಿಂದ ಆಗಸ್ಟ್ 7ರವರೆಗೆ ಮೂರು ಏಕದಿನ ಹಾಗೂ ಐದು ಟಿ20 ಪಂದ್ಯಗಳನ್ನಾಡಲಿದೆ. ಅಕ್ಟೋಬರ್ 16ರಿಂದ 13ರ ವರೆಗೆ ಟಿ20 ವಿಶ್ವಕಪ್ ನಡೆಯಲಿದೆ.

ಭಾರತ– ನ್ಯೂಜಿಲೆಂಡ್ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ
ನ.18	ಮೊದಲ ಟಿ20	ವೆಲ್ಲಿಂಗ್ಟನ್
ನ.20	ಎರಡನೇ ಟಿ20	ಮೌಂಟ್ ಮಾಂಗನೂಯಿ
ನ.22	ಮೂರನೇ ಟಿ20	ನೇಪಿಯರ್
ನ.25	ಮೊದಲ ಏಕದಿನ	ಆಕ್ಲೆಂಡ್
ನ.27	ಎರಡನೇ ಏಕದಿನ	ಹ್ಯಾಮಿಲ್ಟನ್
ನ.30	ಮೂರನೇ ಏಕದಿನ	ಕ್ರೈಸ್ಟ್‌ಚರ್ಚ್

ಮೈಸೂರು ರೇಸ್

ಗ್ಯಾಲರಿ ಕ್ವೀನ್ ಗೆಲ್ಲುವ ನಿರೀಕ್ಷೆ

ಎಸ್.ವಿ.ಸುಬ್ರಮಣಿಯಮ್ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗ್ಯಾಲರಿ ಕ್ವೀನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹೈಲ್ಯಾಂಡ್ ಪಾರ್ಕ್ 4, ಬ್ಲಡ್ 6, ಎರ್ವೆಲಾಸಿಟಿ 1
2ನೇ ರೇಸ್: ಸ್ಟಾರ್ ಪೆಕ್ 3, ಲಕ್ಕಿ ಒನ್ 5, ವರ್ಜೀನಿಯಾ ಕ್ವೀನ್ 10
3ನೇ ರೇಸ್: ಬೆಂಗಾಜಿ 5, ಡಿ ಕರ್ಣ 4, ಎನ್‌ಆರ್‌ಐ ಪ್ಲಾನ್ 1
4ನೇ ರೇಸ್: ವೈಲ್ಡ್ ಸ್ವೆಲ್ 3, ಲಾರ್ಡ್ ಕಮಾಂಡರ್ 4, ಮಾರಿಗೋಲ್ಡ್ 6
5ನೇ ರೇಸ್: ಫೆಸೆಟ್ಸ್ ಆಫ್ ಲೈಫ್ 8, ಡಾರ್ಕ್ ಸೀಕ್ರೆಟ್ 2, ಐ ಆಫ್ ದಿ ಮೈಂಡ್ 4
6ನೇ ರೇಸ್: ಗ್ಯಾಲರಿ ಕ್ವೀನ್ 8, ಗಿಂಟೋಕಿ 2, ಅಕ್ವಿಲಾ ಡಿ'ಒರೊ 6
7ನೇ ರೇಸ್: ಎಮೆಲ್ಡಾ 1, ಚಾರ್ಶಿ 4, ಟರ್ಫ್ ಲೆಜೆಂಡ್ 6
8ನೇ ರೇಸ್: ಫ್ಲೆಮಿಂಗೊ ಡ್ಯಾನ್ಸರ್ 4, ಕಂಟ್ರೆಸ್ ಫೇಮ್ 2, ಡಾಲ್‌ಹೌಸಿ 7

ಉತ್ತಮ ಬೆಟ್: ಎಮೆಲ್ಡಾ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಇಂಗ್ಲೆಂಡ್‌ಗೆ ಮುಂಬೈ ಯುವಬಳಗ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ 15ನೇ ಆವೃತ್ತಿಯ ಲೀಗ್ ಹಂತದಲ್ಲಿಯೇ ಹೊರಬಿದ್ದ ಮುಂಬೈ ಇಂಡಿಯನ್ಸ್ ತಂಡವು ಮುಂದಿನ ಟೂರ್ನಿಗಾಗಿ ಸಿದ್ಧತೆ ಆರಂಭಿಸಿದೆ.

ತಂಡದಲ್ಲಿರುವ ಯುವ ಆಟಗಾರರ ಬಳಗಕ್ಕೆ ಇಂಗ್ಲೆಂಡ್‌ಗೆ ಮೂರು ವಾರಗಳ ಪ್ರವಾಸ ಏರ್ಪಡಿಸಲಾಗಿದೆ. ತಂಡವು ಅಲ್ಲಿಯ ಹತ್ತು ಪ್ರಮುಖ ಕ್ಲಬ್ ಗಳ ಎದುರು ಟಿ20 ಪಂದ್ಯಗಳನ್ನು ಆಡಲಿದೆ.

'ಎನ್.ಟಿ. ತಿಲಕ್ ವರ್ಮಾ, ಕುಮಾರ ಕಾರ್ತಿಕೇಯ, ರಮಣದೀಪ್ ಸಿಂಗ್, ಹೃತಿಕ್ ಶೋಕಿನ್ ಇರುವ ತಂಡವು ಇಂಗ್ಲೆಂಡ್‌ಗೆ ತೆರಳಲಿದೆ. ಅರ್ಜುನ್ ತೆಂಡೂಲ್ಕರ್ ಈಗಾಗಲೇ ಇಂಗ್ಲೆಂಡ್‌ನಲ್ಲಿದ್ದಾರೆ' ಎಂದು ಫ್ರಾಂಚೈಸಿ ಮೂಲಗಳು ತಿಳಿಸಿವೆ.

ಬಿಎಫ್‌ಸಿ: ಲಿಯೊನ್, ಭುಟಿಯಾ ಒಪ್ಪಂದ ವಿಸ್ತರಣೆ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಆಡುವ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಲಿಯೊನ್ ಅಗಸ್ಟಿನ್ ಹಾಗೂ ನಾಮ್‌ಗ್ಯಾಲ್ ಭುಟಿಯಾ ಅವರ ಒಪ್ಪಂದವನ್ನು ವಿಸ್ತರಿಸಿದೆ.

ಲಿಯೊನ್ ಅವರು ಹೆಚ್ಚುವರಿಯಾಗಿ ಎರಡು ವರ್ಷ ತಂಡವನ್ನು ಪ್ರತಿನಿಧಿಸಲಿದ್ದಾರೆ. ಭುಟಿಯಾ 2025–26ರ ಆವೃತ್ತಿಯವರೆಗೂ ಬಿಎಫ್‌ಸಿಗೆ ಆಡಲಿದ್ದಾರೆ.

2018ರ ಎಎಫ್‌ಸಿ ಕಪ್ ಟೂರ್ನಿಯ ಮೂಲಕ ಲಿಯೊನ್ ಬಿಎಫ್‌ಸಿಗೆ ಪದಾರ್ಪಣೆ ಮಾಡಿದ್ದರು. 2019–20ರ ಆವೃತ್ತಿಯಲ್ಲಿ ಹೈದರಾಬಾದ್ ಎಫ್‌ಸಿ ಎದುರಿನ ಪಂದ್ಯದಲ್ಲಿ ಮೊದಲ ಗೋಲು ದಾಖಲಿಸಿದ್ದರು. 2021ರ ಡುರಾಂಡ್ ಕಪ್ ಟೂರ್ನಿಯಲ್ಲೂ ಆಡಿದ್ದರು.



ನಾಮ್‌ಗ್ಯಾಲ್ ಭುಟಿಯಾ

2017ರಲ್ಲಿ ಭುಟಿಯಾ ಬಿಎಫ್‌ಸಿ ಸೇರಿದ್ದರು. 'ಲೋನ್' ಆಧಾರದಲ್ಲಿ ಐ-ಲೀಗ್ ತಂಡ ಇಂಡಿಯನ್ ಏರೋಸ್ ಪರವೂ ಆಡಿದ್ದರು.

ವಿಂಬಲ್ಡನ್ ಟೆನಿಸ್ ಟೂರ್ನಿ: ಮರಿಯಾ ಸಕರಿಗೆ ಗೆಲುವಿನ ಸಿಹಿ, ನಡಾಲ್‌ಗೆ ಜಯ

ಸೆಲೆಸ್ ದಾಖಲೆ ಸರಿಗಟ್ಟಿದ ಸ್ವಟೆಕ್

ವಿಂಬಲ್ಡನ್, ಇಂಗ್ಲೆಂಡ್ (ಎಪಿ/ ರಾಯಿಟರ್ಸ್/ಎಎಫ್‌ಪಿ): ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಇಗಾ ಸ್ವಟೆಕ್ ಸತತ 36ನೇ ಪಂದ್ಯದಲ್ಲಿ ಜಯಭೇರಿ ಮೊಳಗಿಸಿದರು. ಇದರೊಂದಿಗೆ ಅಮೆರಿಕದ ಮೋನಿಕಾ ಸೆಲೆಸ್ 1990ರಲ್ಲಿ ನಿರ್ಮಿಸಿದ್ದ ದಾಖಲೆಯನ್ನು ಸರಿಗಟ್ಟಿದರು.

ಇಲ್ಲಿ ನಡೆಯುತ್ತಿರುವ ವಿಂಬಲ್ಡನ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಮಂಗಳವಾರ ಜಯ ಸಾಧಿಸುವ ಮೂಲಕ ಪೋಲೆಂಡ್‌ನ ಸ್ವಟೆಕ್ ಈ ಶ್ರೇಯ ಗಳಿಸಿದರು. ಸ್ವಟೆಕ್ 6–0, 6–3ರಿಂದ ಕ್ರೊವೇಷ್ಯಾದ, ಅರ್ಹತಾ ಸುತ್ತಿನಲ್ಲಿ ಗೆದ್ದು ಬಂದ ಆಟಗಾರ್ತಿ ಜಾನಾ ಫೆಟ್ ಅವರನ್ನು ಮಣಿಸಿದರು.

ಅಂಗಣದಲ್ಲಿ ಬೀಸುತ್ತಿದ್ದ ಬಿರುಗಾಳಿಯ ಮಧ್ಯೆಯೂ ಸ್ವಟೆಕ್ ಸುಲಭದ ಜಯ ಸಂಪಾದಿಸಿದರು. ಚುರುಕಿನ ಸರ್ವ್‌ಗಳ ಮೂಲಕ ಗಮಸೆಳೆದ ಅವರು ಮೊದಲ ಸೆಟ್‌ಅನ್ನು ಒಂದೂ ಗೇಮ್ ಕಳೆದುಕೊಳ್ಳದೆ ತಮ್ಮದಾಗಿಸಿಕೊಂಡರು. ಈ ವರ್ಷ 17ನೇ ಬಾರಿ 6–0 ಅಂತರದ ಸೆಟ್ ಜಯಿಸಿದರು.

ಎರಡನೇ ಸೆಟ್‌ನಲ್ಲಿ ಫೆಟ್ ತಿರುಗೇಟು ನೀಡುವ ಭರವಸೆ ಮೂಡಿಸಿದರು. ಆರಂಭದಲ್ಲೇ 3–1ರಿಂದ ಮುನ್ನಡೆ ಸಾಧಿಸಿದರು. ಆದರೆ ಅತಿ ವೇಗವಾಗಿ ಐದು ಗೇಮ್ ಗಳಿಸಿದ ಸ್ವಟೆಕ್ ಸೆಟ್ ಹಾಗೂ ಪಂದ್ಯ ಗೆದ್ದು ಬೀಗಿದರು.

ಇನ್ನೊಂದು ಹಣಾಹಣಿಯಲ್ಲಿ ಗ್ರೀಕ್‌ನ ಮರಿಯಾ ಸಕರಿ 6-1, 6-4ರಿಂದ ಆಸ್ಟ್ರೇಲಿಯಾದ ಜೊ ಹಿವೆಸ್ ಅವರನ್ನು ಸೋಲಿಸಿದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಮೊದಲ ಸುತ್ತಿನ ಹಣಾಹಣಿಯಲ್ಲಿ ಸ್ಪೇನ್ನ ರಫೆಲ್ ನಡಾಲ್ 6–4, 6–3, 3–6, 6–4 ರಲ್ಲಿ ಅರ್ಜೆಂಟೀನದ ಫ್ರಾನ್ಸಿಸ್ಕೊ ಸೆರುಂಡೊಲೊ ಅವರನ್ನು ಮಣಿಸಿದರು.

ಇತರ ಪಂದ್ಯಗಳಲ್ಲಿ ಅಮೆರಿಕದ ರೆಲಿ ಒಪೆಲ್ಕಾ 7-6 (7/5), 6-4, 6-4ರಿಂದ ಸ್ಪೇನ್‌ನ ಕಾರ್ಲೋಸ್ ಟ್ಯಾಬನರ್ ಅವರನ್ನು ಮಣಿಸಿದರು. ಮೊದಲ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಸ್ವೀಡನ್‌ನ ಮಿಖಾಯಿಲ್ ಯಮರ್ 6-3, 7-5, 7-5ರಿಂದ ಜರ್ಮನಿಯ ಡೇನಿಯಲ್ ಅಲ್ಟ್‌ಮೇರ್ ಎದುರು ಗೆದ್ದರು.

ಡಿಮಿಟ್ರೊವ್ ನಿವೃತ್ತಿ: ಅಮೆರಿಕದ ಸ್ಟೀವ್ ಜಾನ್ಸನ್ ಎದುರು ಕಣಕ್ಕಿಳಿದಿದ್ದ ಬಲ್ಗೇರಿಯದ ಗ್ರಿಗೊರ್ ಡಿಮಿಟ್ರೊವ್ ಪಂದ್ಯದ ನಡುವೆಯೇ ಗಾಯದಿಂದಾಗಿ ನಿವೃತ್ತಿ ಪಡೆದರು. ಈ ವೇಳೆ ಸ್ಟೀವ್–ಡಿಮಿಟ್ರೊವ್ ಸ್ಕೋರ್ 4–6, 5–2 ಆಗಿತ್ತು.

ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಜೆಕ್ ಗಣರಾಜ್ಯದ ಬಾರ್ಬರಾ ಕ್ರೇಸಿಕೊವಾ 7-6 (7/4), 6-3ರಿಂದ ಬೆಲ್ಜಿಯಂನ ಮರಿನಾ ಜನೆವ್‌ಸ್ಕಾ ಎದುರು, ಚೀನಾದ ಜಾಂಗ್ ಶುಯಿ 6-4, 6-0ಯಿಂದ ಜಪಾನ್‌ನ ಮಿಸಾಕಿ ಡೊಯಿ ವಿರುದ್ಧ, ಲಾಟ್ವಿಯಾದ ಎಲೆನಾ ಒಸ್ಟಾಪೆಂಕೊ 6-4, 6-4ರಿಂದ ಫ್ರಾನ್ಸ್‌ನ ಒಸೀನ್ ದೊಡಿನ್ ವಿರುದ್ಧ ಜಯ ಸಾಧಿಸಿ ಮುನ್ನಡೆದರು.

ಬೆನ್ಸಿಚ್‌ಗೆ ಆಘಾತ: ಸ್ವಿಟ್ಜರ್ಲೆಂಡ್ ಆಟಗಾರ್ತಿ, 14ನೇ ಶ್ರೇಯಾಂಕದ ಬೆಲಿಂಡಾ ಬೆನ್ಸಿಚ್ 4–6, 7–5, 2–6ರಿಂದ ಚೀನಾದ ವಾಂಗ್ ಕಿಯಾಂಗ್ ಎದುರು ಸೋತರು.

ಬಾಲ್‌ಬಾಯ್ ನೋವಿಗೆ ಮಿಡಿದ ಬರೇಜ್: ಬ್ರಿಟನ್ ಆಟಗಾರ್ತಿ ಜೋಡಿ ಬರೇಜ್ ಮೊದಲ ಸುತ್ತಿನಲ್ಲೇ ಸೋತರೂ ಮಾನವೀಯ ನಡೆಯಿಂದ ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು. ಸೋಮವಾರ ಪಂದ್ಯ ನಡೆಯುತ್ತಿದ್ದ ವೇಳೆ ಅನಾರೋಗ್ಯದಿಂದ ಬಳಲಿದ ಬಾಲ್‌ಬಾಯ್‌ಗೆ ನೆರವು ನೀಡಿದರು.

ಅಂಗಣದಲ್ಲಿ ಕುಸಿದ ಆತನೆಡೆಗೆ ತೆರಳಿದ ಬರೇಜ್, ಸಿಹಿ ಪದಾರ್ಥ ನೀಡಿ ಉಪಚರಿಸಿದರು.

ಮೊದಲ ಸುತ್ತಿನ ಪಂದ್ಯದಲ್ಲಿ ಬರೇಜ್ 2–6, 3–6ರಿಂದ ಉಕ್ರೇನ್‌ನ ಲೇಸಿಯಾ ಸುರೆಂಕೊ ಎದುರು ಸೋತರು.



ಇಗಾ ಸ್ವಟೆಕ್ ಆಟದ ಪರಿ– ಎಎಫ್‌ಪಿ ಚಿತ್ರ

ಬೆರೆಟಿನಿಗೆ ಕೋವಿಡ್

2021ರ ವಿಂಬಲ್ಡನ್ ಟೂರ್ನಿಯ ಪುರುಷರ ಸಿಂಗಲ್ಸ್ ರನ್ನರ್‌ಅಪ್ ಮ್ಯಾಟಿಯೊ ಬೆರೆಟಿನಿ ಅವರಿಗೆ ಕೋವಿಡ್ ಖಚಿತಪಟ್ಟಿದ್ದು ಟೂರ್ನಿಯಿಂದ ಹೊರಬಿದ್ದಿದ್ದಾರೆ. ಮಂಗಳವಾರ ಮೊದಲ ಸುತ್ತಿನ ಪಂದ್ಯ ಆರಂಭವಾಗುವ ತಾಸಿನ ಮೊದಲು ಅವರಿಗೆ ಸೋಂಕು ಇರುವುದು ದೃಢಪಟ್ಟಿದೆ.

ಇಟಲಿಯ ಆಟಗಾರ ಟೂರ್ನಿಯಿಂದ ಹಿಂದೆ ಸರಿದಿರುವುದನ್ನು ಆಲ್ ಇಂಗ್ಲೆಂಡ್ ಕ್ಲಬ್ ಪ್ರಕಟಿಸಿದೆ.

ಇಂಗ್ಲೆಂಡ್‌ಗೆ ವಿಶ್ವಕಪ್ ಕಿರೀಟ ತೊಡಿಸಿದ ನಾಯಕ

ವಿದಾಯಕ್ಕೆ ಇದು ಸಕಾಲ: ಮಾರ್ಗನ್

ಲಂಡನ್ (ಎಎಫ್‌ಪಿ): ವಿಶ್ವಕಪ್ ವಿಜೇತ ಇಂಗ್ಲೆಂಡ್ ಕ್ರಿಕೆಟ್ ತಂಡದ ನಾಯಕ ಏಯಾನ್ ಮಾರ್ಗನ್ ಕ್ರಿಕೆಟ್‌ಗೆ ಮಂಗಳವಾರ ನಿವೃತ್ತಿ ಘೋಷಿಸಿದರು.

ಇಂಗ್ಲೆಂಡ್ ತಂಡವು 2019ರ ಏಕದಿನ ವಿಶ್ವಕಪ್ ಜಯಿಸಿತ್ತು. ಟಿ20 ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿಯೂ ಅವರ ನಾಯಕತ್ವದಲ್ಲಿ ಅಗ್ರಸ್ಥಾನಕ್ಕೇರಿತ್ತು. ಕಳೆದೊಂದು ವರ್ಷದಿಂದ 35 ವರ್ಷದ ಮಾರ್ಗನ್ ಫಾರ್ಮ್ ಕೊರತೆ ಅನುಭವಿಸುತ್ತಿದ್ದರು.

‘ವೃತ್ತಿಜೀವನದ ಕೊನೆಯ ಹಂತಕ್ಕೆ ತಲುಪಿದ್ದೇನೆ. ವಿದಾಯ ಘೋಷಿಸಲು ಇದು ಸೂಕ್ತ ಸಮಯ. ಬಹಳಷ್ಟು ಅಮೋಘವಾದ ಕ್ಷಣಗಳನ್ನು ಈ ಪಯಣದಲ್ಲಿ ಅನುಭವಿಸಿದ್ದೇನೆ’ ಎಂದು ಸ್ಕೈ ಸ್ಪೋರ್ಟ್ಸ್ ವಾಹಿನಿಯಲ್ಲಿ ಹೇಳಿದ್ದಾರೆ.

ಮಾರ್ಗನ್ 225 ಏಕದಿನ ಪಂದ್ಯಗಳಲ್ಲಿ 6957 ರನ್ ಮತ್ತು 115 ಟಿ20 ಪಂದ್ಯಗಳಲ್ಲಿ 2458 ರನ್‌ಗಳನ್ನು ಗಳಿಸಿದ್ದಾರೆ.

ಐರ್ಲೆಂಡ್‌ನ ಡಬ್ಲಿನ್‌ನಲ್ಲಿ ಜನಿಸಿ ಇಂಗ್ಲೆಂಡ್‌ನಲ್ಲಿ ಬೆಳೆದವರು ಮಾರ್ಗನ್. 2010ರಲ್ಲಿ ಇಂಗ್ಲೆಂಡ್ ತಂಡವು ಟಿ20 ವಿಶ್ವಕಪ್ ಗೆದ್ದಾಗಲೂ ತಂಡದಲ್ಲಿದ್ದರು. ಎರಡೂ ಮಾದರಿಗಳಲ್ಲಿ ವಿಶ್ವಕಪ್ ಜಯಿಸಿದ ಇಂಗ್ಲೆಂಡ್ ದೇಶದ ಏಕೈಕ ಕ್ರಿಕೆಟಿಗ ಅವರಾಗಿದ್ದಾರೆ.

‘ಬಹಳ ಭಾರವಾದ ಹೃದಯದಿಂದ ಈ ನಿರ್ಧಾರ ಕೈಗೊಂಡಿದ್ದೇನೆ. ಆದರೆ ಆಟದ ನಂಟು ಮುಂದುವರಿಸುತ್ತೇನೆ’ ಎಂದಿದ್ದಾರೆ.

ಅವರು ಕೌಂಟಿಯಲ್ಲಿ ಮಿಡಲ್‌ಸೆಕ್ಸ್ ತಂಡ ಮತ್ತು ಹಂಡ್ರೆಡ್ ಫ್ರ್ಯಾಂಚೈಸಿ ಲಂಡನ್ ಸ್ಪಿರಿಟ್‌ಗೆ ಆಡಲಿದ್ದಾರೆ.



ವಿಶ್ವಕಪ್‌ನೊಂದಿಗೆ ಏಯಾನ್ ಮಾರ್ಗನ್

ಬ್ಯಾಡ್ಮಿಂಟನ್: ಪ್ರಣಯ್ ಶುಭಾರಂಭ

ಕ್ವಾಲಾಲಂಪುರ (ಪಿಟಿಐ): ಡರೆನ್ ಲಿವ್ ಸವಾಲು ಮೀರಿದ ಭಾರತದ ಎಚ್. ಎಸ್.ಪ್ರಣಯ್ ಅವರು ಮಲೇಷ್ಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಆದರೆ ಬಿ.ಸಾಯಿ ಪ್ರಣೀತ್ ಮತ್ತು ಸಮೀರ್ ವರ್ಮಾ ಮೊದಲ ತಡೆ ದಾಟುವಲ್ಲಿ ವಿಫಲರಾಗಿದ್ದಾರೆ.

ಮಂಗಳವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಪ್ರಣಯ್ 21-14, 17-21, 21-18ರಿಂದ ಮಲೇಷ್ಯಾ ಆಟಗಾರನನ್ನು ಮಣಿಸಿದರು. 62 ನಿಮಿಷಗಳಲ್ಲಿ ಈ ಹಣಾಹಣಿ ಮುಗಿಯಿತು.

ಪ್ರಣೀತ್ 15-21, 21-19, 9-21ರಿಂದ ಇಂಡೊನೇಷ್ಯಾದ ಆ್ಯಂಟನಿ ಗಿಂಟಿಂಗ್ ಎದುರು ಮಣಿದರು.

ಸಮೀರ್ 14-21, 21-13, 7-21ರಿಂದ ಇಂಡೊನೇಷ್ಯಾದ ಜೊನಾಥನ್ ಕ್ರಿಸ್ಟಿ ಎದುರು ಎಡವಿದರು.

ಸಂಕ್ಷಿಪ್ತ ಸುದ್ದಿ

ಹಾಕಿ ಆಟಗಾರ ವರಿಂದರ್ ಸಿಂಗ್ ನಿಧನ

ನವದೆಹಲಿ (ಪಿಟಿಐ): ವಿಶ್ವಕಪ್ ಹಾಗೂ ಒಲಿಂಪಿಕ್ಸ್ ಪದಕ ವಿಜೇತ ಭಾರತ ಹಾಕಿ ತಂಡದಲ್ಲಿ ಆಡಿದ್ದ ವರಿಂದರ್ ಸಿಂಗ್ (75) ಜಲಂಧರ್‌ನಲ್ಲಿ ಮಂಗಳವಾರ ನಿಧನರಾದರು.



ವರಿಂದರ್

ಭಾರತ ತಂಡವು ಕ್ವಾಲಾಲಂಪುರದಲ್ಲಿ ನಡೆದ 1975ರ ವಿಶ್ವಕಪ್‌ನ ಫೈನಲ್‌ನಲ್ಲಿ ಪಾಕಿಸ್ತಾನ ತಂಡವನ್ನು 2–1ರಿಂದ ಮಣಿಸಿ ಚಿನ್ನ ಜಯಿಸಿತ್ತು. ಪ್ರತಿಷ್ಠಿತ ಟೂರ್ನಿಯಲ್ಲಿ ಭಾರತ ಜಯಿಸಿದ ಏಕೈಕ ಚಿನ್ನ ಇದು. ಈ ತಂಡವನ್ನು ವರಿಂದರ್ ಪ್ರತಿನಿಧಿಸಿದ್ದರು.

1972ರ ಮ್ಯೂನಿಕ್ ಒಲಿಂಪಿಕ್ಸ್‌ನಲ್ಲಿ ಕಂಚು ಮತ್ತು 1973ರಲ್ಲಿ ಆ್ಯಮ್‌ಸ್ಟರ್‌ಡ್ಯಾಮ್ ವಿಶ್ವಕಪ್‌ನಲ್ಲಿ ಬೆಳ್ಳಿ ಜಯಿಸಿದ್ದ ತಂಡದಲ್ಲಿಯೂ ಅವರು ಆಡಿದ್ದರು. 1974 ಮತ್ತು 1978ರ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ವಿಜೇತ ಮತ್ತು 1975ರ ಮಾಂಟ್ರಿಯಲ್ ಒಲಿಂಪಿಕ್ಸ್‌ನಲ್ಲಿ ಆಡಿದ್ದ ತಂಡದಲ್ಲಿ ಇದ್ದರು.

2007ರಲ್ಲಿ ವರಿಂದರ್ ಅವರಿಗೆ ಜೀವಮಾನ ಸಾಧನೆಗಾಗಿ ನೀಡುವ ಪ್ರತಿಷ್ಠಿತ ಧ್ಯಾನ್‌ಚಂದ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಅವರ ನಿಧನಕ್ಕೆ ಹಾಕಿ ಇಂಡಿಯಾ ಸಂತಾಪ ಸೂಚಿಸಿದೆ.

ಲಾಕ್ರ ವಿರುದ್ಧ ಕೊಲೆ ಆರೋಪ

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡದ ಆಟಗಾರ ಬೀರೇಂದರ್ ಲಾಕ್ರ ಅವರ ವಿರುದ್ಧ ಕೊಲೆ ಆರೋಪ ಕೇಳಿಬಂದಿದೆ.

ಲಾಕ್ರ ಬಾಲ್ಯದ ಗೆಳೆಯ ಆನಂದ್ ಟೊಪ್ಪೊ ಫೆಬ್ರುವರಿಯಲ್ಲಿ ಭುವನೇಶ್ವರದ ಫ್ಲ್ಯಾಟ್‌ವೊಂದರಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು. ಪೊಲೀಸರು ಈ ಸಂಬಂಧ ಆತ್ಮಹತ್ಯೆ ಪ್ರಕರಣ ದಾಖಲಿಸಿಕೊಂಡಿದ್ದರು.

ಆದರೆ ಆನಂದ್ ಅವರ ತಂದೆ ಬಂಧನ್ ಇದೀಗ ಹೇಳಿಕೆ ನೀಡಿದ್ದು, ‘ನನ್ನ ಮಗನದ್ದು ಆತ್ಮಹತ್ಯೆ ಅಲ್ಲ. ಆತನನ್ನು ಕೊಲೆ ಮಾಡಲಾಗಿದೆ. ಲಾಕ್ರ ಕೂಡಾ ಕೊಲೆಯಲ್ಲಿ ಭಾಗಿಯಾಗಿದ್ದಾರೆ’ ಎಂದು ಆರೋಪಿಸಿದ್ದಾರೆ.


‘ಈ ಹಿಂದೆ ಡಿಎಸ್‌ಪಿಯಾಗಿಯೂ ಕೆಲಸ ಮಾಡಿದ್ದ ಲಾಕ್ರ ಪ್ರಭಾವಿ ವ್ಯಕ್ತಿಯಾಗಿರುವುದರಿಂದ ಪೊಲೀಸರು ಪ್ರಕರಣ ಮುಚ್ಚಿಹಾಕಿದ್ದಾರೆ. ಎಫ್‌ಐಆರ್ ದಾಖಲಿಸಲು ಕಳೆದ ನಾಲ್ಕು ತಿಂಗಳುಗಳಿಂದ ಪ್ರಯತ್ನಿಸುತ್ತಿದ್ದೇನೆ. ಆದರೆ ಪೊಲೀಸರು ನನ್ನ ನೆರವಿಗೆ ಬರದ ಕಾರಣ ಮಾಧ್ಯಮಗಳ ಮುಂದೆ ಬಂದಿದ್ದೇನೆ’ ಎಂದಿದ್ದಾರೆ.

‘ನನ್ನ ಮಗನಿಗೆ ನ್ಯಾಯ ದೊರೆಯಬೇಕು. ಆರೋಪಿಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿರುವ ಒಡಿಶಾ ಪೊಲೀಸರ ಮೇಲೆ ನನಗೆ ವಿಶ್ವಾಸವಿಲ್ಲ. ಪ್ರಕರಣದ ಬಗ್ಗೆ ಸ್ವತಂತ್ರ ತನಿಖೆ ನಡೆಯಬೇಕು’ ಎಂದು ಆಗ್ರಹಿಸಿದ್ದಾರೆ.

ಈ ಆರೋಪದ ಬಗ್ಗೆ ಲಾಕ್ರ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಎವರೆಸ್ಟ್ ಬೇಸ್ ಕ್ಯಾಂಪ್‌ಗೆ ಆದ್ಯಾ

ಬೆಂಗಳೂರು: ಮೈಸೂರಿನ ಬಾಲಕಿ ಆದ್ಯಾ ಬೆಣ್ಣೂರ್ ಇತ್ತೀಚೆಗೆ ಮೌಂಟ್ ಎವರೆಸ್ಟ್ ಬೇಸ್ ಕ್ಯಾಂಪ್‌ಗೆ ತಲುಪಿದ ಸಾಧನೆ ಮಾಡಿದ್ದಾರೆ.



ಟೆನಿಸ್ ಆಟಗಾರ್ತಿಯಾಗಿರುವ ಆದ್ಯಾ ಚಾರಣದ ಮೂಲಕ ನೇಪಾಳದಲ್ಲಿರುವ, 5,364 ಮೀಟರ್‌ಗಿಂತಲೂ ಎತ್ತರ ಪ್ರದೇಶದಲ್ಲಿರುವ ಬೇಸ್ ಕ್ಯಾಂಪ್ ತಲುಪಿದ್ದಾರೆ.

ಟಿ20: ಐರ್ಲೆಂಡ್‌ಗೆ ವೀರೋಚಿತ ಸೋಲು

ಹೂಡಾ ಶತಕ: ಭಾರತಕ್ಕೆ ಸರಣಿ

ಡಬ್ಲಿನ್ (ಪಿಟಿಐ): ದೀಪಕ್ ಹೂಡಾ ಅವರ ಬಿರುಸಿನ ಶತಕ (104) ಮತ್ತು ಸಂಜು ಸ್ಯಾಮ್ಸನ್ (77) ಅಬ್ಬರದ ಅರ್ಧಶತಕ ನೆರವಿನಿಂದ ಭಾರತ ತಂಡ ಎರಡನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧ 4 ರನ್‌ಗಳ ರೋಚಕ ಜಯ ಸಾಧಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ, 20 ಓವರ್‌ಗಳಲ್ಲಿ 7 ವಿಕೆಟ್‌ಗೆ 225 ರನ್ ಕಲೆಹಾಕಿತು. ಪ್ರಬಲ ಪೈಪೋಟಿ ನೀಡಿದ ಐರ್ಲೆಂಡ್ ನಿಗದಿತ ಓವರ್‌ಗಳಲ್ಲಿ 5 ವಿಕೆಟ್‌ಗೆ 221 ರನ್ ಗಳಿಸಿತು. ಎರಡು ಪಂದ್ಯಗಳ ಸರಣಿಯನ್ನು ಭಾರತ 2–0 ರಲ್ಲಿ ಜಯಿಸಿತು.

ಕಠಿಣ ಗುರಿ ಬೆನ್ನಟ್ಟಿದ ಐರ್ಲೆಂಡ್, ಕೊನೆಯವರೆಗೂ ಗೆಲುವಿಗಾಗಿ ಹೋರಾಟ ನಡೆಸಿತು. ಅಂತಿಮ ಓವರ್‌ನಲ್ಲಿ 17 ರನ್‌ಗಳು ಬೇಕಿದ್ದವು. ಉಮ್ರನ್ ಮಲಿಕ್ 12 ರನ್ ಬಿಟ್ಟುಕೊಟ್ಟು ಭಾರತ ನಿಟ್ಟುಸಿರು ಬಿಡುವಂತೆ ಮಾಡಿದರು.

ಹೂಡಾ ಅಬ್ಬರದ ಆಟ: ಇದಕ್ಕೂ ಮುನ್ನ ಭಾರತ ತಂಡ, ಹೂಡಾ ಶತಕದ ನೆರವಿನಿಂದ ಉತ್ತಮ ಮೊತ್ತ ಪೇರಿಸಿತು. ಎರಡನೇ ವಿಕೆಟ್‌ಗೆ ಜತೆಯಾದ ಹೂಡಾ ಮತ್ತು ಸ್ಯಾಮ್ಸನ್ ದಾಖಲೆಯ 176 ರನ್ ಸೇರಿಸಿದರು. ಟಿ20 ಪಂದ್ಯದಲ್ಲಿ ಭಾರತದ ಪರ ದಾಖಲಾದ ಅತಿದೊಡ್ಡ ಜತೆಯಾಟ ಇದು.

57 ಎಸೆತಗಳನ್ನು ಎದುರಿಸಿದ ಹೂಡಾ 9 ಬೌಂಡರಿ, 6 ಸಿಕ್ಸರ್ ಗಳಿಸಿದರು. ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ಶತಕ ಗಳಿಸಿದ ಭಾರತದ 4ನೇ ಬ್ಯಾಟ್ಸ್‌ಮನ್ ಎನಿಸಿಕೊಂಡರು.

ಸಂಕ್ಷಿಪ್ತ ಸ್ಕೋರ್: ಭಾರತ 7ಕ್ಕೆ 225 (20 ಓವರ್) ಸಂಜು ಸ್ಯಾಮ್ಸನ್ 77, ದೀಪಕ್ ಹೂಡಾ 104, ಸೂರ್ಯಕುಮಾರ್ ಯಾದವ್ 15, ಮಾರ್ಕ್ ಅಡೇರ್ 42ಕ್ಕೆ 3, ಜೋಸ್ ಲಿಟ್ಲ್ 38ಕ್ಕೆ 2) ಐರ್ಲೆಂಡ್: 5ಕ್ಕೆ 221 (20 ಓವರ್) ಪೌಲ್ ಸ್ಟರ್ಲಿಂಗ್ 40, ಆ್ಯಂಡಿ ಬಾಲ್ಬರ್ನಿ 60, ಹ್ಯಾರಿ ಟೆಕ್ಟರ್ 39, ಜಾರ್ಜ್ ಡಾಕ್ರೆಲ್ ಔಟಾಗದೆ 34, ರವಿ ಬಿಷ್ಣೋಯ್ 41ಕ್ಕೆ 1, ಉಮ್ರನ್ ಮಲಿಕ್ 42ಕ್ಕೆ 1

ಫಲಿತಾಂಶ: ಭಾರತಕ್ಕೆ 4 ರನ್ ಗೆಲುವು



ದೀಪಕ್ ಹೂಡಾ –ಎಎಫ್‌ಪಿ ಚಿತ್ರ

ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಮುಂಡಗೋಡದ ಸಿಮಿ

ಮುಂಡಗೋಡ : ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡದ ಎನ್.ಎಸ್. ಸಿಮಿ ಇಂಗ್ಲೆಂಡ್‌ನಲ್ಲಿ ಜುಲೈ 28ರಿಂದ ಆರಂಭವಾಗಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಲಿರುವ 4X100ಮೀ ರಿಲೇ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಜೂನ್ 26ರಂದು ಕಝುಕಿಸ್ತಾನದಲ್ಲಿ ನಡೆದ ಅಂತರರಾಷ್ಟ್ರೀಯ ಅಥ್ಲೆಟಿಕ್ಸ್‌ನ ರಿಲೇಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಸದ್ಯ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕಾಗಿ ಕೇರಳ ಹಾಗೂ ಪಂಜಾಬ್‌ನಲ್ಲಿ ಕಠಿಣ ತರಬೇತಿ ಪಡೆಯುತ್ತಿದ್ದಾರೆ.

ಅವರು ಮುಂಡಗೋಡಿನ ಚವಡಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರವಳ್ಳಿ ಗ್ರಾಮದ ಪ್ರತಿಭೆ. ಕೃಷಿಕ ಎನ್.ವಿ.ಸ್ಯಾಮುವೆಲ್ ಹಾಗೂ ಸುಜಾ ದಂಪತಿಯ ಪುತ್ರಿ. ತಾಲ್ಲೂಕಿನ ಕರಗಿನಕೊಪ್ಪದ ಲೊಯೋಲಾ ಶಾಲೆ, ಮೂಡುಬಿದಿರೆಯ ಆಳ್ವಾಸ್ ಕಾಲೇಜು ಹಾಗೂ ಕೇರಳದ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದಿದ್ದಾರೆ.



ಎನ್.ಎಸ್.ಸಿಮಿ

‘ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವಾಗಲೇ ಸಿಮಿ ಬರಿಗಾಲಲ್ಲಿ ಓಡಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಳು. ಅಂತರರಾಷ್ಟ್ರೀಯ ಮಟ್ಟದಲ್ಲಿ ಅವಳು ಆಡುವಂತೆ ತರಬೇತಿ ಕೊಡಿಸಬೇಕು ಎಂದು ಆಗಲೇ ನಿರ್ಧರಿಸಿದ್ದೆ. ಭಾರತಕ್ಕೆ ಪದಕ ಗೆಲ್ಲಬೇಕೆಂಬ ಮಹದಾಸೆ ಇದೆ. ಈಗ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದು ಉತ್ತಮ ಸಾಧನೆ ಮಾಡುವ ವಿಶ್ವಾಸವಿದೆ’ ಎಂದು ಸಿಮಿ ತಂದೆ ಎನ್.ವಿ.ಸ್ಯಾಮುವೆಲ್ ಮಗಳ ಬಗ್ಗೆ ಸಂತಸ ಹಂಚಿಕೊಂಡರು.